
ಗೌರಿ ಲಂಕೇಶರ

ಲಂಕೇಶ್

ಜನವರಿ 24, 2007 ಬೆಲೆ ರೂ. 10/- ◆ ರಂಜನೆ ◆ ಬೋಧನೆ ◆ ಪ್ರಚೋದನೆ



'ಮೋಹಿನಿ' ಶೋಭಾ ಡ್ಡಿಯೇ 'ಭಸ್ಮಾಸುರ'!

ಸಂ.ಕ. 50 ಕೋಟಿ ಆಸ್ತಿ ಲೂಟಿ

ಾಲಗಂಗಾಧರಸ್ವಾಮಿ ಬಗಲಲ್ಲೊಬ್ಬ ವಿಕೃತಕಾಮಿ

ಾವೇರಿ: ಸಾಲಿಮರನ ಖೋಟಾನೋಟಿನ ದಂಧೆ!

ೃಂಗೇರಿ: ಜೀವರಾಜ್ ಸಂಬಂಧಿಗೆ ಶೈಲಾ ಬಲಿ



ಮುಲ್ಕಿ ರಫೀಕ್‌ಗೆ 'ಚಡ್ಡಿ' ಪೊಲೀಸರ ಗುಂಡೇಟು

ಪೆಟ್ರೋಲ್ ಬೆಲೆ- ದೇವರು ವರ ಕೊಟ್ಟರೂ ಪೂಜಾರಿ ಏಕೆ ವರ ಕೊಡುವುದಿಲ್ಲ?

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಯುತ್ತಾ ಸಾಗಿದೆ. ಹೋದ ತಿಂಗಳು ಬ್ಯಾರೆಲ್ ಒಂದಕ್ಕೆ 70 ಡಾಲರ್ ಇದ್ದ ದರ ಈಗ ಕೇವಲ 51 ಡಾಲರ್‌ಗಿಳಿದಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಜಾಸ್ತಿಯಾಗುತ್ತಿದೆ ಎಂಬ ನೆಪ ಮಾಡಿಯೇ ಕೇಂದ್ರದಲ್ಲಿ ಯು.ಪಿ.ಎ. ಸರ್ಕಾರ ಅಧಿಕಾರಕ್ಕೆ ಬಂದಮೇಲೆ ದೇಶದಲ್ಲಿ ಕನಿಷ್ಠ ಐದು ಬಾರಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಸಿತ್ತು. ಈ ದೇಶದಲ್ಲಿ ನಾವು ಬಳಸುವ ತೈಲದ ಶೇ. 75ರಷ್ಟನ್ನು ಆಮದು ಮಾಡಿಕೊಳ್ಳುತ್ತೇವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ 50 ಡಾಲರ್ ಇದ್ದದ್ದು 80 ಡಾಲರ್‌ಗಳಷ್ಟಾಗಿತ್ತು. ಹೀಗಾಗಿ ಅನಿವಾರ್ಯವಾಗಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಿಸಲೇ ಬೇಕಾಗಿದೆ ಎಂಬುದು ಆಗ ಸರ್ಕಾರದ ವಾದವಾಗಿತ್ತು. ಆದರೆ ಆ ವಾದದಲ್ಲಿ ಸಾಕಷ್ಟು ಸುಳ್ಳಿತ್ತು. ಏಕೆಂದರೆ ಗ್ರಾಹಕ ಕೊಡುತ್ತಿದ್ದ ಬೆಲೆಯಲ್ಲಿ ಶೇ.60 ರಷ್ಟು ಭಾಗ ಹೋಗುತ್ತಿದ್ದದ್ದು ಸರ್ಕಾರದ ವಿವಿಧ ಬಗೆಯ ತೆರಿಗೆಗಳಿಗೇ ವಿನಃ ಕಚ್ಚಾತೈಲಕ್ಕೂ ಅಲ್ಲ, ಅದರ ಪರಿಷ್ಕರಣೆಯ ವೆಚ್ಚಗಳಿಗೂ ಅಲ್ಲ. ಆಗಲೂ ಸರ್ಕಾರ ತೆರಿಗೆಗಳನ್ನು ಕಡಿಮೆ ಮಾಡಿದ್ದರೆ 25 ರೂಪಾಯಿಯಷ್ಟಿದ್ದ ಪೆಟ್ರೋಲಿನ ಬೆಲೆಯನ್ನು 55 ರೂಪಾಯಿಗಳಿಗೆ ಏರಿಸುವ ಅಗತ್ಯವಿರಲಿಲ್ಲ.



ಇರಲಿ ಸದ್ಯಕ್ಕೆ ಸರ್ಕಾರದ ವಾದವನ್ನೇ ಒಪ್ಪಿಕೊಳ್ಳೋಣ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಬ್ಯಾರೆಲ್‌ಗೆ 55 ಡಾಲರ್ ಇದ್ದಾಗ ಭಾರತದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 25 ರೂಪಾಯಿ ಇತ್ತು. ಅದು ಬ್ಯಾರೆಲ್‌ಗೆ 80 ಡಾಲರಷ್ಟಾದಾಗ ಪೆಟ್ರೋಲ್ ಬೆಲೆಯನ್ನು ಸರ್ಕಾರ ಅನಿವಾರ್ಯವಾಗಿ ಲೀಟರ್‌ಗೆ 55 ರೂಪಾಯಿಗಳಿಗೇರಿಸಿತು ಸರಿ.

ಆದರೆ ಈಗ ಕಳೆದ ಒಂದು ತಿಂಗಳಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಕುಸಿಯುತ್ತಾ ಬರುತ್ತಿದ್ದು ಈಗ ಬ್ಯಾರೆಲ್‌ಗೆ ಕೇವಲ 55 ಡಾಲರ್‌ಗೆ ಇಳಿದಿದೆ. ಅಂದರೆ 2004ರಲ್ಲಿ ಯು.ಪಿ.ಎ. ಸರ್ಕಾರಕ್ಕೆ ಬಂದಾಗ ಎಷ್ಟು ಬೆಲೆ ಇತ್ತೋ ಅದೇ ಬೆಲೆಗೆ ಬಂದು ನಿಂತಿದೆ. ಹಾಗಿದ್ದಲ್ಲಿ ಪೆಟ್ರೋಲ್ ಬೆಲೆಯೂ ಲೀಟರ್‌ಗೆ 25 ರೂಪಾಯಿಯಷ್ಟಕ್ಕೆ ಇಳಿಯಬೇಕಲ್ಲವೆ? ಹಾಗಾದರೆ ಪೆಟ್ರೋಲ್ ಬೆಲೆ ಏಕೆ ಇಳಿಯುತ್ತಿಲ್ಲ? ಇಳಿಸಬೇಕೆಂದು ಎಡಪಕ್ಷಗಳು ಒಳಗೊಂಡಂತೆ ಯಾವ ರಾಜಕೀಯ ಪಕ್ಷಗಳು ಧ್ವನಿ ಎತ್ತುತ್ತಿಲ್ಲವೇಕೆ? ಕಚ್ಚಾತೈಲದ ಬೆಲೆಯಲ್ಲಿ ಶೇ.40ರಷ್ಟು ಇಳಿಕೆಯಾಗಿದ್ದರೂ ಸರ್ಕಾರ ಮಾತ್ರ ಕೇವಲ ಒಂದು ಅಥವಾ ಎರಡು ರುಪಾಯಿಗಳಷ್ಟು ಮಾತ್ರ ಇಳಿಸಲು ಸಾಧ್ಯವೆಂದು ಹೇಳುತ್ತಿರುವುದೇಕೆ? ಅದೂ ಕೂಡಾ ಮುಂದಿನ ತಿಂಗಳ ನಂತರ..

ಕಾರಣವಿಷ್ಟೆ.. ಈಗ ತೈಲ ವಿತರಣೆಯಲ್ಲಿ ಖಾಸಗೀ ಕಂಪನಿಗಳದು ಅಂದರೆ ಶೆಲ್, ರಿಲಯನ್ಸ್ ಕಂಪನಿಗಳದ್ದೂ ದೊಡ್ಡ ಪಾಲಿದೆ. ಬೆಲೆ ಕಡಿಮೆ ಆದರೆ ಅವರ ಲಾಭದ ದರವೂ ಕಡಿಮೆಯಾಗುತ್ತದೆ. ಏಕೆಂದರೆ ಅವರಲ್ಲಿ ಕೆಲವು ಖಾಸಗಿ ಉದ್ದಿಮೆಗಳು ಕಡಿಮೆ ಬೆಲೆಯಲ್ಲೇ ಕಚ್ಚಾ ತೈಲವನ್ನು ಆಮದು ಮಾಡಿಕೊಂಡು ದೇಶದೊಳಗಡೆ ಹಳೇ ರೇಟಿಗೆ ಮಾರುತ್ತಾ ಕೋಟಿ ಕೋಟಿ ಲಾಭ ಮಾಡುತ್ತಿವೆ..ಆ ಲಾಭದಲ್ಲಿ ಎಲ್ಲಾ ಪಕ್ಷಗಳು ಪಾಲುದಾರರೇ ಆಗಿದ್ದಾರೆ ಎನ್ನುವುದೇ ಅದರ ಹಿಂದಿರುವ ಕಾರಣ..!!!

ಹಳ್ಳಿಹಳ್ಳಿಗೆ ಬಿಪಿಒ-ನೀಡಿಳಿಯುದ ಗಂಟಲೊಳ್ ಕಡುಬು!

ಚಾರ್ವಾಕ

- ಶಿವಸುಂದರ್-

ಕರ್ನಾಟಕದಲ್ಲಿ ಮಣ್ಣಿನ ಮಕ್ಕಳ ಮತ್ತು ಮೊಮ್ಮಕ್ಕಳ ದರ್ಬಾರು ಪ್ರಾರಂಭವಾದ ಮೇಲೆ ರೈತರು ಗಾಬರಿಯಾಗಲು ಪ್ರಾರಂಭಿಸಿದ್ದಾರೆ. ಕರ್ನಾಟಕದ ರೈತ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸಕ್ಕೆ ಪ್ರಾಥಮಿಕ ಶಾಲೆಯನ್ನು, ಅದಕ್ಕೆ ಟೀಚರ್‌ಗಳನ್ನು ನೇಮಿಸಿ, ಬಡ ರೈತ ಮಕ್ಕಳಿಗೆ ಉನ್ನತ ಶಿಕ್ಷಣದಲ್ಲಿ ಅವಕಾಶ ಸಿಗುವುದನ್ನು ಖಾತರಿಗೊಳಿಸಲು ಗ್ರಾಮೀಣ ಕೃಪಾಂಕ ನೀಡಿ ಎಂದು ಆಗ್ರಹಿಸುತ್ತಿದ್ದ ರೈತರಿಗೆ ಕುಮಾರಸ್ವಾಮಿ ಐ.ಟಿ. ಶಾಕ್ ನೀಡಿದ್ದಾರೆ. ಹಳ್ಳಿ ಅಭಿವೃದ್ಧಿಯಾಗಬೇಕು ಮತ್ತು ರೈತ ಮಕ್ಕಳಿಗೆ ಕೆಲಸ ಸಿಗಬೇಕು ಎಂಬ ಮಹದಾಶಯದಿಂದ ಮುಖ್ಯಮಂತ್ರಿಗಳು ಗ್ರಾಮೀಣ ಪ್ರದೇಶದಲ್ಲಿ ಬಿಪಿಒ ಪ್ರಾರಂಭಿಸುತ್ತಾರಂತೆ. ಇದರಿಂದ ಗ್ರಾಮೀಣ ಯುವಕರಿಗೆ ಕೆಲಸ ಸಿಗುತ್ತದಂತೆ..! ಜನರ ಮುಗ್ಧತೆಯನ್ನು ಇದಕ್ಕಿಂತ ಕ್ರೂರವಾಗಿ ದುರುಪಯೋಗಪಡಿಸಿಕೊಳ್ಳಲು ಸಾಧ್ಯವಿಲ್ಲ. ಬಿಪಿಒಗಳು ಭಾರತಕ್ಕೆ ಬರುತ್ತಿರುವುದೇ ಇಲ್ಲಿನ ನಗರದಲ್ಲಿ ಅದೂ ಬೆಂಗಳೂರಿನಂಥ ನಗರಗಳಲ್ಲಿ ಇಂಗ್ಲಿಷ್ ಬಲ್ಲ ಮತ್ತು ವಿದೇಶೀಯರಿಗೆ ಅರ್ಥವಾಗಬಲ್ಲಂತಹ ಇಂಗ್ಲಿಷನ್ನು ಮಾತಾಡಬಲ್ಲಂಥ ಯುವಕ-ಯುವತಿಯರು ಇರುತ್ತಾರೆ ಎಂದು. ನಮ್ಮ ಗ್ರಾಮೀಣ ಪ್ರದೇಶದಲ್ಲಿ ಅದೂ ರಾಯಚೂರು, ಚಿಕ್ಕಮಗಳೂರು, ಬಾಗಲಕೋಟೆಯಂಥ ಕಡೆ ಸಾಕಷ್ಟು ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಯೇ ಇಲ್ಲ. ಇದ್ದರೂ ಟೀಚರ್‌ಗಳೆ ಬರುವುದಿಲ್ಲ. ಅಲ್ಲಿ ಇಂಗ್ಲಿಷ್ ಇರಲಿ ಕನ್ನಡ ಕಲಿಸುವುದೇ ಕಷ್ಟಕರ. ಪರಿಸ್ಥಿತಿ ಹೀಗಿರುವಾಗ ಅಲ್ಲಿ ಬಿಪಿಒ ಪ್ರಾರಂಭಿಸಿದರೆ ಕುಮಾರಸ್ವಾಮಿ ಮಾತ್ರ ಫೂಲ್ ಮಾಡಬೇಕಷ್ಟೆ. ಅದರ ಅರ್ಥ ಕುಮಾರಸ್ವಾಮಿ ಸುಳ್ಳು ಹೇಳುತ್ತಿದ್ದಾರೆಯೇ?

ಖಂಡಿತಾ ಇಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಬಿಪಿಒ ಪ್ರಾರಂಭಿಸುವವರಿಗೆ ಸಾಕಷ್ಟು ರಿಯಾಯಿತಿಗಳನ್ನು ಕೊಟ್ಟೂ ಬಿಪಿಒಗಳನ್ನು ಪ್ರಾರಂಭಿಸುತ್ತಾರೆ. ಆದರೆ ಅದು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಾತ್ರ!



ಸತ್ಯದ ಕೂಗಿಗೆ ಮೆರಿಟ್ಟೇಕಿರುವುದಿಲ್ಲ, ಯುವರ್ ಆನರ್!

ಅಫ್ಜಲ್ ಗುರುವಿನ ಕೇಸಿನಲ್ಲಿ ಮೆರಿಟ್ಟಿಲ್ಲವೆಂದು ಸುಪ್ರೀಂ ಕೋರ್ಟು ಆತನ ನೇಣು ಶಿಕ್ಷೆಯ ಮರುಪರಿಶೀಲನಾ ಅರ್ಜಿಯನ್ನು ವಜಾಗೊಳಿಸಿ ನೇಣು ಶಿಕ್ಷೆಯನ್ನು ಖಾಯಂಗೊಳಿಸಿದೆ. ಭಾರತದ ನ್ಯಾಯಸಂಹಿತೆಯಲ್ಲಿ ಅತ್ಯಂತ ಅಪರೂಪದ ಕೇಸಿನಲ್ಲಿ ಮತ್ತು ಅಪರಾಧ ನಿಸ್ಸಂಶಯವಾಗಿ ಸಾಬೀತಾದರೆ ಮಾತ್ರ ನೇಣು ಶಿಕ್ಷೆ ನೀಡಬೇಕು. ಆದರೆ ಅಫ್ಜಲ್ ಗುರುವಿನ ಪ್ರಕರಣದಲ್ಲಿ ಅಪರಾಧ ಸಾಬೀತಾಗುವುದಿರಲಿ ವಿಚಾರಣೆಯೇ ನ್ಯಾಯಸಮ್ಮತವಾಗಿ ನಡೆಯಲಿಲ್ಲ. ಇಷ್ಟಾಗಿ ಆತನ ಮೇಲೆ ಇದ್ದ ಕೇಸಾದರೂ ಏನು? ಪಾರ್ಲಿಮೆಂಟಿನ ಮೇಲೆ ದಾಳಿ ಮಾಡಿದ ಕೇಸಲ್ಲ. ಅದನ್ನು ಮಾಡಿದವರಿಗೆ ಸಹಕಾರ ನೀಡಿದ ಎನ್ನುವ ಕೇಸು. ಅದೂ ಸಹಾ ಅನುಮಾನಕ್ಕೆಡೆಯಿಲ್ಲದಂತೆ ಸಾಬೀತಾಗಿಲ್ಲ. ಒಂದು ವೇಳೆ ಉಗ್ರಗಾಮಿಗಳಿಗೆ ಸಹಕರಿಸಿದ್ದಕ್ಕೆ ಶಿಕ್ಷೆ ನೀಡಬೇಕೆಂದಿದ್ದರೆ ಅದೂ ಮರಣದಂಡನೆಯಾಗುವುದು ತರವಲ್ಲ. ಏಕೆಂದರೆ ಗಾಂಧಿಯನ್ನು ಕೊಲ್ಲಲು ಎಲ್ಲಾ ರೀತಿ ಸಹಕಾರ ಮಾಡಿದ್ದಕ್ಕೆ ಗೋಳ್ವಾಲ್‌ಕರ್‌ಗೆ ಮರಣದಂಡನೆಯಿರಲಿ, ಏನೂ ಶಿಕ್ಷೆಯೇ ಆಗಲಿಲ್ಲವಲ್ಲ. ಹಾಗಿದ್ದಲ್ಲಿ ಅಫ್ಜಲ್ ಗುರುವಿನ ಬಗ್ಗೆ ಮಾತ್ರ ಈ ತಾರತಮ್ಯ ಏಕೆ ಯುವರ್ ಆನರ್..! ಏಕೆ ಈ ಕೇಸಿನಲ್ಲಿ ಕಣ್ಣಿಗೆ ರಾಚುವಂಥ ಮೆರಿಟ್ಟಿದ್ದರೂ ನಿಮ್ಮ ಕಣ್ಣಿಗೆ ಕಾಣಲಿಲ್ಲ, ಕೇಳಲಿಲ್ಲ ಯುವರ್ ಆನರ್. ನಿಮ್ಮ ಕಿವಿ ಆರೆಸ್ಸೆಸ್ ಉಗ್ರಗಾಮಿಗಳ ಪ್ರಚಾರದಲ್ಲಿ ಕಿವುಡಾಯಿತೇ?

ನಗರಕ್ಕೆ ವೋಲ್ವೋ ಬಸ್-ಸಾಮಾನ್ಯ ಪ್ರಯಾಣಿಕ ಸತ್ತ!

ಬೆಂಗಳೂರು ನಗರ ಸಾರಿಗೆಗೆ ಇನ್ನು ಮುಂದೆ ಇನ್ನೂ ಸಾವಿರ ವೋಲ್ವೋಬಸ್‌ಗಳನ್ನು ಬಿಡುತ್ತಾರಂತೆ! ಹಾಗಿದ್ದಲ್ಲಿ ಮಿಕ್ಕ 4000 ಬಸ್‌ಗಳನ್ನು ಏನು ಮಾಡುತ್ತಾರಂತೆ. ಏಕೆಂದರೆ ಈಗಾಗಲೇ ಇರುವ ಬಸ್‌ಗಳು, ಕಾರುಗಳು, ಆಟೋಗಳು ಓಡಾಡಲು ಆಗದಷ್ಟು ಬೆಂಗಳೂರಿನ ರಸ್ತೆಗಳು ಇಕ್ಕಟ್ಟಾಗಿವೆ. ಇದು ಬಗೆಹರಿಯಬೇಕೆಂದರೆ ಒಂದೋ ಕಾರಿನಂಥ ಖಾಸಗಿ ವಾಹನಗಳು ಕಡಿಮೆಯಾಗಬೇಕು ಅಥವಾ ಮೆಟ್ರೋ ರೈಲಿನಂಥ ಸಾಮೂಹಿಕ ವಾಹನ ಸಂಚಾರ ಬರಬೇಕು. ಆದರೆ ಇವೆರಡೂ ಆಗುತ್ತಿಲ್ಲ, ಬದಲಿಗೆ ಸಾಮಾನ್ಯರು ಬಳಸುತ್ತಿದ್ದ ಆಟೋಗಳಿಗೆ ನಿರ್ಬಂಧ ವಿಧಿಸುತ್ತಾ ಆಟೋ ಚಾಲಕರಿಗೂ ಅದರಲ್ಲಿ ಪ್ರಯಾಣಿಸುತ್ತಿದ್ದ ಮಧ್ಯಮವರ್ಗದವರಿಗೂ ಸಂಕಷ್ಟಗಳನ್ನೇ ಹೇರುವಂತ ಪ್ರಯತ್ನ ನಡೆಯುತ್ತಿದೆ. ಈಗ ಸಾವಿರ ವೋಲ್ವೊ ಬಸ್‌ಗಳನ್ನು ಬಿಡುವ ಪ್ರಯತ್ನ. ರಸ್ತೆಯಲ್ಲಿ ಈ ಮಟ್ಟಿಗೆ ಬಸ್ ಸಾಂದ್ರತೆ ಹೆಚ್ಚಾಗಬೇಕೆಂದರೆ ಒಂದು ಸಾವಿರ ಹೊಸ ವೋಲ್ವೋ ಬಸ್‌ಗಳಿಗೆ ಪ್ರತಿಯಾಗಿ ಒಂದು ಸಾವಿರ ಸಾಮಾನ್ಯ ಬಸ್ ಹಿಂತೆಗೆದುಕೊಳ್ಳಲೇ ಬೇಕು. ಇದರಿಂದಾಗುವುದೇನು? ಮೇಲುಮಧ್ಯಮ ವರ್ಗದವರ ಪ್ರಯಾಣ ಸಲೀಸಾಗುತ್ತದೆ. ಆದರೆ ಸಾಮಾನ್ಯ ಬಸ್ ಸಿಗದೇ ಮಧ್ಯಮ ವರ್ಗದವರೂ ಇದ್ದ ಹಣವನ್ನೆಲ್ಲಾ ವೋಲ್ವಾಗೆ ಖರ್ಚು ಮಾಡಲೇ ಬೇಕು. ಇಲ್ಲವೇ ನಡೆದುಹೋಗಲೇಬೇಕು. ಹೀಗಾಗಿ ಸಾಮಾನ್ಯ ಜನರ ಮಟ್ಟಿಗೆ ಸಾವಿರ ಹೊಸ ವೋಲ್ವೊ ಬಸ್ ಎಂದರೆ ಸಂತೋಷದ ಸಂಗತಿಯೇನಲ್ಲ!




No Comment

"ಶೋಭಾ ಕರಂದ್ಲಾಜೆಗೆ ಮಂತ್ರಿ ಪದ... ಅಂದರೆ ಬಿಜೆಪಿಯಲ್ಲಿ ಯಾವ ಮಹಿಳೆಗೂ... ಸ್ಥಾನ ಬೇಡ- ಯದಿಯೂರಪ್ಪ ಪಟ್ಟು"

-ಪತ್ರಿಕಾ...


"ಹಣಕಾಸು ಇಲಾಖೆಯಲ್ಲಿ ಯಾವುದೇ ... ಹಣ ಬಿಡುಗಡೆ ಮಾಡಿಸುವುದು ಕಷ್ಟ"

-ಹೆಚ್.ಡಿ.ಕುಮಾರಸ್ವಾಮಿ



"ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುವ ಅಧಿಕಾರವನ್ನು ಸರ್ಕಾರ ಲೋಕಾಯುಕ್ತಕ್ಕೆ ನೀಡಿಲ್ಲ"

-ಸಂತೋಷ್ ಹೆಗಡೆ, ಲೋಕಾಯುಕ್ತರು



"ಇದು ಮಾರ್ಕೆಟ್ ಎಕ... ಕಮ್ಯಾಂಡ್ ಎಕಾನಮಿಯ... ಹೀಗಾಗಿ ಉದ್ಯಮಿಗಳು ... ಕಡೆ ಜಮೀನನ್ನು ಕೊಡಲೇ...

-ಬುದ್ಧದೇವ ಭಟ್ಟಾಚಾ...

"ಮಹಿಳೆಯರಿಗೂ ಆಕಾಂಕ್ಷೆಗಳಿರುತ್ತವೆ. ಹಾಗ... ಏಕೆ ಪುರುಷರಿಗೆ ಪರ್ದ ವಿಧಿಸಲಿಲ್ಲ"

-ತಸ್ಲಿಮಾ ನ...

ನಂಬಿದ್ರೆ ನಂಬಿ ಬಿಟ್ರೆ ಬಿಡಿ



"ಕರ್ನಾಟಕದಲ್ಲಿ SEZ ... ವಶಪಡಿಸಿಕೊಳ್ಳಲಿರುವ 2... ಎಕರೆ ಜಮೀನಿನಲ್ಲಿ 60-... ಎಕರೆಯಷ್ಟು ಜಮೀನು ... ಫಲವತ್ತಾದ ಜಮೀನು"

- ಕಟ್ಟಾ ಸುಬ್ರಹ್ಮಣ್ಯ...

"ಟಿಬೆಟ್ ಬಗ್ಗೆ ಚೀನಾ ನಿಲುವು ಬದಲಾ...

-ದಲೈಲಾಮಾ



"ಸದ್ದಾಂಗೆ ಗಲ್ಲು ಶಿಕ್ಷೆ ರದ್ದು ಮಾಡಬೇಕೆಂದು ಬ್ರಿಟನ್ ವಿನಂತಿಸಿತ್ತು"

-ಬ್ರಿಟನ್ ವಿದೇಶಾಂಗ ಸಚಿವೆ, ಬೆಕೆಟ್

"ರೆಸಾರ್ಟ್ ಪ್ರವಾಸದಲ್ಲಿ ಭಾಗವಹಿಸಿದ್ದ ಬಿಜೆಪಿ ಶಾಸಕರ ವಿರುದ್ಧ ಕ್ರ...

-ಸದಾನಂದ ಗೌಡ, ಬಿಜೆಪಿ...

ವಾರದ ಆಗ್ರಹ

"ಊರಿಗೆ ಸಾರಾಯಿ ಮಾತ್ರ ಸರಿಯಾದ ಸ... ಬರುತ್ತೆ, ಅದೇರೀತಿ ಔಷಧಿಗಳು ಏಕೆ ಬರು...

-ಆರೋಗ್ಯ ಸಚಿವರಿಗೆ ಗ್ರಾ... ಮಹಿಳಾ ಒಕ್ಕೂಟ...

ವಾರದ ವಿಷಾದ

ನೌಕರನೊಬ್ಬ ವಜಾ ಅವಧಿಯಲ್ಲಿ ಕೃಷಿ... ಒಳಗೊಂಡಂತೆ ಮಾಡುವ ಯಾವುದೇ ಸ್ವ ಉ... ಲಾಭದಾಯಕ ಉದ್ಯೋಗದ ವ್ಯಾಪ್ತಿಗೆ ಬ...

-ಸುಪ್ರೀಂ ಕೋರ್ಟಿನ ತೀರ್ಪು...

ವಾರದ ವಿವೇಕ



"ಕರ್ತವ್ಯ, ಪಾತಿವ್ರತ... ಶೀಲ ಎಂಬ ಪದಕ್ಕೆ ... ಯಾವುದೇ ಅರ್ಥವಿ... ಅದು ಪುರುಷ ಹಾಗ... ಮಹಿಳೆ ಇಬ್ಬರಿಗೂ ಅನ್ವಯಿಸುತ್ತದೆ"

-ಸುಶ್ಮಿತಾ

ವಾರದ ಎಚ್ಚರಿಕೆ


"ಭೂಗೋಳದ ನಭೋಮಂಡಲದಲ್ಲಿ ಕ... ಲಕ್ಷ ವರ್ಷಗಳಲ್ಲಿ ಇಲ್ಲದಿದ್ದಷ್ಟು ಕಾರ್ಬ... ಆಕ್ಸೈಡ್ ಅನ್ನು ಮನುಕುಲ ಕಳೆದ 50 ವ... ಸೇರಿಸಿದೆ. ಹೀಗೆ ಮುಂದುವರೆದರೆ ಈ ಶತ... ಕೊನೆಯತನಕ ಈ ನಾಗರಿಕತೆ ಮುಂದುವ... ಅವಕಾಶ ಇರುವುದು ಶೇ.50 ರಷ್ಟು ಮಾ...

-ಮಾರ್ಟಿನ್ ರೀಸ್, ಖ್ಯಾತ...

'ನನ್ನ ಕಡಿದು ತುಂಡರಿಸಿದರೂ ಬಿಡುವವನಲ್ಲಾ'

ಹಿಂದೊಮ್ಮೆ ಈತ ಸದೃಢ ದೇಹವನ್ನು ಹೊಂದಿದ್ದ. ...ವಂತೆ ಓಡಾಡುತ್ತಿದ್ದ, ಸ್ವಾಭಿಮಾನದ ಮತ್ತು ...ಲಂಬನೆಯ ಬದುಕು ನಡೆಸುತ್ತಿದ್ದ.


ಆದರೆ ಇವತ್ತು ಅವನ ಎರಡು ಕೈಗಳೂ ಇಲ್ಲ, ...ದು ಕಾಲೂ ಇಲ್ಲ. ಇರುವ ಒಂದು ಕಾಲಿನಿಂದ ...ಸ್ಕ್ರೂಗಳು ಹೊರಹೊಮ್ಮಿವೆ. ಅವುಗಳನ್ನು ಹೊರ ...ದ ಮತ್ತು ಒಳಗಿಂದ ಎರಡು ಸ್ಟೀಲ್ ರಾಡ್‌ಗಳು ...ಟ್ಟಿವೆ. ಆತ ತನ್ನ ಕಾಲನ್ನು ಸರಿಸಿದಾಗಲೆಲ್ಲ ಸ್ಕ್ರೂ ...ರುವ ಜಾಗಗಳಿಂದ ರಕ್ತ ಸುರಿಯುತ್ತದೆ. ...ಕಾಲಿನ ಬೆಟ್ಟುಗಳಿಗೆ ಈಗಾಗಲೇ ...ಗ್ರಿನ್ ರೋಗ ತಗುಲಿದ್ದು ಸದ್ಯದಲ್ಲೇ ...ಗಳನ್ನೂ ಕತ್ತರಿಸಿಹಾಕಬೇಕಿದೆ.



ಬಂಟಸಿಂಗ್

ಆದರೆ ಈತನ ಸ್ಥೈರ್ಯ ಮಾತ್ರ ಕುಗ್ಗಿಲ್ಲ. ...ರು ನನ್ನ ಕೈಕಾಲುಗಳನ್ನು ಕತ್ತರಿಸಿಹಾಕಿರ...ಬಹುದು. ಆದರೆ ನನ್ನ ನಿಜವಾದ ಅಸ್ತ್ರಗಳಾದ ...ನಾಲಿಗೆ, ನನ್ನ ದನಿ ಮತ್ತು ನನ್ನ ...ದ್ಧಿಯನ್ನು ಅವರಿಂದ ಕೊಲ್ಲಲಾಗಿಲ್ಲ. ...ನು ಬದುಕಿರುವವರೆಗೂ ನನ್ನ ಹೋರಾಟ...ವನ್ನು ಮುಂದುವರೆಸುತ್ತೇನೆ. ಆಗಲೇ ಸಾಕಷ್ಟು ದೈಹಿಕ ...ನೋವು ಅನುಭವಿಸಿರುವ ನನಗೆ ಈ ಹೋರಾಟದಲ್ಲಿ ...ನ್ನೂ ಸ್ವಲ್ಪ ನೋವು ಅನುಭವಿಸಿದರೆ; ಅದು ಯಾವ ...ಕ್ಕ" ಎನ್ನುತ್ತಾನೆ ಈ ಅಂಗವಿಕಲ ವೀರ.

ಇದು ಬಂಟಸಿಂಗ್ ಎಂಬ ದಲಿತನ ಕತೆ. ಆತನ ...ಪ್ರಾಪ್ತ ಮಗಳ ಮೇಲೆ ಅತ್ಯಾಚಾರವೆಸಗಿದ ಮೇಲು ...ತಿಯ ಜನರ ವಿರುದ್ಧ ಆತ ಪೊಲೀಸರಿಗೆ ದೂರು ...ಟ್ಟಿದ್ದಕ್ಕೆ ಆತನನ್ನು ಅಂಗವಿಕಲನನ್ನಾಗಿಸಿದ ಕತೆ. ಆದರೂ ...ಹೋರಾಟವನ್ನು ಮುಂದುವರೆಸುತ್ತಿರುವ, ನಮ್ಮ ...ಜಾಪ್ರಭುತ್ವದಲ್ಲಿ ದಲಿತರಿಗೆ ಇವತ್ತಿಗೂ ಏನಾಗುತ್ತಿದೆ ...ದು ಮನಮುಟ್ಟುವಂತೆ ಹೇಳುವ ನಿಜ ಜೀವನದ ...ತೆ.



...ಕೈ-ಕಾಲು ಕಳೆದುದೊಂದರೂ ಚಳವಳಿನಿರತನಾಗಿರುವ ಕ್ರಾಂತಿಕಾರಿ ಬಂಟ

ಹಲವು ವಾರಗಳ ಹಿಂದೆ ಕರ್ನಾಟಕದ ಕಂಬಾಲಪಲ್ಲಿ...ಯಲ್ಲಿ ಜೀವಂತವಾಗಿ ಸುಟ್ಟು ಕರಕಲಾದ ದಲಿತರ ಕೊಲೆ ...ರಿತಂತೆ ನ್ಯಾಯ ಸಿಗದಿದ್ದರ ಬಗ್ಗೆ ಬರೆದಿದ್ದೆ. ಹಾಗೆಯೇ ...ಕ್ಕದ ಮಹಾರಾಷ್ಟ್ರದ ಖೈರ್‌ಲಾಂಜಿಯಲ್ಲಿ ಅಲ್ಲಿನ ...ಮೇಲ್ಜಾತಿ ಭೂಮಾಲೀಕರು ಸುರೇಖಾ ಎಂಬ ದಲಿತ ...ಮಹಿಳೆ ಮತ್ತಾಕೆಯ ಮಗಳು ಪ್ರಿಯಾಂಕಾಳನ್ನು ರೇಪ್ ...ಮಾಡಿ ಕೊಂದಿದ್ದರ ಬಗ್ಗೆ; ಸುರೇಖಾಳ ಗಂಡುಮಕ್ಕಳ ...ಗವನ್ನು ಕತ್ತರಿಸಿ ಆಟವಾಡಿದ್ದರ ಬಗ್ಗೆ ಬರೆದಿದ್ದೆ. ಈಗ ...ಇರದ ಪಂಜಾಬಿನ ಬೂರ್ಜ್ ಜಬ್ಬರ ಎಂಬ ಹಳ್ಳಿಯಲ್ಲಿ ...ಸಿತ ಬಂಟಸಿಂಗನಿಗೆ ಆದದ್ದನ್ನು ಮತ್ತು ಆತ ನಡೆಸುತ್ತಿರುವ ...ಹೋರಾಟದ ಬಗ್ಗೆ ಹೇಳುತ್ತೇನೆ.

ನಮ್ಮ ದೇಶದಲ್ಲಿ ಅತಿ ಹೆಚ್ಚು ದಲಿತರನ್ನು ಹೊಂದಿರುವ ...ಜ್ಯ ಯಾವುದೆಂದರೆ ಸೌಹಾರ್ದ ಮತ್ತು ಸಮಾನತೆಯನ್ನು ...ಸಿದ ಸಂತ ಕಬೀರನ ನಾಡಾದ ಪಂಜಾಬ್. ಆದರೆ ...ಲ್ಲಿ ಇವತ್ತಿಗೂ ದಲಿತರ ಮೇಲೆ ಎಂತಹ ಶೋಷಣೆ ...ನಡೆದಿದೆ ಎಂಬುದಕ್ಕೆ ಇಲ್ಲಿನ ಕತೆಯೇ ಸಾಕ್ಷಿ.

ಬಡ ದಲಿತ ಕುಟುಂಬದಲ್ಲಿ ಹುಟ್ಟಿದ ಬಂಟನಿಗೆ ಚಿಕ್ಕವನಿದ್ದಾಗಿನಿಂದಲೂ ತನ್ನ ಸಮುದಾಯಕ್ಕೆ ಆಗುತ್ತಿರುವ ಅನ್ಯಾಯ ಕಂಡು ತಳಮಳ. ಹಸಿವು, ಕಿತ್ತು ತಿನ್ನುವ ಬಡತನ, ಪ್ರತಿನಿತ್ಯ ಶೋಷಣೆಯನ್ನು ಕಾಣುತ್ತಾ ಬೆಳೆದ ಬಂಟನಿಗೆ ಆಗ ವಯಸ್ಸು 9 ಅಥವಾ 10 ವರ್ಷವಿರಬಹುದು. ಒಮ್ಮೆ ಅವನ ಊರಿಗೆ ಕಾರ್ಮಿಕರ ಮತ್ತು ರೈತಾಪಿಗಳ ಬಗ್ಗೆ ಹಾಡುಗಳನ್ನು ಹಾಡುತ್ತಿದ್ದ ಸಂತ ರಾಮ್ ಉದಾಸಿ ಎಂಬ ಕವಿ ಬಂದ. ಆತನ ಹಾಡುಗಳನ್ನು ಕೇಳಿ ಬಂಟ ಚಕಿತನಾದ. "ಈತ ನಮ್ಮ ಬಗ್ಗೆ ಹಾಡುತ್ತಿದ್ದಾನೆ" ಎಂದೆನ್ನಿಸಿ ಆತನ ಹಿಂದೆ ಹೋದ. ಅವನ ಹಾಡುಗಳಿಗಾಗಿ ಹಪಹಪಿಸಿದ. ಸಮಾನತೆ, ಸ್ವಾಭಿಮಾನ ಮತ್ತು ಕ್ರಾಂತಿಯ ಬಗ್ಗೆ ಸಂತ ರಾಮ್ ಉದಾಸಿ ಹಾಡುತ್ತಿದ್ದ ಪದ್ಯಗಳು ಬಂಟನಿಗೆ ಹೊಸ ಜಗತ್ತನ್ನೇ ತೆರೆದಿಟ್ಟವು.

ಬಂಟನಿಗೆ 17 ವರ್ಷ ವಯಸ್ಸಾಗುವ ಹೊತ್ತಿಗೆ ಆತ ಭೂಗತರಾಗಿದ್ದ ನಕ್ಸಲೈಟ್ ವಿನೋದ್ ಮಿಶ್ರಾರವರ ಇಂಡಿಯನ್ ಪೀಪಲ್ಸ್ ಫ್ರಂಟ್ ಸೇರಿದ. 1992ರಲ್ಲಿ ಹೊರಬಂದು ಪ್ರಜಾತಾಂತ್ರಿಕವಾಗಿ ಹೋರಾಡುತ್ತಿದ್ದ ಸಿಪಿಐ (ಎಂಎಲ್) ಪಕ್ಷ ಸೇರಿದ. ಎಡಪಂಥೀಯ ಸಿದ್ಧಾಂತದಿಂದ ಪ್ರೇರೇಪಿತನಾಗಿದ್ದ ಬಂಟ ತನ್ನ ಹಳ್ಳಿಯ ಮತ್ತು ಸುತ್ತಮುತ್ತಲಿನ ಜನರನ್ನು ಮಜದೂರ್ ಮುಕ್ತಿ ಮೋರ್ಚಾಕ್ಕೆ ಸೇರಿಸಲಾರಂಭಿಸಿದ. ಕನಿಷ್ಠ ಕೂಲಿ ಮತ್ತು ಸಾಲಗಳಿಂದ ಮುಕ್ತಿ ಪಡೆಯುವ ಹೋರಾಟ ಪ್ರಾರಂಭಿಸಿದ. ಮೇಲ್ಜಾತಿಯವರ ಜಾನುವಾರುಗಳು ಕುಡಿಯುತ್ತಿದ್ದ ಕೆರೆಗಳಲ್ಲಿ ದಲಿತರ ಹಂದಿಗಳು ನೀರು ಕುಡಿಯುವ ಸವಲತ್ತಿಗಾಗಿ ಪ್ರತಿಭಟಿಸಿದ. ರೇಷನ್ ಕಾರ್ಡ್ ಅಂಗಡಿ ನಡೆಸುತ್ತಿದ್ದ ಮೇಲ್ಜಾತಿಯ ಅಮಿರ್ಕ್ ಸಿಂಗ್ ಎಂಬುವನ ಭ್ರಷ್ಟಾಚಾರದ ವಿರುದ್ಧ ಜನರನ್ನು ಸಂಘಟಿಸಿ ಅವರ ಬೆರಳಚ್ಚನ್ನು ಪಡೆದು ಆತನ ಅಂಗಡಿಗೆ ಬೀಗ ಬೀಳುವಂತೆ ನೋಡಿಕೊಂಡ. ಮೇಲ್ಜಾತಿಯವರ ಮರ್ಜಿಯಲ್ಲಿ ಬದುಕಬಾರದೆಂದು ತಾನೂ ಹಂದಿ, ಕುರಿಗಳನ್ನು ಸಾಕಿದ. ತನ್ನಂತೆಯೇ ಇತರರೂ ಸ್ವಾವಲಂಬಿಯಾಗುವಂತೆ ಮಾಡಿದ. ಸಮಯ ಸಿಕ್ಕಾಗಲೆಲ್ಲಾ ತನ್ನ ಗುರು ಸಂತ ರಾಮ್ ಉದಾಸಿಯಿಂದ ಕಲಿತಿದ್ದ ಹಾಡುಗಳನ್ನು ಹಾಡುತ್ತಾ ದಲಿತರಲ್ಲಿ, ಶೋಷಿತ ವರ್ಗಗಳಲ್ಲಿ ಜಾಗೃತಿ ಮೂಡಿಸುತ್ತಿದ್ದ. ಇವನ ಈ ಎಲ್ಲಾ ಚಟುವಟಿಕೆಗಳಿಂದ ರೋಸತ್ತ ಮೇಲ್ಜಾತಿಯವರು (ಪಂಜಾಬಿನ ಜಾಟ್ ಜಾತಿ) ಇವನನ್ನು ಮಟ್ಟ ಹಾಕಲು ತೀರ್ಮಾನಿಸಿದರು.

ಅದರಂತೆ ಆತನ ಮಗಳು ಬಲ್ವತ್ ಕೌರ್‌ಳ ಮೇಲೆ ಮಂದಿರ್ ಸಿಂಗ್ ಎಂಬ ಜಾಟ್ ಹುಡುಗ ತನ್ನ ಇಬ್ಬರು ಮಿತ್ರರ ಜೊತೆಗೂಡಿ (ವಿಪರ್ಯಾಸವೆಂದರೆ ಈ ಮಿತ್ರರಿಬ್ಬರೂ ಬಂಟ್‌ನ ದಲಿತ ಮಜ್ಹಬಿ ಜಾತಿಗೆ ಸೇರಿದ್ದವರು) ಅತ್ಯಾಚಾರವೆಸಗಿದರು.

ಪುರಾತನ ಕಾಲದಿಂದಲೂ ದಲಿತರು, ಮಹಿಳೆಯರು ಚಕಾರವೆತ್ತದಂತೆ ನೋಡಿಕೊಳ್ಳಲು ಅವರ ಮೇಲೆ ದೈಹಿಕ ಹಿಂಸೆ ಎಸಗುತ್ತಾ ಬರಲಾಗಿದೆ. ದೇಹದ ಮೇಲೆ ಅತಿಕ್ರಮಣ ಎಸಗುವುದರಿಂದ ಅವರ ಮನಸ್ಸಿನ ಮೇಲೆ, ಸ್ವಾಭಿಮಾನದ ಮೇಲೆ ಬಗಿಯಾದ ಹೊಡೆತ ಕೊಟ್ಟು ಅವರ ಬಾಯನ್ನು ಮುಚ್ಚಿಸುವ ತರ್ಕ ಇದು.

ಆದರೆ ಬಂಟಸಿಂಗ್ ತನ್ನ ಮಗಳ ಮೇಲೆ ಆದ ಅತ್ಯಾಚಾರವನ್ನು (ಆಗ ಆಕೆಗಿನ್ನೂ ಹದಿನಾರು ವರ್ಷ ವಯಸ್ಸು) ಕಂಡು ಬಾಯಿಮುಚ್ಚಿಕೊಂಡಿರಲಿಲ್ಲ, ಬದಲಾಗಿ ಆಕೆಯನ್ನು ಸುರಕ್ಷಿತ ಜಾಗಕ್ಕೆ ಕಳುಹಿಸಿ ಪೊಲೀಸರಿಗೆ ದೂರು ಕೊಟ್ಟ. ದೂರನ್ನು ಹಿಂದೆ ಪಡೆಯುವಂತೆ, ಇನ್ನು ಮುಂದೆ ಮೇಲ್ಜಾತಿಗಳ ವಿರುದ್ಧ ಚಕಾರವೆತ್ತದಂತೆ ಬಂಟನಿಗೆ ಆಮಿಷಗಳನ್ನು ಒಡ್ಡಲಾಯಿತು. ಎರಡು ಲಕ್ಷ ರೂಪಾಯಿ ಕೊಡುತ್ತೇವೆ ಅಂದರು. ನಾಲ್ಕು ಲಕ್ಷ ಕೊಡುತ್ತೇವೆ ಅಂದರು. ಕೊನೆಗೆ ಹತ್ತು ಲಕ್ಷಕ್ಕೆ ಆಮಿಷವನ್ನು ಏರಿಸಿದರು. ಇದರಿಂದ ಬಂಟನ ಕೋಪ ಏರುತ್ತಾ ಹೋಯಿತು. "ನನ್ನ ಮಗಳ ಮಾನಕ್ಕೆ ಬೆಲೆ ಕಟ್ಟಬೇಡಿ ನೀವು" ಅಂದ. ಆಗ ಮಗಳ ಮೇಲೆ ಒತ್ತಡ ತಂದರು. "ನಿಮ್ಮಪ್ಪ ನಿನ್ನ ಮಾನವನ್ನು ಹರಾಜು ಮಾಡುತ್ತಾನೆ. ನಾಳೆ ನಿನ್ನ ಯಾರು ಮದುವೆಯಾಗುತ್ತಾರೆ" ಎಂದರು. ಆಗ ಆಕೆ "ನನ್ನ ಅಪ್ಪನ ಹೋರಾಟಕ್ಕೆ ದ್ರೋಹ

ಕಂಡಹಾಗೆ



ಬಗೆಯಲಾರೆ. ಆತ ಹೇಳುತ್ತಿರುವುದು ಸರಿ" ಎಂದು ಧೈರ್ಯವಾಗಿ ನಿಂತಳು. ಬಂಟಸಿಂಗ್ ತನ್ನ ಮಗಳ ಮೇಲೆ ಅತ್ಯಾಚಾರವೆಸಗಿದವರೆಲ್ಲ ಬಂಧನಕ್ಕೆ ಒಳಗಾಗುವಂತೆ ನೋಡಿಕೊಂಡ. ನ್ಯಾಯಾಲಯದಲ್ಲಿ ಅವರಿಗೆ ಶಿಕ್ಷೆ ಆಗುವಂತೆ ಮಾಡಿದ.

ಇದು ಮೇಲ್ಜಾತಿ ಜಾಟರಿಗೆ ಸಹಿಸಲಾಗಲಿಲ್ಲ. ಬಂಟನನ್ನು ಎಚ್ಚರಿಸಿದರು, ಬೆದರಿಸಿದರು, ಎರಡು ಬಾರಿ ಹೊಡೆದರು. ಆದರೆ ಇದ್ಯಾವುದಕ್ಕೂ ಬಂಟ ಜಗ್ಗಲಿಲ್ಲ. ಆಗ ಅವನಿಗೆ ತಕ್ಕ ಶಿಕ್ಷೆ ವಿಧಿಸಲೇಬೇಕು ಎಂದು ಮೇಲ್ಜಾತಿ ಜಾಟರು ನಿರ್ಧರಿಸಿದರು. ಅದಕ್ಕೆಂದು ಆತನಿಗಾಗಿ ಒಂದು ರಾತ್ರಿ ಹತ್ತಾರು ಜನ ಕಾದು ಕೂತರು. ಪಕ್ಕದ ಊರಿನಲ್ಲಿ ಮಜದೂರ್ ಮೋರ್ಚಾದ ಸಭೆಯೊಂದನ್ನು ಮುಗಿಸಿ ತನ್ನ ಗುಡಿಸಲಿಗೆ ಹಿಂದಿರುಗುತ್ತಿದ್ದ ಬಂಟನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು. ಆ ಹಲ್ಲೆಯಲ್ಲಿ ಆತನ ದೇಹ ಎಷ್ಟು ಚಿಂದಿಯಾಗಿತ್ತೆಂದರೆ, ಅವನನ್ನು ನೋಡಿದ ಕೂಲಿ ಕಾರ್ಮಿಕನೊಬ್ಬ ಮೂರ್ಛೆ ಹೋದ. ಆದರೆ ಬಂಟ್ ಇನ್ನೂ ಎಚ್ಚರವಾಗಿಯೇ ಇದ್ದ. ತಕ್ಷಣವೇ ಅವನನ್ನು ಆಸ್ಪತ್ರೆಗೆ ಸೇರಿಸಿದರೂ ಆತನ ಎರಡೂ ಕೈಗಳನ್ನು ಮತ್ತು ಒಂದು ಕಾಲನ್ನು ಉಳಿಸಿಕೊಳ್ಳಲಾಗಲಿಲ್ಲ. ಈಗ ಉಳಿದಿರುವ ಒಂದು ಕಾಲೂ ನಿಷ್ಪ್ರಯೋಜಕವಾಗಿದೆ.



ಬಂಟನ ಬವಣೆ

ವಿಚಿತ್ರ ಆದರೂ ನಿಜವಾದ ಅಂಶ ಯಾವುದೆಂದರೆ ಬಂಟನನ್ನು ಹೀಗೆ ಥಳಿಸಿದ ಮೇಲ್ಜಾತಿಯ ಜನರಿಗೆ ಅವನನ್ನು ಕೊಲ್ಲುವ ಉದ್ದೇಶ ಇರಲಿಲ್ಲ. ಯಾಕೆಂದರೆ ಆತ ಸತ್ತಿದ್ದರೆ ಅದು ಇನ್ನೊಂದು ಕೊಲೆ ಪ್ರಕರಣವಾಗುತ್ತಿತ್ತಷ್ಟೆ. ಬದಲಾಗಿ ಅವರ ಉದ್ದೇಶ ಇದ್ದದ್ದೇ ಬಂಟನ ದೇಹವನ್ನು ನಿರುಪಯುಕ್ತಗೊಳಿಸಿ ಆತನಂತೆ ತಮ್ಮ ಹಕ್ಕುಗಳಿಗಾಗಿ ಹೋರಾಡುವ ಇತರೇ ದಲಿತರಿಗೆ, ಶೋಷಿತ ವರ್ಗದವರಿಗೆ ಬಂಟನಿಗೆ ಆದದ್ದೇ ನಿಮಗೂ ಆಗುತ್ತದೆ ಎಂದು ಎಚ್ಚರಿಸುವುದಾಗಿತ್ತು. ಅದರಲ್ಲಿ ಅವರು ಯಶಸ್ಸನ್ನು ಕಂಡರು. ಯಾಕೆಂದರೆ ಇವತ್ತು ಬಂಟ ಸ್ವಾವಲಂಬಿ ಅಲ್ಲ. ಪ್ರತಿಯೊಂದಕ್ಕೂ ತನ್ನ ಹೆಂಡತಿ, ಮಕ್ಕಳು, ಇತರರನ್ನು ಆತ ಅವಲಂಬಿಸಬೇಕಾಗಿದೆ.

ಆದರೆ ಮೇಲ್ಜಾತಿಯವರ ಲೆಕ್ಕಾಚಾರ ತಪ್ಪಿದ್ದು ಬಂಟನ ಅದಮ್ಯ ಚೇತನವನ್ನು ಕೊಲ್ಲಲಾಗದಿದ್ದಕ್ಕೆ, ಆತನ ಜೀವನೋತ್ಸಾಹವನ್ನು ಕತ್ತರಿಸಿ ಹಾಕಲಾಗದಿದ್ದಕ್ಕೆ. ಯಾಕೆಂದರೆ ಸಂಪೂರ್ಣವಾಗಿ ಅಂಗವಿಕಲನಾದ ಬಂಟ ಇವತ್ತಿಗೂ ಮೇಲ್ಜಾತಿಗಳ ದೌರ್ಜನ್ಯದ ವಿರುದ್ಧ ತನ್ನ ಹೋರಾಟವನ್ನು ಮುಂದುವರಿಸುತ್ತಿದ್ದಾನಲ್ಲದೆ, ನಮ್ಮ ಪ್ರಜಾಪ್ರಭುತ್ವದಲ್ಲಿ ದಲಿತರಿಗೆ ಏನಾಗುತ್ತಿದೆ ಎಂಬುದಕ್ಕೆ ಒಂದು ಉಜ್ವಲ ಸಂಕೇತವಾಗಿದ್ದಾನೆ.

ಇವತ್ತು ಬಂಟಸಿಂಗ್ ತನ್ನ ಮುರಿದ ದೇಹವನ್ನು ಆದರೆ ಮುರಿಯಲಾಗದಿರುವ ಧೈರ್ಯವನ್ನು ಪಂಜಾಬ್ ಮಾತ್ರವಲ್ಲ, ಇತರ ಕಡೆಯೂ ಪ್ರದರ್ಶಿಸಿ, ಕ್ರಾಂತಿಕಾರಿ ಹಾಡುಗಳನ್ನು ಹಾಡಿ, ಜನರೊಂದಿಗೆ ಮಾತನಾಡಿ, ಎಲ್ಲೆಡೆ ಜಾಗೃತಿ ಮೂಡಿಸುತ್ತಿದ್ದಾನೆ. ಆತ ಹೋದಲ್ಲೆಲ್ಲಾ ಜನರು ಆತನನ್ನು ನೋಡಿ ಅವನ ಮಾತನ್ನು ಕೇಳಿ ಕಣ್ಣೀರಿಡುತ್ತಿದ್ದಾರೆ. ಶೋಷಣೆಯ ವಿರುದ್ಧ ಹೋರಾಡುವ ಪಣ ತೊಡುತ್ತಿದ್ದಾರೆ.

ಬಂಟಸಿಂಗ್‌ನನ್ನು ಮೇಲ್ಜಾತಿ ಜಾಟರು ಹೀಗೆ ಅಂಗವಿಕಲನನ್ನಾಗಿಸಿದ್ದರೂ ಆತನ ಪರವಾಗಿ ಒಂದೇ ಒಂದು ರಾಜಕೀಯ ಪಕ್ಷ (ನಕ್ಸಲೈಟರ ಸಂಘ ಎಂಬ ಆರೋಪಕ್ಕೆ ಗುರಿಯಾಗಿರುವ ಸಿಪಿಐ (ಎಂಎಲ್) ಪಕ್ಷ ಹೊರತಾಗಿ) ಆತನ ಪರ ಮಾತನಾಡಿಲ್ಲ. ತನ್ನ ರಾಜ್ಯದಲ್ಲಿ ಇಂತಹ ಘೋರ ಕೃತ್ಯ ನಡೆದಿದೆ ಎಂದು ಗೊತ್ತಿದ್ದರೂ ಪಂಜಾಬಿನ ಕಾಂಗ್ರೆಸ್ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಪ್ರತಿಕ್ರಿಯಿಸಿಲ್ಲ. ಅಷ್ಟೇ ಅಲ್ಲ, ಬಂಟಸಿಂಗ್ ಇದ್ದ ಆಸ್ಪತ್ರೆಗೆ ಬೇರೆ ಇನ್ಯಾವುದೋ ಕಾರಣಕ್ಕೆ ಮುಖ್ಯಮಂತ್ರಿ ಭೇಟಿ ನೀಡಿದಾಗಲೂ ಬಂಟ ಚಿಕಿತ್ಸೆ ಪಡೆಯುತ್ತಿದ್ದಲ್ಲಿಗೆ ಭೇಟಿ ನೀಡುವ ಸೌಜನ್ಯವನ್ನೂ ತೋರಿಸಲಿಲ್ಲ.

ದಲಿತರ ಮೇಲೆ ಹಲ್ಲೆ ನಡೆದಾಗಲೆಲ್ಲ ಕಾನೂನಿನ ಪ್ರಕಾರ ಪರಿಹಾರಧನ ನೀಡುವಂತೆ ಬಂಟಸಿಂಗನಿಗೂ ಪರಿಹಾರ ಧನವನ್ನು ಅಲ್ಲಿನ ಕಾಂಗ್ರೆಸ್ ಸರ್ಕಾರ ನೀಡಿದೆಯಾದರೂ, ಆತನ ಮೇಲೆ ಆಗಿರುವ ಅಮಾನುಷ ಕೃತ್ಯವನ್ನು ಖಂಡಿಸಿಲ್ಲ.

ಇನ್ನು 'ಹಿಂದೂಗಳು ನಾವೆಲ್ಲಾ ಒಂದು' ಎಂದು ಬೊಗಳುವ ಬಿಜೆಪಿ ಮತ್ತು ಸಂಘಪರಿವಾರ ಈ ಬಡ ದಲಿತನತ್ತ ತಿರುಗಿಯೂ ನೋಡಿಲ್ಲ. ಹಾಗೆಯೇ ಪಂಜಾಬಿನ ಸಾಹುಕಾರ ಜಾಟ್ ಜನರ ಕೋಪಕ್ಕೆ ಗುರಿಯಾಗುವ ಹೆದರಿಕೆಯಲ್ಲಿರುವ ಅಕಾಲಿದಳ ಎಂಬ ಪ್ರಾಂತೀಯ ಪಕ್ಷ ಕೂಡ ತನಗೂ ಈ ಪ್ರಕರಣಕ್ಕೂ ಸಂಬಂಧವೇ ಇಲ್ಲ ಎಂಬಂತಿದೆ.

ಕಳೆದ ಜನವರಿಯಲ್ಲಿ ಹಲ್ಲೆಗೊಳಗಾಗಿ ಅಂಗವಿಕಲನಾಗಿರುವ ಬಂಟನ ಜೊತೆ ನಿಂತಿರುವವರು 'ನಕ್ಸಲೈಟರು' ಎಂಬ ಹಣೆಪಟ್ಟಿ ಹೊತ್ತಿರುವ; ದಲಿತರ, ಶೋಷಿತರ ಪರವಾಗಿ ಹೋರಾಡುತ್ತಿರುವ ಸಿಪಿಐ (ಎಂಎಲ್) ಪಕ್ಷದವರು ಮಾತ್ರ.


ಕೊನೇಮಾತು: ಬಂಟ್‌ಸಿಂಗ್‌ನ ಮೇಲೆ ಈ ಮಾರಣಾಂತಿಕ ಹಲ್ಲೆ ನಡೆದು ಆತ ಅಂಗವಿಕಲನಾಗಿ ಇದೇ ಜನವರಿ ತಿಂಗಳಿಗೆ ಒಂದು ವರ್ಷವಾಗುತ್ತದೆ. ಹಿಂದೆಲ್ಲಾ ಭೂಮಾಲಿಕರ, ಮೇಲ್ಜಾತಿಗಳ ಹಂಗಿಗೆ ಬೀಳದೆ ತನ್ನ ಹಂದಿ, ಕುರಿ ಇತ್ಯಾದಿಗಳನ್ನೇ ಅವಲಂಬಿಸಿ ಸ್ವಾಭಿಮಾನದ ಬದುಕು ನಡೆಸುತ್ತಿದ್ದ ಬಂಟ ಇಂದು ಪರಾವಲಂಬಿಯಾಗಿದ್ದಾನೆ. ಆತನ ಕತೆ ಮತ್ತು ಹೋರಾಟವನ್ನು ಈಗಾಗಲೇ ತಮ್ಮ ಓದುಗರ ಗಮನಕ್ಕೆ ತಂದಿರುವ ನನ್ನ ಮಿತ್ರ ತರುಣ್ ತೇಜ್‌ಪಾಲ್‌ನ 'ತೆಹೆಲ್ಕಾ' ಪತ್ರಿಕೆ ತನ್ನ ಓದುಗರಿಂದ ಸಹಾಯನಿಧಿಯನ್ನು ಸಂಗ್ರಹಿಸಿ ಬಂಟಸಿಂಗ್‌ನಿಗೆ ನೀಡಿದೆ.

ನಾನು ನಮ್ಮ ಓದುಗ ಮಿತ್ರರಲ್ಲಿ ಕೇಳುವುದೂ ಇದನ್ನೇ. ನಾವು ಯಾರೂ ಕಂಬಾಲಪಲ್ಲಿಯ ಮಾರಣಹೋಮಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ತೀರ್ಪು ಬಂದಾಗ ಏನೂ ಮಾಡಲಾಗಲಿಲ್ಲ. ಖೈರ್‌ಲಾಂಜಿಯಲ್ಲಿ ದಲಿತ ಮಹಿಳೆ ಸುರೇಖಾಳ ಮೇಲೆ ಅಮಾನುಷವಾಗಿ ಅತ್ಯಾಚಾರ-ಕೊಲೆ ನಡೆದಾಗಲೂ ನಾವೇನೂ ಮಾಡಲಾಗಲಿಲ್ಲ. ಆದರೆ ಈಗ ಕಂಬಾಲಪಲ್ಲಿಯಲ್ಲಿ ಸತ್ತ ದಲಿತರ, ಖೈರ್‌ಲಾಂಜಿಯಲ್ಲಿ ಅತ್ಯಾಚಾರಕ್ಕೀಡಾದ ಸುರೇಖಾಳ ಹೋರಾಟವನ್ನು ಮುಂದುವರೆಸುತ್ತಿರುವ ಪಂಜಾಬಿನ ಸಹೋದರ ಬಂಟ ಸಿಂಗ್‌ನಿಗೆ ಸಹಾಯ ಮಾಡಬಹುದಲ್ಲವೇ? ತನ್ನ ಕೈಕಾಲುಗಳನ್ನು ಕಳೆದುಕೊಂಡಿದ್ದರೂ ಸ್ವಾಭಿಮಾನದ ಬದುಕನ್ನು ಆಶಿಸುತ್ತಿರುವ ಬಂಟನಿಗೆ ನಾವು ನೆರವಾಗಬಹುದಲ್ಲವೇ?

ಸಹಾಯ ಮಾಡಲು ಇಚ್ಛಿಸುವವರು ತಮ್ಮ ಕಾಣಿಕೆಯನ್ನು 'BANT SINGH' ಎಂದು ಚೆಕ್‌ನಲ್ಲಿ ನಮೂದಿಸಿ ನಮ್ಮ ಆಫೀಸಿಗೆ ಕಳುಹಿಸಿ. ದಲಿತ ಹೋರಾಟಗಾರ, ಸೋಲನ್ನೊಪ್ಪದ ತನ್ನದೇಯ ಆಕ್ರೋಶವನ್ನೆಲ್ಲಾ ಹೋರಾಟದ ಹಾಡುಗಳಾಗಿಸಿ ಈಗಲೂ ಶೋಷಣೆ, ದೌರ್ಜನ್ಯಗಳ ವಿರುದ್ಧ ಹೋರಾಡುತ್ತಾ ನಮ್ಮ ಪ್ರಜ್ಞೆಯನ್ನು ಕಲಕುವಂತೆ ಮಾಡುತ್ತಿರುವ ವೀರ ಬಂಟಸಿಂಗನಿಗೆ ನಿಮ್ಮ ಸಹಾಯಧನವನ್ನು ಕಳುಹಿಸುತ್ತೇವೆ.

-ಗೌರಿ ಲಂಕೇಶ್

ಲಂಕೇಶ್ ವಾರ್ಷಿಕ ವಿಶೇಷಾಂಕ



ಬರುವ ಮಾರ್ಚ್ ಎಂಟು ಪಿ. ಲಂಕೇಶರ 72 ನೇ ಹುಟ್ಟುಹಬ್ಬ ಮಾತ್ರವಲ್ಲ, ಈ ನಿಮ್ಮ ಪತ್ರಿಕೆ ಹೊಸ ರೂಪ ತಾಳಿ ಹೊರಬಂದದ್ದಕ್ಕೆ ಎರಡು ವರ್ಷವಾಗುತ್ತದೆ. ಅದರ ಪ್ರಯುಕ್ತ ನಾವು ಅತ್ಯಂತ ಸುಂದರ ಮತ್ತು ವಿಚಾರಪೂರ್ಣ ವಿಶೇಷಾಂಕವನ್ನು ಹೊರತರುತ್ತಿದ್ದೇವೆ.

ಈ ವಿಶೇಷ ಸಂಚಿಕೆಗೆ 'ಲಂಕೇಶ್' ಓದುಗರಿಗೆ ನಾವು ಆರಿಸಿರುವ ವಿಷಯಗಳು:


1. ಲಂಕೇಶ್ ನನ್ನನ್ನು ತಾಕಿದ್ದು ಹೀಗೆ...
2. ಇವರು ನನ್ನ ಬೆಸ್ಟ್ ಫ್ರೆಂಡ್ ಯಾಕೆಂದರೆ...

ನಿಮ್ಮ ಲೇಖನ 250 ಪದಗಳನ್ನು ಮೀರಬಾರದು, ನಿಮ್ಮ ಫೋಟೋ (ಬೆಸ್ಟ್ ಫ್ರೆಂಡ್ ಫೋಟೋ ಸಹ) ಅನ್ನು ಲಗತ್ತಿಸಬೇಕು, ಕಳುಹಿಸಲು ಕೊನೆ ದಿನಾಂಕ ಫೆಬ್ರವರಿ 10, 2007.

-ಸಂಪಾದಕಿ

ಸಂಯುಕ್ತ ಕರ್ನಾಟಕ 50 ಕೋಟಿಯ ಆಸ್ತಿ ಲೂಟಿ

ಸಂಯುಕ್ತ ಕರ್ನಾಟಕ ಎಂಬ ಟೈಟಾನಿಕ್ ಮುಳುಗಲು ಇನ್ನು ಕೆಲವು ಕ್ಷಣಗಳು ಬಾಕಿ. ಸರ್ಕ್ಯುಲೇಷನ್ ನೆಲಕಚ್ಚಿದೆ. ಜಾಹೀರಾತು ಹುಟ್ಟುತ್ತಿಲ್ಲ. ಕೊನೆಕೊನೆಗೆ ನೌಕರರ ಸಂಬಳಕ್ಕೇ ಹಾಹಾಕಾರವಾದರೆ, ಪತ್ರಿಕೆಯ ಆಧಾರಸ್ತಂಭದಂತಿದ್ದ ಪತ್ರಕರ್ತರದು ಮೇವು ನೀರಿಗೆ ಗುಳೆ ಹೊರಟ ಬರಪೀಡಿತರ ಪಾಡು!


ಹಾರ್ನಳ್ಳಿ ರಾಮಸ್ವಾಮಿ


ಎಲ್ಲೋ ಇದ್ದ ಹಾರ್ನಳ್ಳಿ ರಾಮಸ್ವಾಮಿಯವರನ್ನು ಕರೆತಂದು 'ಲೋಕ ಶಿಕ್ಷಣ ಟ್ರಸ್ಟಿಗೆ' ಧರ್ಮದರ್ಶಿಯನ್ನಾಗಿ ಮಾಡುವಾಗಲೇ ಅನೇಕರು ಶಾಮರಾಯರನ್ನು ಎಚ್ಚರಿಸಿದ್ದರು. 'ಬೇಡಿ.... ಗೆದ್ದಲುಗಳು ಕಟ್ಟಿದ ಹುತ್ತಕ್ಕೆ ಹಾವನ್ನು ಬಿಟ್ಟುಕೊಳ್ಳಬೇಡಿ, ಖಂಡಿತಾ ನುಂಗಿ ನೊಣೆಯುತ್ತಾರೆ ನೋಡಿ!' ಎಂದಿದ್ದರು. ಅವರ ಮಾತು ಕೊನೆಗೂ ನಿಜವಾಗೇ ಹೋಯಿತು!

ಎಲ್ಲಾ ಮುಗಿದು ಸಂಯುಕ್ತ ಕರ್ನಾಟಕದ ಮೂಳೆ ಚಕ್ಕಳದಂತಿದ್ದ ಒಂದೊಂದೇ ಆಸ್ತಿಯನ್ನು ಮಾರಿಕೊಳ್ಳುವ ದಾರಿದ್ರ್ಯಕ್ಕೆ ಟ್ರಸ್ಟಿ ಹಾರ್ನಳ್ಳಿ ಮತ್ತು ಪಾಖಂಡಿ ಸೆಕ್ರೆಟರಿ ನಾರಾಯಣಮೂರ್ತಿ ಕೈ ಹಾಕಿದ್ದಾರೆ.

ಸಂ.ಕ.ದ ಬೆಂಗಳೂರು ಆವೃತ್ತಿಯ ಐವತ್ತು ಕೋಟಿಯ ಆಸ್ತಿ ಈಗ ಆಂಧ್ರದ ಭೂಗಳ್ಳನ ಪಾಲಾಗಿದೆ. ಅದೂ ಕವಡೆ ಕಿಮ್ಮತ್ತಿಗೆ ಹರಾಜಾಗಿದೆ. ಅಲ್ಲಿಗೆ ಲೋಕಶಿಕ್ಷಣ ಟ್ರಸ್ಟ್ ಆಸ್ತಿ ಕಾಯಬೇಕಿದ್ದವರ ಹೊಟ್ಟೆಗೆ ದೊಡ್ಡ ಮೊತ್ತದ ಭಕ್ಷೀಸೂ ಗಿಟ್ಟಿದೆ!

ಹಾರ್ನಳ್ಳಿಯಾಗಲಿ ಅದರ ಸೆಕ್ರೆಟರಿಯಾಗಲಿ ತಮ್ಮ ಪಿತ್ರಾರ್ಜಿತ ಆಸ್ತಿಯನ್ನು ಹೀಗೆ ದುಗ್ಗಾಣಿ ಬೆಲೆಗೆ ಕಂಡೋರ ಬಾಯಿಗೆ ಹಾಕುತ್ತಿದ್ದರಾ? ಎಂಬುದೇ ಅಸಲೀ ಪ್ರಶ್ನೆ.

ಅದು ಸಣ್ಣ ಡೀಲೇನಲ್ಲ. ನಂ. 2 ರೆಸಿಡೆನ್ಸಿ ರಸ್ತೆಯ ಸಂಯುಕ್ತ ಕರ್ನಾಟಕ ಕರ್ನಾಟಕ ಏಕೀಕರಣ ಚಳವಳಿಯ ಮಹಾರಥಿ ರಂ.ರಾ. ದಿವಾಕರರು. ರಾಜಧಾನಿಯಲ್ಲೂ ಸಂ.ಕ. ಬೇರೂರಬೇಕೆಂಬ ಅವರ ಮಹದಾಸೆಗೆ ಒತ್ತಾಸೆಯಾಗಿ ಬಂದಿದ್ದೇ ನಂ. 2 ರೆಸಿಡೆನ್ಸಿ ರಸ್ತೆಯ ಒಂದು ಮುಕ್ಕಾಲೆಕರೆಯ ಸದರಿ ಆಸ್ತಿ. ಅದನ್ನು ಲೋಕ ಶಿಕ್ಷಣ ಟ್ರಸ್ಟ್ ಖರೀದಿಸಿದ್ದು 1956 ರಲ್ಲಿ, ಅದೇ ವರ್ಷ ಕರ್ನಾಟಕದ ಏಕೀಕರಣ ಕೂಡ ಸಾಕಾರಗೊಂಡಿತ್ತು. ಅದರ ಸವಿನೆನಪಿಗೆಂದೇ ಸಂ.ಕ.ದ ಬೆಂಗಳೂರು ಆವೃತ್ತಿಗಾಗಿ ದಿವಾಕರರು ಖರೀದಿಸಿದ ಈ ಆಸ್ತಿಗೆಂದು ಅವತ್ತು ಲೋಕಶಿಕ್ಷಣ ಟ್ರಸ್ಟ್


ರಂಗರಾವ ರಾಮಚಂದ್ರ ದಿವಾಕರ

ಅದರ ಚರಸ್ಥಿರಾಸ್ತಿಯು ಪ್ರತಿಯೊಬ್ಬ ಕನ್ನಡಿಗನಿಗೂ... ಹೀಗಿದ್ದೂ ಅದು ಹೇಗೆ ಭೂಗಳ್ಳನ ಪಾಲಾಯಿತು...

ಇಂಥ ಪ್ರಶ್ನೆಗಳ... ಎಂಥವರಿಗೂ ಆಘಾತ... ಬೇಕು. ಕತ್ತೆಗೆಲ್ಲಿ ಗೊತ್ತು ಕಸ್ತೂರಿ ಪರಿಮಳ? ... ಮೊದಲ ಬಾರಿಗೆ ರೆಸಿಡೆನ್ಸಿ... ಸಂ.ಕ. ಆಸ್ತಿಯ ಒಂದು ... ದಿವಾಕರರ ಮಗ ಅನಂತ್... ರಲ್ಲಿ ಬಕರಿಗಿಟ್ಟಾಗಲೇ ... ಭಟಿಸಬೇಕಿತ್ತು, ಜನಾರ್ದನ್...




ಸಂಯುಕ್ತ ಕರ್ನಾಟಕ ಪ್ರಾರಂಭವಾದಾಗ ಇದ್ದ ಕಟ್ಟಡ ಮತ್ತು ಈಗ ಇರುವ ಕಟ್ಟಡ

ಜನಾರ್ದನ್ ಟವರ್ ಕೊಳ್ಳೆಯ ಹಿಂದೆ!

ಕೊಂದ ಪಾಪಕ್ಕೆ ತಿಂದು ಪರಿಹಾರ ಎಂಬಂತೆ ಹಾರ್ನಳ್ಳಿ ಪಟಾಲಂ ಸಂ.ಕ.ದ ಮತ್ತೊಂದು ಆಸ್ತಿಗೂ ಗತಿ ಕಾಣಿಸಿದೆ.

ಅದು ಜನಾರ್ದನ್ ಟವರ್ ಕೊಳ್ಳೆಯ ಕತೆ. ನಂ. 2 ರೆಸಿಡೆನ್ಸಿ ರಸ್ತೆಯ ಸಂ.ಕ. ಕಾಂಪೌಂಡ್‌ನ ಒಂದು ಮೂಲೆಯಲ್ಲಿರುವುದೇ ಈ ಜನಾರ್ದನ್ ಟವರ್. ಕುಖ್ಯಾತ ಪೀಕಾಕ್ ರೆಸ್ಟೋರೆಂಟ್ ಇದರ ನೆಲಮಹಡಿಯಲ್ಲಿದೆ. ಜನಾರ್ದನ್ ಸಿಲ್ಕ್ ಮಾಲೀಕ ಲಕ್ಷ್ಮೀನಾರಾಯಣ ಇದನ್ನು 1972 ರಲ್ಲಿ 30 ವರ್ಷಗಳ ಭೋಗ್ಯಕ್ಕೆ ಲೋ.ಶಿ. ಟ್ರಸ್ಟ್‌ನಿಂದ ಪಡಕೊಂಡು ಕಟ್ಟಿದ ಕಾಂಪ್ಲೆಕ್ಸ್ 2002 ಕ್ಕೆ ಮತ್ತೆ ಲೋ.ಶಿ. ಟ್ರಸ್ಟ್ ವಶಕ್ಕೆ ಬರುತ್ತದೆಯೆಂದೆ ಅನೇಕರ ನಿರೀಕ್ಷೆಯಾಗಿತ್ತು.

ಆದರೆ ಹಾರ್ನಳ್ಳಿ ಜನಾರ್ದನ್ ಟವರ್ ಗುತ್ತಿಗೆಯನ್ನು ಮತ್ತೆ 35 ವರ್ಷಕ್ಕೆ ವಿಸ್ತರಿಸಿದ್ದಾರೆ. ಅದಕ್ಕೆಂದು ಲೋ.ಶಿ. ಟ್ರಸ್ಟ್ ಲೆಕ್ಕಕ್ಕೆ ಟವರ್ ಮಾಲೀಕ ಲಕ್ಷ್ಮೀನಾರಾಯಣ ತೆತ್ತಿದ್ದು ಕೇವಲ 14 ಲಕ್ಷ ಮಾತ್ರ. ಸರಿಸುಮಾರು 22 ಸಾವಿರ ಚದುರ ಅಡಿಗಳ ಜನಾರ್ದನ್ ಟವರ್‌ಅನ್ನು ಮತ್ತೆ 35 ವರ್ಷಕ್ಕೆ ಗುತ್ತಿಗೆಗೆ ಕೊಡಬೇಕಿದ್ದರೆ ಟ್ರಸ್ಟ್ ಅದಕ್ಕೆ ಸರ್ಕಾರದ ಪರವಾನಗಿ ಪಡೆಯಬೇಕಿತ್ತು. ಕೋಟಿಗಟ್ಟಲೆ ಬೆಲೆ ಬಾಳುವ ಆಸ್ತಿಯನ್ನು ಕೇವಲ 14ಲಕ್ಷಕ್ಕೆ ಕೊಟ್ಟದ್ದು ಟ್ರಸ್ಟ್ ಪಾಲಿಗೆ ದೊಡ್ಡ ನಷ್ಟವೇ ಆಗಿತ್ತು.

ಇಂಥ ಅವ್ಯವಹಾರಕ್ಕೂ ಕಾರಣವಿತ್ತು. ಜನಾರ್ದನ್ ಸಿಲ್ಕ್ ಮಾಲೀಕ ಲಕ್ಷ್ಮೀನಾರಾಯಣ ಕೂಡ ಸಂ.ಕ. ಆಸ್ತಿಗೆ ಕಣ್ಣುಹಾಕಿ ಲಿಕ್ಕರ್ ದೊರೆ ಬಸವರಾಜ್ ವಿರುದ್ಧ ತಾನು ಹೋಟೆಲ್ ಕಟ್ಟುತ್ತೇನೆಂದು ಟೆಂಡರ್ ಹಾಕಿದ್ದರು. ಬಸವರಾಜ್‌ಗಿಂತ ಹೆಚ್ಚಿಗೆ ರೇಟು ನಮೂದಿಸಿದಾಗಲೂ ಅದನ್ನು ತಿರಸ್ಕರಿಸಿ ಬಸವರಾಜ್‌ಗೆ ಗುತ್ತಿಗೆ ಕೊಟ್ಟದ್ದನ್ನು ಪ್ರಶ್ನಿಸಿ ಬೆಳಗಾಂನ ಅಸಿಸ್ಟೆಂಟ್ ಚಾರಿಟಿ ಕಮೀಷನರ್ ಕೋರ್ಟಿನಲ್ಲಿ ಕೇಸು ಹಾಕಿದ್ದರು. ಆಸ್ತಿ ಇನ್ನೆಲ್ಲಿ ಬಸವರಾಜ್ ಕೈತಪ್ಪುತ್ತೋ ಎಂದು ಹೆದರಿದ ಹಾರ್ನಳ್ಳಿ ಲಕ್ಷ್ಮೀನಾರಾಯಣನ ಬಾಯಿ ಮುಚ್ಚಿಸಲು ಮಾಡಿದ ಕರಾಮತ್ತೇ 2002 ಕ್ಕೆ ಮುಗಿಯಬೇಕಿದ್ದ ಜನಾರ್ದನ್ ಟವರ್ ಗುತ್ತಿಗೆಯನ್ನು ತೀರ ಅಗ್ಗದ ರೇಟಿಗೆ ಮತ್ತೆ 35 ವರ್ಷಕ್ಕೆ ಮುಂದುವರೆಸಿದ್ದು!

ಈ ಡೀಲಿನಲ್ಲಿ ಹಾರ್ನಳ್ಳಿ ಬಾಯಿಗೆಬಿದ್ದ ಭಕ್ಷೀಸಿನ ಬೆಲೆಯೆಷ್ಟೋ? ಜನಾರ್ದನ್ ಟವರ್ ಮತ್ತೆ ಸಂ.ಕ.ಕ್ಕೆ ಸಿಕ್ಕಿದ್ದರೆ ಎಷ್ಟು ಲಾಭವಾಗುತ್ತಿತ್ತೊ? ಅಷ್ಟಕ್ಕೂ, ಅದು ಹಾರ್ನಳ್ಳಿ ಬೆವರು ಸುರಿಸಿ ದುಡಿದ ಸೊತ್ತಲ್ಲವಲ್ಲ? ಪ್ರಶ್ನೆಯೆಂದರೆ ಈ ಬಗ್ಗೆ ಇವತ್ತಿಗೂ ಸರ್ಕಾರ ಏಕೆ ತನಿಖೆ ನಡೆಸಿಲ್ಲ?

ಕಚೇರಿಯ ಒಟ್ಟೂ 63 ಸಾವಿರ ಚದರ ಅಡಿಗಳ ಪೈಕಿ ಅರ್ಧಕ್ಕೂ ಹೆಚ್ಚು ಭೂಮಿಯನ್ನು ಹೊಡೆದ ಖದೀಮನೇ ಆಂಧ್ರದ ದಾಸರಿ ಬಿಲ್ಡರ್ಸ್ ಮಾಲೀಕ ಶೇಖರ್. ಅದನ್ನು ಆತನ ಬಾಯಿಗಿಕ್ಕಿದ್ದು ಹೆಂಡದ ದೊರೆ ಬಸವರಾಜು ಮಗ ನಾರಾಯಣಸ್ವಾಮಿ ಮತ್ತು ಹಾರ್ನಳ್ಳಿ ರಾಮಸ್ವಾಮಿ!

ಸದ್ಯ ಬೆಂಗಳೂರಿನ ರೆಸಿಡೆನ್ಸಿ ರಸ್ತೆಯಲ್ಲಿ ಚದರ ಅಡಿ ಭೂಮಿಗೆ ಕಮ್ಮಿಯೆಂದರೂ ಹದಿಮೂರು ಸಾವಿರ ರೂಪಾಯಿ ಕಿಮ್ಮತ್ತಿದೆ. ಕುಖ್ಯಾತ ಬಿಶಪ್‌ಕಾಟನ್ ಸ್ಕೂಲ್ ಎದುರಿಗೇ ಇರುವ ಸಂಯುಕ್ತ ಕರ್ನಾಟಕದ ಕಚೇರಿಯೆಂದರೆ ಅದು ಪ್ರತಿಷ್ಠಿತ ಎಂ.ಜಿ. ರಸ್ತೆಯಲ್ಲಿದ್ದ ಪ್ರಜಾವಾಣಿಯಷ್ಟೇ ಹೆಮ್ಮೆ ತರುವಂತಿತ್ತು, ಒಂದೂವರೆ ಎಕರೆಗೂ ಮೀರಿದ ವಿಶಾಲ ಕಾಂಪೌಂಡು, ಕಾಲಿಡುವುದಕ್ಕೂ ದುಸ್ತರದ ರೆಸಿಡೆನ್ಸಿ ರಸ್ತೆಯ ಪರಮ ದುಬಾರಿ ಜಾಗದಲ್ಲಿ ಕನ್ನಡಿಗರ ಹೆಮ್ಮೆಯ ಸಂಸ್ಥೆಯೊಂದಕ್ಕೆ ಜಾಗ ಕಲ್ಪಿಸಿಕೊಟ್ಟದ್ದು ಲೋಕ ಶಿಕ್ಷಣ ಟ್ರಸ್ಟ್ ಸಂಸ್ಥಾಪಕ, ಭಗನ್‌ಲಾಲ್ ಎಂಬ ಮಾರ್ವಾಡಿಗೆ ಪಾವತಿಸಿದ್ದು ಎರಡು ಲಕ್ಷದ ಹದಿನೇಳು ಸಾವಿರ ರೂಪಾಯಿಗಳು!

ಇಂಥದೊಂದು ಆಸ್ತಿಯನ್ನು ಖರೀದಿಸಲು ಅವತ್ತು ದಿವಾಕರರು ಪಟ್ಟಪಾಡು, ಅದಕ್ಕೆ ಶಾಮರಾಯರು ಸರ್ಕಾರಿ

ರಾ. ಸೋಮನಾಥ್

ಮಟ್ಟದಲ್ಲಿ ಹೆಣಗಿದ ರೀತಿ ಇತ್ಯಾದಿಗಳದೇ ದೊಡ್ಡ ಕತೆಯಾಗುತ್ತದೆ. ಇಂಥಾ ಆಸ್ತಿಯನ್ನು ಹಾರ್ನಳ್ಳಿ ರಾಮಸ್ವಾಮಿ ಮತ್ತು ಹೆಂಡದ ದೊರೆ ಬಸವರಾಜ್ ಮಗ ನಾರಾಯಣಸ್ವಾಮಿ ಸೇರಿಕೊಂಡು ಆಂಧ್ರದ ವಂಚಕನ ಬಾಯಿಗೆ ಹಾಕಿದ್ದಾದರೂ ಹೇಗೆ? ಹೇಳಿಕೇಳಿ ಲೋಕಶಿಕ್ಷಣ ಟ್ರಸ್ಟ್ ಒಂದು ಸಾರ್ವಜನಿಕ ಟ್ರಸ್ಟು. ಕನ್ನಡಿಗರ ಆಸ್ತಿಯಿದ್ದಂತೆ. ಅದರ ಯಾವುದೇ ಆಸ್ತಿಯನ್ನು ಯಾರೂ ಮಾರಕೂಡದು.


ಮಾಲೀಕ ಲಕ್ಷ್ಮೀನಾರಾಯಣನಿಗೆ 100x120 ಅಡಿಗಳ ತುಂಡೊಂದು 30 ವರ್ಷಗಳ ಮಟ್ಟಿಗೆ ಕೊಟ್ಟ ಅನಂತ್‌ನಿಗೆ ಆವತ್ತಿನ ಅನಿವಾರ್ಯತೆಯೆ...

ಆದರೆ 1990 ರ ಹೊತ್ತಿಗೆ ಶಾಮರಾವ್ ಮ... ಅನಾಹುತಕ್ಕೆ ಕೈಯಿಟ್ಟರು. ಅದು ಸರಿಸುಮಾ... ಸಾವಿರ ಚದರ ಅಡಿಯನ್ನು ಹೆಂಡದ ದೊರೆ ಬಸ... ಬಾಯಿಗಿಕ್ಕುವ ಹುನ್ನಾರವಾಗಿತ್ತು. ಆ ಹೊತ್ತಿಗೆ... ರಾಯರೇ ಲೋಕ ಶಿಕ್ಷಣ ಟ್ರಸ್ಟಿನ ಕಾರ್ಯದರ್ಶಿ... ಸಂ.ಕ.ದ ವ್ಯವಸ್ಥಾಪಕ ಸಂಪಾದಕರು. ಲೋಕ... ಟ್ರಸ್ಟ್ ಮತ್ತು ಬಸವರಾಜ್ ಒಡೆತನದ ಸುಧಾ ಹೆ... ಪ್ರೈ ಲಿ. ಮಧ್ಯೆ ನಡೆದ ಒಪ್ಪಂದದಂತೆ ಸಂ.ಕ. ಕಾ... ನಲ್ಲಿ 5 ಸಾವಿರ ಚದರ ಅಡಿಗಳ ಕಟ್ಟಡವ... ಬಸವರಾಜ್ ಸಂ.ಕ.ಕ್ಕೆಂದು ಕಟ್ಟಿಸಿಕೊಡಬೇಕು. ... ಒಂದೂಕಾಲು ಕೋಟಿ ರೂಪಾಯಿಗಳ ಮೊ... ಕೊಡಬೇಕು. ಇದಕ್ಕೆ ಪ್ರತಿಯಾಗಿ ರೆಸಿಡೆನ್ಸಿ

ಹಾರ್ನಳ್ಳಿ ಸಂ.ಕ.ಕ್ಕೆ ವಕ್ಕರಿಸಿದ್ದು


ಹಾರ್ನಳ್ಳಿ ಲೋಕ ಶಿಕ್ಷಣ ಟ್ರಸ್ಟಿಗೆ ವಕ್ಕರಿಸಿದ್ದೇ ಶಾಮರಾವ್ ಮತ್ತು ಲಿಕ್ಕರ್ ದೊರೆ ಬಸವರಾಜು ಅನೈತಿಕ ಸಂಬಂಧದಿಂದ. 1986 ರಲ್ಲಿ ಹೈಕೋರ್ಟ್ ಲೋ.ಶಿ. ಟ್ರಸ್ಟ್‌ಗೆ ನೇಮಿಸಿದ ಟ್ರಸ್ಟಿಗಳ ಪೈಕಿ ಹಾರ್ನಳ್ಳಿ ಹೆಸರೇ ಇರಲಿಲ್ಲ, ಆದರೆ ಶಾಮರಾಯನಿಗೆ ಋಣ ತೀರಿಸಬೇಕಿತ್ತು.

ಯಾವತ್ತು ಬೆಂಗಳೂರು ಸಂ.ಕ.ದ. ಆಸ್ತಿಯನ್ನು ಕಳ್ಳದಾರಿಯಲ್ಲಿ ಲಿಕ್ಕರ್ ದೊರೆ ಬಸವರಾಜುಗೆ ಶಾಮರಾವ್ ಧಾರೆಯೆರೆದರೋ, ಅದನ್ನು ಪ್ರಶ್ನಿಸಿ ಜನಾರ್ದನ್ ಟವರ್ ಮಾಲೀಕ ಲಕ್ಷ್ಮೀನಾರಾಯಣ ಬೆಳಗಾವಿಯ ಉಪಚಾರಿಟಿ ಕಮೀಷನರ್ ಕೋರ್ಟಿನಲ್ಲಿ ಕೇಸು ಜಡಿದರು. ಅದನ್ನು ಆಧಾರವಾಗಿಟ್ಟುಕೊಂಡೇ ಬೆಳಗಾವಿಯ ಉಪಕಮೀಷನರ್ ಇಳ್ಳೂರ್ ಆಸ್ತಿ ಪರಭಾರೆಗೆ ತಡೆಕೊಟ್ಟರು. ಇಳ್ಳೂರ್ ಪ್ರಾಮಾಣಿಕ ಮತ್ತು ಜನಪರ ಅಧಿಕಾರಿ. ಯಾವ ಅಕ್ರಮಕ್ಕೂ ಯಾವತ್ತೂ ಕೈಯಿಟ್ಟವರಲ್ಲ. ಆದರೆ ಶಾಮರಾವ್ ಜಿದ್ದಿಗೆ ಬಿದ್ದರು. ಸಂ.ಕ.ದ ಬೆಳಗಾವಿ ವರದಿಗಾರ ಅನಿಲ್ ಬೆಟಗೇರಿ ಅದೆಷ್ಟೇ ಹಿಂಜರಿದರೂ ಇಳ್ಳೂರ್ ವಿರುದ್ಧ ಮೂರು ಸುಳ್ಳು ತನಿಖಾ ವರದಿಗಳನ್ನು ಕಳಿಸುವಂತೆ ಧಮಕಿಕೊಟ್ಟು ಅವುಗಳನ್ನು ಪ್ರಕಟಿಸಿಯೂ ಬಿಟ್ಟರು.


ಶಾಮರಾವ್

ಇಷ್ಟಾಗಿದ್ದೇ ಇಳ್ಳೂರ್ ಸರಿದಾರಿಗೆ ಬರುತ್ತಾರೆಂಬುದು ಶಾಮರಾಯರ ಲೆಕ್ಕಾಚಾರವಾಗಿತ್ತು, ಏನೂ ತಪ್ಪು ಮಾಡದ ಇಳ್ಳೂರ್ ತಾನೇ ಏಕೆ ಹೆದರುತ್ತಾರೆ? ತನ್ನ ವಿರುದ್ಧ ಸಂ.ಕ. ಪ್ರಕಟಿಸಿದ ಬ್ಲಾಕ್‌ಮೇಲ್ ವರದಿಯನ್ನೇ ನ್ಯಾಯಾಲಯದ ನಿಂದನೆಯೆಂದು ಬಗೆದು ಕೇಸು ಜಡಿದರು. ಅದರ ವಿರುದ್ಧ ಶಾಮ... ಸುಪ್ರೀಂಕೋರ್ಟ್ ತನಕ ಹೋದರೂ ಶಿಕ್ಷೆಯಿಂದ ಬಚಾವಾಗುವಂತಿರಲಿಲ್ಲ. ಇ... ಜೈಲಿಗೆ ಹೋಗಬೇಕೆನ್ನುವಷ್ಟರಲ್ಲಿ ನೆರವಿಗೆ ಬಂದದ್ದು ಇದೇ ಹಾರ್ನಳ್ಳಿ. ವ... ಸಂಪುಟದಲ್ಲಿ ಕಾನೂನು ಮಂತ್ರಿಯಾಗಿದ್ದ ಹಾರ್ನಳ್ಳಿ ಒಂದೇ ದಿನಕ್ಕೆ ಇಳ... ಎತ್ತಂಗಡಿ ಮಾಡಿ ಶಾಮರಾವ್ ಜೈಲಿಗೆ ಹೋಗುವುದನ್ನು ತಪ್ಪಿಸಿದರು.

ಅದಕ್ಕೆ ಪ್ರತ್ಯುಪಕಾರ ಮಾಡಬೇಕಲ್ಲ. ಹೈಕೋರ್ಟ್ ಹಂಗನ್ನೂ ... ಹಾರ್ನಳ್ಳಿಯನ್ನು ಲೋ.ಶಿ. ಟ್ರಸ್ಟ್‌ಗೆ ಟ್ರಸ್ಟಿಯನ್ನಾಗಿ ಮಾಡಿದ್ದರು ಶಾಮರಾವ್. ಹಾರ್ನಳ್ಳಿ ಹೈಕೋರ್ಟ್ ನೇಮಿಸಿದ ಟ್ರಸ್ಟಿಯಲ್ಲ. ಹೈಕೋರ್ಟ್ ಕಟ್ಟಳೆ ಮೀರಿ ವರ್ತಿಸುವಂತಿಲ್ಲ. ಹಾಗಿದ್ದೂ ಆಸ್ತಿ ಲೂಟಿಗೆ ಸಹಕರಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಅನಿರುದ್ಧ ದೇಸಾಯಿಯನ್ನು ಟ್ರಸ್ಟಿ ಪದವಿಯಿಂದ ಕಿತ್ತೊಗೆದರು. ಸರಿತಾ ಕುಸುಮಾಕರ ದೇಸಾಯಿ ಮತ್ತು ಆರ್.ವಿ. ದೇಶಪಾಂಡೆಯವರನ್ನು ಕಿತ್ತೆಸೆದು ಅಲ್ಲಿಗೆ ತನ್ನ ಭಟ್ಟಂಗಿಗಳಾದ ಉಮೇಶ್ ಭಟ್ಟ ಮತ್ತು ವೆಂಕಟೇಶ್‌ರನ್ನು ತಂದರು.


ಆರ್.ವಿ. ದೇಶಪಾಂ...

ಟ್ರಸ್ಟ್ ಆಸ್ತಿ ಕಂಡೋರ ಪಾಲಾಯಿತು. ಪತ್ರಿಕೆ ನೆಲಕಚ್ಚಿತು. ನುರಿತ ಪತ್ರಕರ್ತರು ಸಂಸ್ಥೆ ಬಿಟ್ಟರು. ಅಳಿದುಳಿದವರನ್ನು ಶಿಕ್ಷಾರ್ಥ ಎತ್ತಂಗಡಿ ಮಾಡಲಾಯಿತು. ಇಷ್ಟಾಗ್ಯೂ ಸ... ಲೋ.ಶಿ. ಟ್ರಸ್ಟ್‌ಗೊಬ್ಬ ಆಡಳಿತಾಧಿಕಾರಿಯನ್ನು ನೇಮಿಸಿ ಅಕ್ರಮಗಳ ... ಮಾಡುತ್ತಿಲ್ಲ ಎಂದರೆ ಏನರ್ಥ?

ಅದಕ್ಕೂ ಜನ ಬೀದಿಗಿಳಿಯಬೇಕೆ?

ಬಾಲಗಂಗಾಧರಸ್ವಾಮಿ ಬಗಲಲ್ಲೊಬ್ಬ ವಿಕೃತಕಾಮಿ

ರಾಮನಗರದ ಆದಿಚುಂಚನಗಿರಿ ಅಂಧ ಮಕ್ಕಳ ಶಾಲೆಯಲ್ಲಿ ಮ್ಮೊಂದು ಲೈಂಗಿಕ ದೌರ್ಜನ್ಯದ ಘಟನೆ ನಡೆದಿದೆ. ಈ ಹೀಚಕ ಕೆಲಸ ಮಾಡಿದವನು ಶಾಲೆಯ ಹೆಡ್‌ಮಾಸ್ಟರ್ ಹನುಮಂತಪ್ಪ. ವನು ಬಾಲಗಂಗಾಧರ ಸ್ವಾಮಿಯ ಪರಮಾಪ್ತ ಬಂಟ. ಗೇ ಇವನ ದುಷ್ಕೃತ್ಯಕ್ಕೆ ಬಲಿಯಾಗಿರುವುದು ಅಂಧ ಬಾಲಕಿ ಮಂಗಳಾ(ಹೆಸರನ್ನು ಬದಲಾಯಿಸಲಾಗಿದೆ.) ನೇ ತರಗತಿಯಲ್ಲಿ ಓದುತ್ತಿದ್ದ ಈ ಮುಗ್ಧ ಬಾಲಕಿ ಮರಾಜನಗರದವಳು. ದುರಂತದ ವಿಚಾರವೇನೆಂದರೆ ಜ್ಯದ ಅತ್ಯಂತ ಪ್ರತಿಷ್ಠಿತ ಮಠದ ಶಾಲೆಯಲ್ಲಿ ಈ ಷ್ಕೃತ್ಯ ನಡೆದಿದ್ದರೂ, ಸ್ವತಃ ಈ ರಾಜ್ಯದ ಮುಖ್ಯ ಂತ್ರಿಯೇ ಪ್ರತಿನಿಧಿಸುತ್ತಿರುವ ಕ್ಷೇತ್ರವಾಗಿದ್ದರೂ ಕೂಡ ಮನಗರ ಪೊಲೀಸರು ಇಡೀ ಪ್ರಕರಣವನ್ನು ಮುಚ್ಚಿ ಹಾಕಿರುವುದು. ಸಬ್‌ಇನ್ಸ್‌ಪೆಕ್ಟರ್ ಹರ್ಷ ಅಂಧ ಬಾಲಕಿ ಮಂಗಳಾ ಹಾಗೂ ಆಕೆಯ ಪೋಷಕರು ಅತ್ಯಾಚಾರ ಗೂ ದೈಹಿಕ ಹಿಂಸೆ-ದೌರ್ಜನ್ಯಗಳ ದೂರನ್ನು ನೀಡಿದ್ದರೂ ಕೇಸ್ ಕದೆ ಕೈಬಿಟ್ಟಿದ್ದಾರೆ. ಅಷ್ಟೇ ಅಲ್ಲ, ಆರೋಪಿ ಹೆಡ್‌ಮಾಸ್ಟರ್ ಹನುಮಂತಪ್ಪನನ್ನು ಠಾಣೆಗೆ ಕರೆಸಿ ಇನ್ನೊಮ್ಮೆ ಇಂತಾ ಕೆಲಸ ಮಾಡುವು ಲ್ಲವೆಂಬ ಮುಚ್ಚಳಿಕೆ ಬರೆಸಿಕೊಂಡು ಬಿಟ್ಟು ಕಳಿಸಿದ್ದಾರೆ.




ಕುಮಾರಸ್ವಾಮಿ ಆಡಳಿತದಲ್ಲಿ ಅತ್ಯಾಚಾರಿಗಳಿಗೆ ಪೊಲೀಸರು ಹೇಗೆ ವಲು ನಿಲ್ಲುತ್ತಾರೆಂಬುದಕ್ಕೆ ಇದೇ ಸಾಕ್ಷಿ.

ಬಾಲಗಂಗಾಧರ ಸ್ವಾಮಿಗೆ ಹಾಗೂ ಮಠದ ಪ್ರತಿಷ್ಠೆಗೆ ಕಳಂಕ ಬರುತ್ತದೆಂದು ಹೀಗೆ ಮಾಡಿದ್ದೇವೆಂದೇ ಈಗ ಪೊಲೀಸರು ಹೇಳಿಕೊಂಡು ತಿರುಗುತ್ತಿದ್ದಾರೆ.

ಆದರೆ ಹೆಡ್‌ಮಾಸ್ಟರ್ ಹನುಮಂತಪ್ಪ ಮಾಡಿರುವುದು ಸ್ವಾಮಿಗೆ, ಮಠಕ್ಕೆ ಹಾಗೂ ಶಾಲೆಗೆ ಗೌರವ ತರುವಂಥದ್ದಾಗಿತ್ತೇ?

ಈ ಹನುಮಂತಪ್ಪನ ಮೇಲೆ ಕೇಳಿಬರುತ್ತಿರುವ ಮೂರನೇ ಲೈಂಗಿಕ ದೌರ್ಜನ್ಯದ ಘಟನೆ ಇದು. ಹಾಗಿದ್ದರೂ ಬಾಲಗಂಗಾಧರನಾಥ ಸ್ವಾಮಿ ಈ ಅತ್ಯಾಚಾರಿಯ ಪರ ನಿಂತು ಅಸಹಾಯಕ ಅಂಧ ವಿದ್ಯಾರ್ಥಿನಿಯರನ್ನೇ ಬಲಿ ಕೊಡುತ್ತಿರುವುದನ್ನು ನೋಡಿದರೆ ಸ್ವಾಮಿಯೇ ಕಣ್ಣಿದ್ದೂ ಕುರುಡನಾಗಿರಬೇಕು ಎನ್ನಿಸುತ್ತದೆ.

ಹನುಮನ ವಿಕೃತಿಗಳು



ಹನುಮಂತಪ್ಪ

ಇನ್ನೂರು ಅಂಧ ಮಕ್ಕಳಿರುವ ಈ ಶಾಲೆಯಲ್ಲಿ ಹನುಮಂತಪ್ಪ ಈ ಮೊದಲು ಸಹ ಶಿಕ್ಷಕನಾಗಿದ್ದ. ಆಗ ಪಿ. ಶಿವರಾಮಯ್ಯ ಹೆಡ್‌ಮಾಸ್ಟರ್. ಈ ಹನುಮ ತಾನೇ ಹೆಡ್‌ಮಾಸ್ಟರ್ ಆಗಬೇಕೆಂದು ಶಿವರಾಮಯ್ಯನವರ ವಿರುದ್ಧ ಮತ್ಯಾರೋ ಮಹಿಳೆಯೊಬ್ಬರ ಹೆಸರು ಸೇರಿಸಿ ಸಂಬಂಧದ ಕತೆ ಹಬ್ಬಿಸಿ ಅವರನ್ನು ಶಾಲೆಯಿಂದ ಓಡಿಸಿ ತಾನೇ ಹೆಡ್‌ಮಾಸ್ಟರಾಗಿಬಿಟ್ಟ. ಶಾಲೆಯ ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಡುವೆ ಹಾಗೂ ಶಿಕ್ಷಕರ ನಡುವೆ ಯಾವಾಗಲೂ ಲೈಂಗಿಕ ಸಂಬಂಧ ಹುಡುಕುವುದು, ತನಗೆ ತಲೆ ಬಾಗದವರ ವಿರುದ್ಧ ಅಶ್ಲೀಲ ಕತೆ ಕಟ್ಟಿ ಪ್ರಚಾರ ಮಾಡುವುದು ಈ ಹನುಮಂತಪ್ಪನಿಗೆ ರೂಢಿಗತ ಅಭ್ಯಾಸ. ಮೊನ್ನೆ ನಡೆದಿರುವುದೂ ಬೇರೆ.

ಅಂಧ ಬಾಲಕಿ ಮಂಗಳಾ ಇನ್ನೊಬ್ಬ ಅಂಧ ಬಾಲಕನೊಂದಿಗೆ ಸಲಿಗೆಯಿಂದ ಇದ್ದಳು. ಆದಕ್ಕೆ ನಾನು ಅವಳನ್ನು ಕರೆದು ಎರಡೇಟು ಕೊಟ್ಟೆ. ಅದೀಗ ಲೈಂಗಿಕ ದೌರ್ಜನ್ಯ ಎಂದು ಗುಲ್ಲಾಗಿದೆ ಎಂದು ಹನುಮ ಪೊಲೀಸರಿಗೆ ಹೇಳಿದ್ದಾನೆ. ಆದರೆ ಇವನು ಅಷ್ಟು ಮುಗ್ಧ ಜೀವಿಯೇನಲ್ಲ, ಕಳೆದ ಗುರುವಾರ ಬೆಳಗ್ಗೆ ತನ್ನ ವಿಕೃತಿಗಳಿಗೆ ಈ ಅಂಧ ಬಾಲಕಿಯನ್ನು ಬಳಸಿಕೊಳ್ಳಲು ಯತ್ನಿಸಿ ಆಕೆ ಸಹಕರಿಸದಿದ್ದಾಗ ಹೊಡೆದು ಬಡಿದೂ ದೌರ್ಜನ್ಯವೆಸಗಿದ್ದಾನೆ. ರೋಸಿಹೋದ ಬಾಲಕಿ ತನ್ನ ತಂದೆ ತಾಯಿಯರಿಗೆ ಈ ವಿಷಯ ತಿಳಿಸಿದಾಗ ಅವರು ಓಡಿ ಬಂದಿದ್ದಾರೆ. ಕೊನೆಗೆ ನಡೆದ ವಿಚಾರ ಕೇಳಿ ರಾಮನಗರ ಪೊಲೀಸರಿಗೆ ದೂರು ನೀಡಿದ್ದಾರೆ. ಆದರೆ ಶಾಲೆಯಿಂದ ನಾಪತ್ತೆಯಾಗಿದ್ದ ಹನುಮಂತಪ್ಪ ಸ್ವಾಮೀಜಿಯ ರೆಕಮೆಂಡೇಷನ್ ಪಡೆದು ಠಾಣೆಗೆ ಹೋಗಿದ್ದಾನೆ. ಮತ್ತೆ ತನ್ನ ಚಾಳಿಯಂತೆ ದೌರ್ಜನ್ಯಕ್ಕೀಡಾದ ಬಾಲಕಿಯ ಮೇಲೆ ಲೈಂಗಿಕ ಸಂಬಂಧಗಳ ದೂರು ಹೇಳಿ ತಾನು ಪಾರಾಗಿದ್ದಾನೆ.

ಬಾಲಗಂಗಾಧರಸ್ವಾಮಿ ಹಾಗೂ ಪೊಲೀಸರಿಗೆ ನೊಂದ ಬಾಲಕಿಯ ನೋವಿಗಿಂತ ವಿಕೃತ ಕಾಮಿ ಹನುಮಂತಪ್ಪನ ಹೇಳಿಕೆಯೇ ನಂಬಲರ್ಹವಾಗಿ ಕಂಡಿದೆ.

ಈ ಹನುಮಂತಪ್ಪ ಅದೇ ಶಾಲೆಯ ಪ್ರೇಮಾ ಎಂಬ ವಾರ್ಡನ್ ಜೊತೆ ಡಿಂಗ್‌ಡಾಂಗ್ ನಡೆಸುತ್ತಿರುವ ವಿಚಾರ ಇಡೀ ರಾಮನಗರಕ್ಕೇ ಗೊತ್ತಿದೆ. ಅಷ್ಟೇ ಅಲ್ಲ, ಈಗ್ಗೆ ಆರು ತಿಂಗಳ ಹಿಂದೆ ಶಾಲೆಯಲ್ಲಿ ಕಸ ಗುಡಿಸುವ ಶಿವಮ್ಮ ಎಂಬುವರನ್ನು ಬಾತ್‌ರೂಮಿನಲ್ಲಿ ಹಿಡಿದುಕೊಳ್ಳಲು ಹೋಗಿ ಗಲಾಟೆಗಳಾಗಿವೆ. ವಾರ್ಡನ್ ಪ್ರೇಮಾ ಹಾಗೂ ಸಂಸ್ಕೃತ ಟೀಚರ್ ಗೀತಾ ಯಾನೆ ರೇಣುಕಾದೇವಿ ಎಂಬುವರು ಹನುಮಂತಪ್ಪನ ವಿಕೃತ ಲೈಂಗಿಕ ಚಾಳಿಗಳಿಗೆ ಅಂಧ ವಿದ್ಯಾರ್ಥಿನಿಯರನ್ನು ಪಳಗಿಸಿ ಬಲಿಕೊಡುವ ಹೀನ ಕೆಲಸ ಮಾಡುತ್ತಿದ್ದಾರೆ.

ಇದೂ ಸಾಲದೆಂಬಂತೆ ಶಾಲೆಯ ಹಣ ಕದಿಯುವುದು, ಸಹೋದ್ಯೋಗಿಗಳಿಗೆ ಕಿರುಕುಳ ನೀಡುವುದು, ಪ್ರತಿಭಟಿಸಿದವರಿಗೆ ಮತ್ಯಾರೊಂದಿಗೋ ಸಂಬಂಧ ಕಲ್ಪಿಸಿ ಪ್ರಚಾರ ಮಾಡುವುದು ಇವೇ ಹನುಮಂತಪ್ಪನ ದಿನಚರಿಯಾಗಿದೆ.

ಈ ವಿಕೃತನಿಂದಾಗಿ ಇವತ್ತು ಇಡೀ ಅಂಧ ಮಕ್ಕಳ ಶಾಲೆಯೇ ರೋಗಗ್ರಸ್ತವಾಗಿ ಹೋಗಿದೆ.

ಬಾಲಗಂಗಾಧರನಾಥ ಸ್ವಾಮಿಗೆ ಈಗ 63 ವರ್ಷ ತುಂಬಿತೆಂದು ಇದೇ ಜನವರಿ 17-18 ಕ್ಕೆ ಭಾರೀ ಕಾರ್ಯಕ್ರಮ ನಡೆಯುತ್ತಿದೆ. ರಾಜ್ಯ ರಾಜಕೀಯ, ಕ್ಯಾಪಿಟೇಶನ್ ಕಾಲೇಜುಗಳ ದುಡ್ಡು, ಸ್ವಂತಕ್ಕೆ ಹೆಲಿಕಾಪ್ಟರ್ ಇಟ್ಟುಕೊಂಡು ಸದಾ ಬ್ಯುಸಿಯಾಗಿರುವ ಬಾಲಗಂಗಾಧರ ಸ್ವಾಮಿಗೆ ತಮ್ಮ ಮಠದ ಆಶ್ರಯದಲ್ಲೇ ಇರುವ ಶಾಲೆಯೊಳಗೆ ಏನು ನಡೆಯುತ್ತಿದೆ ಎಂಬುದರ ತಿಳಿವಳಿಕೆಯೂ ಇರಬಾರದಾ?

ಅದೂ ಯಾವ್ಯಾವುದೋ ದೂರದ ಊರುಗಳಿಂದ ತಂದೆ ತಾಯಿಯಿಂದ ದೂರಾಗಿ ಸ್ವಾವಲಂಬಿ ಜೀವನ ರೂಪಿಸಿಕೊಳ್ಳಲು ಬರುವ ಅಂಧ ಮಕ್ಕಳ ಬಗ್ಗೆ ಕನಿಷ್ಠ ಕಾಳಜಿ ಇರಬೇಕಿತ್ತಲ್ಲವೆ?


ಹೀಗೆ ಮಠದ ಶಾಲೆಯ ಹೆಡ್‌ಮಾಸ್ಟರ್ ಒಬ್ಬನ ಲೈಂಗಿಕ ವಿಕೃತಿಗಳ ಬಗ್ಗೆ ದಾಖಲಾಗುತ್ತಿರುವ ಸತತ 4 ನೇ ದೂರು ಇದು.

ಆದರೇನು, ಬಾಲಗಂಗಾಧರ ಸ್ವಾಮಿಗೆ ಈಗಲೂ ದಿವ್ಯ ಕುರುಡು. ವಿಕೃತ ಕಾಮಿ ಪೋಲಿ ಹನುಮಂತಪ್ಪನಿಗೆ ಅವರ ಕೃಪೆ ರಕ್ಷಣೆ!

–ಈಶ

'ಕೇರಿ'ಯನ್ನು ಊರಿಗೆ ಮಾರಿಕೊಂಡ ಸಿದ್ಧಲಿಂಗಯ್ಯ

ವಿಧಾನಸೌಧವೆಂಬ ಮಾಯಾಮೋಹಿನಿ ಸಿದ್ಧಲಿಂಗಯ್ಯನವರ ಮೈಮೇಲೆ ಆವಾಹನೆ ಆದಾಗಿನಿಂದಲೂ ಈ ದಲಿತ ಕವಿ ಮುಖ್ಯಮಂತ್ರಿ ಕುಮಾರಸ್ವಾಮಿಗಳ ಭಟ್ಟಂಗಿಗಳಾಗಿ ಬಿಟ್ಟಿದ್ದಾರೆ. ದಲಿತರ ಜೀವನದ ನೋವಿನ, ಅಪಮಾನದ, ಜೀವಪ್ರೇಮದ ಹಾಗೂ ಸಮಾನತೆಯ ತವಕದ ಒಬ್ಬ ಪ್ರಜ್ಞಾವಂತ ದಲಿತ ಸಂವೇದನೆಯ ಕವಿಯಾಗಿದ್ದ ಸಿದ್ಧಲಿಂಗಯ್ಯನವರು ಕಳೆದ ಒಂದು ದಶಕದಲ್ಲೇ ತಾವು ಕವಿಯೆಂಬುದನ್ನು ಮರೆತಿದ್ದರು. ವಿಧಾನಸೌಧ ಸೇರಿಕೊಂಡ ಮೇಲೆ ತಾವು ದಲಿತರೆಂಬುದನ್ನೂ ಮರೆತಿದ್ದಾರೆ. ಇಷ್ಟೆಲ್ಲಾ ಏಕೆ ಹೇಳಬೇಕಾಯಿತೆಂದರೆ ತಮ್ಮ 'ಆತ್ಮಕಥನ'ವಾದ 'ಊರುಕೇರಿ'ಯ ಎರಡನೇ ಆವೃತ್ತಿಯನ್ನು ದಲಿತದ್ರೋಹಿ ಕುಮಾರಸ್ವಾಮಿಗೆ ಅರ್ಪಿಸಿದ್ದಾರೆ.



ಕುಮಾರಸ್ವಾಮಿ ತಮ್ಮನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿಸಿದರು ಎಂಬ ಒಂದೇ ಕಾರಣಕ್ಕೆ ಸಿದ್ಧಲಿಂಗಯ್ಯನವರು ತಮ್ಮ ಕೃತಿಯಲ್ಲಿ "ನಾಡಿನ ನೆಚ್ಚಿನ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರಿಗೆ" ಎಂದು ಅರ್ಪಿಸಿದ್ದಾರೆ. ಈ ಹಿಂದೆ ಇದೇ ಸಿದ್ಧಲಿಂಗಯ್ಯನವರು ತಮ್ಮ ಆತ್ಮಕಥನ 'ಊರು ಕೇರಿ'ಯ ಮೊದಲನೆ ಭಾಗವನ್ನು ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಗೆ ಅರ್ಪಿಸಿದ್ದರು. ಯಾವ ಕಾರಣಕ್ಕೆ ಗೊತ್ತಾ? ಅಂದು ಹೆಗಡೆಯವರು ಇದೇ ಸಿದ್ಧಲಿಂಗಯ್ಯನವರನ್ನು ಎಂಎಲ್‌ಸಿ ಮಾಡಿದ್ದರು, ಅದಕ್ಕೆ!

'ಆತ್ಮಕಥನ'ಗಳು ದಲಿತ ಸಾಹಿತ್ಯ ಪ್ರಾಕಾರ ಮಾತ್ರವಲ್ಲ, ಮೂಕರಾಗಿದ್ದ ದಲಿತ ಸಮುದಾಯದ ಆಕ್ರೋಶದ ಅಭಿವ್ಯಕ್ತಿ ಕೂಡಾ ಆಗಿದೆ. ಹೀಗಾಗಿಯೇ ದಲಿತ ಆತ್ಮಕಥನಗಳು ಹಲವು ಹೋರಾಟಗಳ ದಾಖಲೆಯೂ, ಸಮುದಾಯದ ಕನಸಿನ ಪ್ರಣಾಳಿಕೆಗಳೂ ಆಗಿರುತ್ತವೆ. ಆದ್ದರಿಂದಲೇ ದಲಿತ ಸಾಹಿತಿಯ 'ಆತ್ಮಕಥನ' ಒಬ್ಬ ಸಾಹಿತಿಯ ಖಾಸಗಿ ಕಥನ ಅಲ್ಲ, ಬದಲಾಗಿ ಅದರ ಮೇಲೆ ಆ ದಮನಿತ ಸಮುದಾಯಕ್ಕೆ ಒಂದು ಸಾಂಸ್ಕೃತಿಕ ಹಕ್ಕುದಾರಿಕೆ ಇರುತ್ತದೆ. ಅದನ್ನು ಅರಿತುಕೊಂಡಿರುವ ದಲಿತ ಸಾಹಿತಿಗಳು ಈವರೆಗೆ 'ಆತ್ಮಕಥನ'ವನ್ನು ಸಮುದಾಯದ ಭವಿಷ್ಯದ ಬೆಳಕಿಗೆ ಅಥವಾ ಅದರ ಪ್ರೇರಣೆಗೆ ಅರ್ಪಿಸಿದ್ದಾರೆ. ಇದು ದಲಿತ ಆತ್ಮಕಥನಗಳ ಒಂದು ಸಾಮಾನ್ಯ ಸ್ವರೂಪ ಸಹ.

ಸಿದ್ಧಲಿಂಗಯ್ಯನವರು ಈವರೆಗೆ ತಮ್ಮ ಹೋರಾಟಗಳನ್ನು ವಿಧಾನಸೌಧದ ಚಪ್ಪಡಿಯಡಿ ಹೂತು ಹಾಕಿದ್ದರು. ಈಗ ಈ ಸಮುದಾಯಿಕ ಆತ್ಮಕಥನವನ್ನು ದಲಿತ ದ್ರೋಹಿ, ಅಂಬೇಡ್ಕರ್‌ರನ್ನು ಹೊರಗಟ್ಟಿದ ಚೆಡ್ಡಿಗಳೊಂದಿಗೆ ಕೇವಲ ಅಧಿಕಾರಲಾಲಸೆಗಾಗಿ ಸರ್ಕಾರ ರಚಿಸಿದ ಕುಮಾರಸ್ವಾಮಿಗೆ ಅರ್ಪಿಸಿ ಇಡೀ ದಲಿತ ಸಮುದಾಯದ ಆತ್ಮಾಭಿಮಾನಕ್ಕೆ ಅವಮಾನ ಮಾಡಿದ್ದಾರೆ. ಈ ಹಿಂದೆ RSS ಪಿತಾಮಹ ಹೊ.ವೆ. ಶೇಷಾದ್ರಿಯವರನ್ನು ಅಪ್ರತಿಮ ಮಾನವತಾವಾದಿ ಎಂದು ಇದೇ ಬಂಡಾಯ ಕವಿ ಬಣ್ಣಿಸಿದ್ದರು. RSS ನ ವೇದಿಕೆಗಳಲ್ಲಿ 'RSS ಅಪ್ಪಟ ಸೆಕ್ಯುಲರ್' ಎಂದು ಬೆನ್ನು ತಟ್ಟಿದ್ದರು.


ಒಟ್ಟಿನಲ್ಲಿ ಸಿದ್ಧಲಿಂಗಯ್ಯನವರು ತಮ್ಮ ಆತ್ಮಸಾಕ್ಷಿಯನ್ನು ಮಾರಾಟಕ್ಕಿಟ್ಟಿದ್ದಾರೆ. ಬಕರಿಯಾಗಬಲ್ಲವರು ದಲಿತ ಸಮುದಾಯಕ್ಕೆ ಮಾದರಿಯಾಗಲಾರರು.

ಲೋ.ಶಿ. ಟ್ರಸ್ಟ್ ಆಸ್ತಿಯ ಹದಿನೈದು ಸಾವಿರ ಚದರ ಅಡಿಗಳಲ್ಲಿ ಅದು ಪಂಚತಾರಾ ಹೋಟೆಲೊಂದನ್ನು ಕಟ್ಟುವುದು ಮತ್ತು 35 ವರ್ಷಗಳ ನಂತರ ಅದನ್ನು ವಾಪಸ್ಸು ಲೋ.ಶಿ. ಟ್ರಸ್ಟಿಗೇ ಬಿಟ್ಟುಕೊಡತಕ್ಕದ್ದು.

ಇದು ಶಾಮರಾವ್ ಮತ್ತು ಲಿಕ್ಕರ್ ದೊರೆ ಬಸವರಾಜ್ ಮಧ್ಯೆ ಏರ್ಪಟ್ಟ ಒಪ್ಪಂದ. ಹಾರ್ನಳ್ಳಿ ಹೇಳಿದಂತೆ ಟ್ರಸ್ಟಿಗಳೆಲ್ಲ ಆವತ್ತು ಶಾಮರಾಯರ ಗೊಂಬೆಗಳಾಗಿದ್ದರಿಂದ ಯಾರೂ ಈ ಬಗ್ಗೆ ಪ್ರಶ್ನಿಸಲಿಲ್ಲ. ಜೊತೆಗೆ ಚದುರ ಅಡಿಗೆ ತಿಂಗಳಿಗೆ 50 ಪೈಸೆಯಂತೆ ಬಾಡಿಗೆಯನ್ನೂ ತೆರಬೇಕೆಂದು ನಿಗದಿಯಾಗಿತ್ತಾದ್ದರಿಂದ ಯಾರಿಗೂ ಈ ಬಗ್ಗೆ ಗುಮಾನಿ ಹುಟ್ಟಲಿಲ್ಲ. ಅಗ್ರಿಮೆಂಟ್ ಕಾಲಕ್ಕೆ ಬಸವರಾಜು 40 ಲಕ್ಷ ತೆತ್ತರು. 94 ರಲ್ಲಿ ಅಗ್ರಿಮೆಂಟಿನ ರಿಜಿಸ್ಟ್ರೇಷನ್ ಆಗಿತ್ತು, ಅದರ ಬದಲಾಗಿಯೇ ಲಿಕ್ಕರ್ ದೊರೆ ಎರಡೂವರೆ ಕೋಟಿಯಲ್ಲಿ ಸಂ.ಕ.ದ ಹೊಸ ಕಚೇರಿಯನ್ನೂ ಕಟ್ಟಿಸಿಕೊಟ್ಟ. ಆಸ್ತಿ ಹಸ್ತಾಂತರಿಯ ಎರಡನೇ ಕಂತಾಗಿ ಮತ್ತೆ 40 ಲಕ್ಷವನ್ನೂ ಕೊಟ್ಟ. ಸಂ.ಕ. ಹಳೇ ಕಚೇರಿ ಹೊಸ ಕಟ್ಟಡಕ್ಕೆ ಸ್ಥಳಾಂತರಗೊಂಡು ಹಿಂದಿದ್ದ ಐತಿಹಾಸಿಕ ಸಂ.ಕ. ಕಟ್ಟಡವನ್ನೇ ಕೆಡವಿಬಿಟ್ಟ.

ಒಪ್ಪಂದದ ಪ್ರಕಾರ ಅಲ್ಲಿ ಪಂಚತಾರಾ ಹೋಟೆಲ್ ಕಟ್ಟಿ ಬೇರೇನನ್ನೂ ಕಟ್ಟುವಂತಿಲ್ಲ, ಟೆಂಡರ್ ಕರೆದದ್ದೂ ಹೋಟೆಲಿಗೆ ಅಂತಲೆ. ಯಾವತ್ತು ಲಿಕ್ಕರ್ ದೊರೆ ಬಸವರಾಜು ಮುಂಬಯಿಯ ಬಿಲ್ಡರ್ ಒಬ್ಬನ ಜೊತೆ ಸೇರಿ ಅಲ್ಲಿ ಕಾಂಪ್ಲೆಕ್ಸ್ ಕಟ್ಟಿಸುತ್ತಿದ್ದಾರೆಂಬುದು ಶಾಮರಾವ್ ಗಮನಕ್ಕೆ ಬಂತೋ, ತಕ್ಷಣವೇ ಒಪ್ಪಂದ ರದ್ದು ಮಾಡುವ ನೋಟೀಸ್ ಕೊಟ್ಟು ಬಸವರಾಜು ಕಡೆಯವರನ್ನೆಲ್ಲ ಕಾಂಪೌಂಡ್ ಬಿಟ್ಟೇ ಓಡಿಸಿಬಿಟ್ಟರು ಶಾಮರಾವ್. ಇದಾಗಿದ್ದು 1994 ರಲ್ಲಿ.

ಕೊಟ್ಟ ನೋಟೀಸಿಗೆ ಬಸವರಾಜ್ ಯಾವುದೇ ಉತ್ತರ ಕೊಡಲಿಲ್ಲ. ಇದಾಗಿ ಕೆಲ ದಿನಕ್ಕೇ ಬಸವರಾಜ್ ತೀರಿಕೊಂಡರು. ಅವರ ಮಗ ನಾರಾಯಣಸ್ವಾಮಿ ಇಡೀ ಆಸ್ತಿಗೆ ವಾರಸುದಾರನಾದ. ಏನು ಉದ್ದೇಶವಿತ್ತೋ ಹಾರ್ನಳ್ಳಿಯೇ ತಿರುಗಿಬಿದ್ದು ಶಾಮರಾಯರನ್ನು ಹೊರಗಟ್ಟಿಬಿಟ್ಟರು. ಅದೇ ಕೊರಗಿಗೆ ಹಾಸಿಗೆ ಹಿಡಿದು ಶಾಮರಾವ್ ಕೂಡ ತೀರಿಕೊಂಡರು. ಹಾರ್ನಳ್ಳಿ ಎರಡನೇ ಬಾರಿಗೆ ಲೋ.ಶಿ. ಟ್ರಸ್ಟ್ ಅಧ್ಯಕ್ಷರಾಗುವ ಹೊತ್ತಿಗೆ ಸಂ.ಕ. ಆಸ್ತಿ ಪರಭಾರೆ ವಿವಾದಕ್ಕೆ ಹತ್ತು ವರ್ಷಗಳಾಗಿದ್ದವು. ಶಾಮರಾಯರ ಜಾಗಕ್ಕೆ ಗುಂಡಾ ಭಟ್ಟರನ್ನು ತಂದು ಆನಂತರ ಅಲ್ಲಿಗೆ ನಾರಾಯಣಮೂರ್ತಿ ವಕ್ಕರಿಸಿದ್ದ. ಈ ಹಂತದಲ್ಲೇ ಆಂಧ್ರದ ದಾಸರಿ ಬಿಲ್ಡರ್ಸ್ ಖದೀಮ ಶೇಖರ್ ಸಂ.ಕ. ಆಸ್ತಿಗೆ ಕೈಹಾಕಿದ್ದಾನೆ!



ನಾರಾಯಣಮೂರ್ತಿ

ಕನಿಷ್ಠವೆಂದರೂ 50 ಕೋಟಿಯ ಆಸ್ತಿ, ಹಾರ್ನಳ್ಳಿಯ ಬಾಯಿಗೆ ಒಂದಷ್ಟು, ಸೆಕ್ರೆಟರಿ ನಾರಾಯಣಮೂರ್ತಿಗೆ ಇನ್ನಷ್ಟು ತುರುಕಿಬಿಟ್ಟರೆ ಇಡೀ ಆಸ್ತಿ ತನ್ನ ಕೈ ಸೇರುತ್ತದೆ ಎಂದೇ ಲೆಕ್ಕ ಹಾಕಿದ ಶೇಖರ್ ಒಂದು ಮೂಲದ ಪ್ರಕಾರ ಲಿಕ್ಕರ್ ನಾರಾಯಣಸ್ವಾಮಿಗೆ ಹತ್ತು ಕೋಟಿ ತೆತ್ತು ಉಪಗುತ್ತಿಗೆ ಮಾಡಿಕೊಂಡಿದ್ದಾನೆ. ಈಗ ಅಲ್ಲಿ ಕಮರ್ಷಿಯಲ್ ಕಾಂಪ್ಲೆಕ್ಸ್ ಎಬ್ಬಿಸಿ ಐವತ್ತು ಕೋಟಿ ಕಮಾಯಿಸಲು ಷಡ್ಯಂತ್ರ ನಡೆಸಿದ್ದಾನೆ.


'ಇಲ್ಲಿ ದಾಸರಿ ಬಿಲ್ಡರ್ಸ್ ಧಣಿ ಶೇಖರ್‌ನ ಲೆಕ್ಕಾಚಾರವೇ ಬೇರೆ. ಲೋ.ಶಿ. ಟ್ರಸ್ಟ್ ಕೇವಲ 15 ಸಾವಿರ ಅಡಿಗಳಿಗೆ ಒಪ್ಪಂದ ಮಾಡಿಕೊಂಡಿದೆ ಯಾದರೂ ವಾಸ್ತವವಾಗಿ ದಕ್ಕುವುದು 35 ಸಾವಿರ ಚದುರ ಅಡಿಗಳು. ಹಿಂದಿರುವ ಸಂ.ಕ. ಕಟ್ಟಡ ಮತ್ತು ಮುಂದಿರುವ ಜನಾರ್ದನ್ ಟವರ್ ಜಾಗವನ್ನು ಹೊರತುಪಡಿಸಿದರೆ ಮಿಕ್ಕೆಲ್ಲಾ ಜಾಗ ತನ್ನ ಕೈ ಸೇರುತ್ತದೆ. ಹೋಟೆಲಿಗೆ ಬದಲಾಗಿ ಕಾಂಪ್ಲೆಕ್ಸ್ ಕಟ್ಟಿ ಬಾಡಿಗೆ ಬಿಟ್ಟರೆ ಪಕ್ಕಾ ಆದಾಯವಿದೆ. ಅಷ್ಟಕ್ಕೂ ಲೋಕ ಶಿಕ್ಷಣ ಟ್ರಸ್ಟಿಗೆಂದು ಆತ ಕೊಡುವ ಬಾಡಿಗೆಯಾದರೂ ಎಷ್ಟು? ಚದುರ ಅಡಿಗೆ ಕೇವಲ 50 ಪೈಸೆ. ಹೆಚ್ಚೆಂದರೆ ತಿಂಗಳಿಗೆ ಮೂವತ್ತು ಸಾವಿರ. ಅದೂ 15 ಸಾವಿರ ಅಡಿಗಳಿಗೆ ಮಾತ್ರ. ಆದರೆ ಗಿಟ್ಟುವುದು 35 ಸಾವಿರ ಚದುರ ಅಡಿಗಳು!

ನಿಜಕ್ಕೂ ಸಂ.ಕ. ಬಗ್ಗೆ ಅಥವಾ ಲೋಕ ಶಿಕ್ಷಣ ಟ್ರಸ್ಟ್ ಬಗ್ಗೆ ಕನಿಷ್ಠ ಕಾಳಜಿಯಿದ್ದರೂ ಹಾರ್ನಳ್ಳಿ ರಾಮಸ್ವಾಮಿಯವರು ಶಾಮರಾಯರಂತೆ ಇಡೀ ಒಪ್ಪಂದವನ್ನೇ ರದ್ದು ಮಾಡಬೇಕಿತ್ತು. ಹಾಗೊಮ್ಮೆ ದಾಸರಿ ಬಿಲ್ಡರ್ಸ್ ಜೊತೆಗೇ ನೇರ ವ್ಯವಹಾರ ಕುದುರಿದ್ದರೆ ಟ್ರಸ್ಟಿಗೆ ಕೋಟಿಗಟ್ಟಲೇ ಹಣ ತರಬೇಕಿತ್ತು. ಇದ್ಯಾವುದನ್ನೂ ಮಾಡದೇ ದಾಸರಿ ಬಿಲ್ಡರ್ಸ್ ಖದೀಮರಿಗೆ ಕಟ್ಟಡ ಕಟ್ಟಲು ಬಿಟ್ಟಿದ್ದಾರೆಂದರೆ ಏನರ್ಥ?

ಯಾವ ಆಧಾರದ ಮೇಲೆ ಹೋಟೆಲ್ ಬದಲಿಗೆ ಕಾಂಪ್ಲೆಕ್ಸಿಗೆ ಸಮ್ಮತಿಸಿದ್ದಾರೆ? ಏಕೆ ಅಗ್ರಿಮೆಂಟ್ ರದ್ದು ಮಾಡಿಲ್ಲ? ಏಕೆ ಹೊಸ ಟೆಂಡರ್ ಕರೆಯಲಿಲ್ಲ? ಇಂಥದೊಂದು ವ್ಯವಹಾರವನ್ನು ಏಕೆ ಸರ್ಕಾರದ ಗಮನಕ್ಕೆ ತರಲಿಲ್ಲ? ಸರ್ಕಾರದ ಸಮ್ಮತಿಯಿಲ್ಲದೆ ಸರಿಸುಮಾರು ಹದಿನೇಳು ಸಾವಿರ ಚದುರ ಅಡಿಗಳಷ್ಟು ಭೂಮಿಯನ್ನು ಉಚಿತವಾಗಿ ಕೊಟ್ಟಿದ್ದೇಕೆ? ದಾಸರಿ ಬಿಲ್ಡರ್ಸ್ ಖದೀಮನಿಂದ ಅವರ ಖಾಸಗಿ ಅಕೌಂಟಿಗೆ ಜಮೆಯಾದ ದುಡ್ಡೆಷ್ಟು?

ಒಂದಂತೂ ಸತ್ಯ. ಹಾರ್ನಳ್ಳಿಯವರನ್ನು ಟ್ರಸ್ಟಿಯನ್ನಾಗಿ ಮಾಡುವಾಗ ಯಾರೆಲ್ಲ ಕುತ್ತಿಕ್ಕೆ ಹಾವೇಕೆ ಬಿಡುತ್ತೀರಿ ಎಂದಿದ್ದರೋ ಅದು ನಿಜವಾಗಿದೆ. ಸಂ.ಕ.ದ ಅಮೂಲ್ಯ ಆಸ್ತಿ ಆಂಧ್ರದ ಬಿಲ್ಡರ್ ಪಾಲಾಗಿದೆ. ●

ಆಟೊಂತರ ಆಸ್ತಿಯಿದ್ರೂ ಸಿವುಕುಮಾರ ಯಮ್ಮೆ ಕಟ್ಟಿದ್ದನಂತೆ



ತೊಲ ಕುಯ್ದ ನಂತರ ಅರಿಯನ್ನು ಕಂತೆಕಟ್ಟಿ ಅಲ್ಲಲ್ಲೇ ಬಸಾದಿದ್ದರು. ಇನ್ನು ಮೆದೆ ಹೊಟ್ಟಿರಲಿಲ್ಲ. ಒಂದು ಕಾಲದಲ್ಲಿ ಹೊಟ್ಟುವ ಮೆದೆಯ ಎತ್ತರದಿಂದಲೇ ಬೆಳೆದವನ ಹೆಗ್ಗಳವಂತಿಕೆಯನ್ನು ಅಳೆದು ಗೌರವ ಕೊಡುವುದಿತ್ತು. ಆದರೆ ಕಾಲ ಬದಲಾಗಿ ಎತ್ತರದ ಮತ್ತು ಸಣ್ಣ ಮೆದೆಗಳು ಇನ್ನು ಕೃಷಿ ಕೆಲಸ ಬಟ್ಟಿಲ್ಲವೆಂಬ ಸೂಚನೆ ತೋರುತ್ತಿದ್ದವೇ ಹೊರತು ಅವೇ ಸಾಮಾಜಿಕ ಬೆಲೆ ತಂದು ಕೊಡುವ ಬಣವೆಗಳಾಗಿರಲಿಲ್ಲ. ಈ ಬಗ್ಗೆ ಗಾಢವಾಗಿ ಯೋಚಿಸುತ್ತ ಕಾಫಿ ಜೊತೆಗೆ ಬೀಡಿ ಎಳೆಯುತ್ತಿದ್ದ ಕಾಳಮಾವ,

"ಅಲ್ಲಾ ಎಲ್ಲಿಗೆ ಬತ್ತಯ್ಯ ಕಾಲ. ನಮ್ಮ ಕಾಲ್ದಲ್ಲಿ ಜನ ಮ್ಯದೆ ನೋಡಿ ಮೆಚ್ಚಿ ಮಾತಾಡರು. ಈಗ ನೀನೇನು ಬ್ಯಳದಿದ್ದಿ ಅಂತ ಕೇಳೋರೆ ಇಲ್ಲ, ಹೋಗತ್ತಗೆ" ಎಂದ.

"ಕಾಸು ತರೊ ಕಾಯಿ ಬೆಳಕ್ಕೆ ಸುರುವಾದಾಗ್ಲಿಂದ ರಾಗಿ ಮ್ಯದೆ ಬ್ಯಲೆ ಕಳಕಂಡೊ ಕಣಮಾವ" ಎಂದ ಉಗ್ರಿ.

"ಅದು ನಿಜ. ಅನ್ನ ಬ್ಯಳಿಯೋನಿಗೆ ಯಾವತ್ತು ಬ್ಯಲೆಯಿತ್ತು ಹೇಳು. ಇಪ್ಪತ್ತು ಕಂಡುಗ ರಾಗಿ ಬ್ಯಳಿತಿನಿ ಅನ್ನೋನಿಗಿಂತ ಒಂದು ಸವುರ ಕಾಯಿ ಕಡೆಗತಿನಿ ಅನ್ನೋನಿಗೆ ಇವತ್ತು ಬ್ಯಲೆ ಭಂದದೆ" ಎಂದ.

"ಏ ನುಸಿ ರೋಗ ಬಂದು ಕಾಯಿ ಬೀಳೋನಿಗೂ ಬ್ಯಲೆ ಕಡಿಮ್ಯಾಗ್ಯದೆ ಕಂಣ್ರೊ" ಎಂದ ಸೀರ.

"ಜನ ಯಾತಕ್ಕೆ ಬ್ಯಲೆ ಕೊಡ್ತರೆ ಅನ್ನದೆ ಗೊತ್ತಾಯ್ತಯಿಲ್ಲ ಹೋಗತ್ತಗೆ" ಎಂದ ಕಾಳಮಾವ.

"ದುಡ್ಡಿಗೆ ಕಣ ಮಾವ. ಜನ ಇವತ್ತಿನ ದಿವಸದಲ್ಲಿ ದುಡ್ಡಿಗೆ ಬ್ಯಲೆ ಕೊಡದು" ಎಂದ ಉಗ್ರಿ.

"ಅಲ್ಲ ಕಂಧ್ಯ ಉಗ್ರಿ, ಜನ ದುಡ್ಡಿಗೆ ಬ್ಯಲೆ ಕೊಡ್ತರೆ ಅನ್ನದಾಗಿದ್ರೆ ಆ ಡಿ.ಕೆ. ಸಿವುಕುಮಾರ ಯಮ್ಮೆ ಯಾಕೆ ಕಟ್ಟುತಿದ್ದ ಹೇಳು" ಎಂದ ಸೀರ.

"ಸಿವಕುಮಾರ ಯಮ್ಮೆ ಕಟ್ಟಿದ್ನೆ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ಊ ಕಣೆ ಪೇಪ್ರುಲ್ಯಲ್ಲ ಬಂದದೆ."

"ನೋಡಪ್ಪ, ಆಟೊಂತರ ಅಡವು ಆಸ್ತಿ ಇದ್ದುವೆ ಯಮ್ಮೆ ಕಟ್ಟುತನೆ ಅಂದ್ರೆ ಇನ್ನೇನಾದಾಯ ಇರಬೇಕು?"

"ಈಚೆಗೆ ದ್ಯಾವೇಗೌಡನ ಮಗ ಒಂದು ಲೀಟರಾಲಿಗೆ ಒಂದೊ ಯರಡೊ ರೂಪಾಯಿ ಏರಿಸಿದನಲ್ಲಾ, ಅದ್ಕೆ ಕಟ್ಟಿರಬೇಕು ತಗೊ" ಎಂದ ಕಾಳಮಾವ.

"ಅಂಗಲ್ಲ, ಹಸಿಗಿಂತ ಯಮ್ಮೆ ವಳ್ಳೆವು ಬಾಳಕೆ ಬತ್ತವೆ ಅಂತ ಕಟ್ಟಿರಬೇಕು" ಎಂದ ಉಗ್ರಿ ವ್ಯಂಗ್ಯವಾಗಿ.

"ಊ, ಹಸಿಗಳಿಗಿಂತ ಯಮ್ಮಿಗೆ ಕಾಯಲ ಕಸಾಲ ಕಮ್ಮಿಯಲವೆ?" ಎಂದು ಜುಮ್ಮಿ ಎಮ್ಮೆ ಸಾಕಣೆಯನ್ನು ಸಮರ್ಥಿಸಿಕೊಂಡಳು.

"ಥೂ, ಥೂ, ಸ್ಟಾಪ್ ದಿಸ್ ನಾನ್‌ಸೆನ್ಸ್ ಟಾಕ್. ಏನಕ್ಕ ನೀವು ಹಿಂಗೆ ಮಾತಾಡ್ತಿರಿ. ಡಿ.ಕೆ. ಶಿವಕುಮಾರ ಎಂ.ಎ. ಪರೀಕ್ಷೆ ಕಟ್ಟಿ ಪಾಸು ಮಾಡ್ಯವುನೆ" ಎಂದ ವಾಟಿಸ್ಸೆ.

"ನಿಜವೇನ್ಲ? ಅಯ್ಯೋ ನಿಮ್ಮಾರತ್ತ ಹೋಗತ್ತಗೆ. ನಾನು ಇದೇನಪ್ಪ ಅಂತಿನಿ" ಎಂದು ಜುಮ್ಮಿ ನಗತೊಡಗಿದಳು.

"ಓಹೊಹೊ ನಿಜ ಅನ್ನ ಕಂಡೇನೊ ನೀನು? ಅಲ್ಲ ಕಣಕ್ಕ ಶಿವುಕುಮಾರ ಯತ್ತ ಮುಂದಾಗಿ ಕೈಹಾಕಿದ್ರು ನೋಟಿನ ಕಂತೆ ಸಿಗತವೆ. ಅಂತದ್ರಲ್ಲಿ ಯಮ್ಮೆ ಕಟ್ಟಿ, ಸಗಣಿ ಬಾಚಿ, ಗಂಜಲ ತುಂಬಿ, ಹೂದು, ಹಾಲು ಕರಿಯೋ ಕ್ಯಲಸಕ್ಕೆ ಯಾಕೋ ದನೂ ಅಂತ ಯೇಚನೆ ಮಾಡದು ಬ್ಯಾಡವೆ?"

"ಸೀರ ಮಾವನ ಜ್ವತಿಗೆ ಉಗ್ರಿನೂ ಮಾತು ಸೇರಿಸಿದಾಗ ನಂಬದೆ ಇನ್ನೇನು ಮಾಡೀ?"

"ಸೀರ ಚಿಗಪ್ಪ ಹೇಳಿದ್ರಲ್ಲಿ ಅರ್ಥ ಇದೆ. ಬೇಕಾದೋಟು ದುಡ್ಡಿದ್ರು ಶಿವುಕುಮಾರ ಯಮ್ಮೆ ಓದಿ ಪಾಸು ಮಾಡ್ಯವುನೆ ಅಂದ್ರೆ ಜನ ದುಡ್ಡಿಗಲ್ಲ, ಓದಿಗೆ ಬ್ಯಲೆಕೊಡ್ತರೆ ಅಂತ ಚಿಗಪ್ಪ ಹೇಳಿದ್ದು."

"ಅಂಗೆ ಓದಿಗೆ ಬ್ಯಲೆ ಕೊಡೋ ಕಾಲ ಹೋಯ್ತು ಕಣೊ ವಾಟಿಸ್ಸೆ. ಹಾಸನದತ್ರ ಯಮ್ಮೆ ಓದಿರೊ ಹುಡುಗ ರೋಡು ಗ್ಯಲಸ ಮಾಡ್ತಾಯಿದ್ದ ನಂತೆ, ಇದಕೇನೇಳ್ತಿ?"

"ಅಂಗರೆ ಶಿವುಕುಮಾರ್‍ಯಾಕೆ ಯಮ್ಮೆ ಮಾಡಿದ?" ಎಂದಳು ಜುಮ್ಮಿ.

"ಅದರಲ್ಲೊಂದು ಸೀಕ್ರೇಟದೆ ಕಣಕ್ಕ. ಅದು ನನಿಗೆ ಮಾತ್ರ ಗೊತ್ತು."

"ಏನಪ್ಪ ಅದು ಸಿಕರೇಟು?"

"ಈ ದೇವೇಗೌಡನ ಮಗ ವಬ್ಬ ಮುಖ್ಯಮಂತ್ರಿ ಆಗ್ಯವುನೆ. ಅವುನು ಡಿಗ್ರಿ ಮಾಡಿಲ್ಲ, ಇನ್ನೊಬ್ಬ ಮಗ ಯರಡು ಮೂರು ಖಾತೆಯ ಕತ್ತೆ ತರ ಹೊತಗಂಡು ಹೋಯ್ತಾ ಅವ್ರುನೆ. ಅವನೂ ಯಮ್ಮೆ ಮಾಡಿಲ್ಲ, ಇಂತವ ನಾನು ಸೋಲಿಸಲೇಬೇಕು ಅಂತ ಚಾಲೆಂಜ್ ಮಾಡಿಕಂಡು ಎಂ.ಎ. ಎಗ್ಸಾಂ ಬರದು ಪಾಸಾಗಿದ್ದನಂತೆ."

"ಹಟ ಅಂದ್ರೆ ಅದು ಕಂಧ್ಯ" ಎಂದು ಸೀರ ಮೆಚ್ಚುಗೆ ಕಣ್ಣುಬಿಟ್ಟ.

"ಈ ವಯಿಸಿನಲ್ಲಿ ಶಿವಕುಮಾರ ಯಮ್ಮೆ ಪರೀಕ್ಷೆ ಬರದು ಪಾಸಾಯ್ತನೆ ಅಂದ್ರೆ, ನಿಮಿಗೇನಾಗಿತ್ಲ, ಒಂದ್ಯಸೆಸ್ಸಿ ಮಾಡಿಕಳಕ್ಕು ಆಗಲಿಲವೆ?" ಎಂದು ಜುಮ್ಮಿ ಮೂದಲಿಸಿದಳು.

"ನೋಡಕ್ಕ ನಾನು ಡಿಗ್ರಿ ಮಾಡದೆಯಿರಬವುದು. ಆದರೆ ಈ ರಾಜ್ಯದ ಮುಖ್ಯಮಂತ್ರಿಗಿಂತ ನಾನು ಬುದ್ಧಿವಂತ" ಎಂದ ವಾಟಿಸ್ಸೆ.

"ಬುದ್ಧಿವಂತ ಸರಿ. ಆದ್ರೆ ಬುದ್ಧಿ ಬೂಲೋಕ ಆಳತಾಯಿದ್ರೆ, ಅದುರುಸ್ಟ ಕತ್ತೆ ಕಾಯ್ತಿತ್ತಂತೆ ಅಂಗಾಗ್ಯದೆ ನಿಮಿಗೆ."

"ಎಜ್ಜಾಟ್ಲಿ ಕರಟ್ ಕಣಕ್ಕ. ಆದ್ರುವೆ ನಾನು ಅದೃಷ್ಟ, ಪದೃಷ್ಟ ಇಂತ ಅನಿಷ್ಟನ್ಯಲ್ಲ ನಂಬದಿಲ್ಲ ಗೊತ್ತೆ?"

"ಅಲ್ಲ ಕಣೊ ಹಂದಿರೊ ಚಂದಕೆ ಹಾಳುಗ್ಸಾಡೆ ಜರಿತು ಅಂತ ಕುಮಾರಸ್ವಾಮಿಗಿಂತ ಬುದ್ಧಿವಂತ ಅಂತ ಕೊಚಗತಿಯಲ್ಲಾ, ಅವುನು ಏನು ತಲೆ ಓಡಿಸಿ ರಾಜಕಾರಣ ಮಾಡ್ತ ಅವುನೆ ಗೊತ್ತೇನೊ?" ಎಂದು ಉಗ್ರಿ ಹೇಳುವಾಗ ಕಣ್ಣು ಮಿನುಗಿಸಿದ ಕಾಳಮಾವ.

"ಅದೇನು ಮಾಡಿದ ಹೇಳ್ಯ?" ಎಂದ.



"ಅವುನು ಪೂಜಾಕ್ಯೋಗಿದ್ನಲ್ಲ, ಮೂ... ಮೂರು ಜನ ಬಿಜೆಪಿ ಯಮ್ಮೆಲ್ಯೆಗಳನ್ನು ಕರಕಂ... ವಳಿಕಾಯ್ಕಂಡಿದ್ದನಂತೆ."

"ಓ ಅಂಗರೆ ಬಿಜೆಪಿಗಳು ಗೂಡಾರ ಅನ್ನು?"

"ಅಂಗೆ ಕಾಣ್ತಾದಪ್ಪ"

"ಕೀಳ್ಕಿಬುಡು ಅವುನವುನ್ ಜಾತಿನ್ಯಾಡ. ಹಿಂದೂಗಳಂತೆ ಹಿಂದೂಗಳು. ಉಳದೋರ್‍ಯಲ್ಲ ಅನ್ನಕಂಡ್ರೊ. ಎಲ್ಲಿ ನೋಡು ಬಾವುಟ ಸಿಗಿ... ಕುಣಿತವಂಗೆಯ" ಎಂದು ಸೀರ ಹಲ್ಲು ಕರಿ...

"ಅದ್ಯಾಕಂಗೆ ಕುಣದವುಲ ಅವು" ... ಜುಮ್ಮಿ.

"ನೋಡಕ್ಕ, ಈ ದ್ಯಾವೇಗೌಡ ಎಡ... ಮುಖ್ಯಮಂತ್ರಿ ಮಾಡ್ತನೆ ಅಂತ ಅವು ಯ... ತಿಳಕಂಡಿಲ್ಲ. ಯಾವತ್ತಾದ್ರು ಯಲಕ್ಷನ್ ಬರಬ... ಅಷ್ಟೊತ್ತಿಗೆ ಪಾರ್ಟಿ ಕಟ್ಟನ ಅಂತ ಹೇಳಿ ... ತುಂಬ ಕೇಸರಿ ಬಾವುಟ ಕಟ್ಟಿ 'ನಾವು ಹಿಂದ... ನಾವು ಹಿಂದೂಗಳು' ಅಂತ ಕೂಗ್ತವೆ. ಆ ... ವಳಗ್ವಳಗೇ ನಗತವೆ, ಇದಕೇನೇಳ್ತೀ?"

"ಆ ಸಾಬರು ಅಂಗೆ ಅವುರೆ ತಗೊ, ಬೆ... ಗ್ಯಲ್ಲ ಬಾಂಬಾಕಕ್ಕೆ ಅಂತ ಅವುನ್ಯಾರೊ ಬಂದಿ...

"ಬಂದಿದ್ದು ನಿಜ. ಸಿಗಾಯ್ಕಂಡಿದ್ದು ನಿಜ. ... ಸಾಬರನ್ಯಲ್ಲ ದವುಟು ಮಾಡಂಗೆ ಮಾತ... ಸರಿಯೇನಕ್ಕ? ಈಗ ನಿನ್ನನೇ ಹುಡಿಕ್ಯಂಡು ಆ ... ಜಲೀಲ ಬತ್ತರೆ. ಅವರು ನನ್ನಂಗೆ, ಉಗ್ರಿಯಂಗೆ ... ಅಥವಾ ಬೇರೆ ತರ ಕಾಣ್ತರೊ?"

"ಪಾಪ ವಳ್ಳೆ ಹುಡುಗ್ರು ಕಂಧ್ಯ ಅವು" ... ಜುಮ್ಮಿ.

"ಈ ಬಿಜೆಪಿಗಳು ಅರ್ಧ ಸರ್ಕಾರ... ಹಿಂಗಾಡ್ತರಲ್ಲ ಇನ್ನು ಪೂರ ಇವುರದ... ನಮ್ಮ ದೇಸ ಬದಿಕ್ಯತೇನ್ಲ?" ಎಂದ

"ಯಕ್ಕುಟ್ಟಿ ಹೋಯ್ತದೆ ಚಿಗಪ್ಪ. ಹೆದ್ರಿಕಂಡು ಸುಮ್ಮನಾಯ್ತರೆ. ಕಿರುಸ್ತಾ... ಅಡಿಗೋಯ್ತದೆ. ಇನ್ನು ನನ್ನಂಥೋ... ಉಗ್ರಿ ಅಂಥೋರ ಮ್ಯಾಲೆ ಹಾಕಬಾರ... ಹಾಕ್ಸಿ, ಕೋರ್ಟತ್ರ ಇರಂಗೆ ಮಾಡ್ತರೆ. ... ಪವರ್‍ಗೆ ಬಂದ್ರೆ ಏನೇನು ಮಾಡ್ತರೆ ... ಒಂದು ದಿನ ಮಾತಾಡಬವುದು. ಸ... ಮ್ಯಾಟ್ರು ಡ್ರಾಪ್ ಮಾಡನ."

"ಸರಾಪನೂ ನಿಲ್ಸುಸ್ತರಂತಲ್ಲಾ?" ಜಮ್ಮಿ ನಕ್ಕಳು.

"ಸರಾಪ ನಿಲ್ಲಿಸಿದ್ರೆ ಆಟೋಮಾ... ಯಂಡ ಸುರುಮಾಡಬೇಕಾಯ್ತದೆ. ಇಲ್ಲ... ಸರ್ಕಾರವೇ ನಿಂತೋಯ್ತದೆ ಕಣಕ್ಕ."

"ಅಂಗಂತಿಯಾ?"

"ಇವುರಾಡೊ ಮಾತನೂ ನಂಬತಿಯಲ್ಲಕ್ಕ... ರಿಯಲಿ ದಿಸೀಸ್ ಆಲ್ ನಾನ್‌ಸೆನ್ಸು, ಗುಡ್...

–ಬಿ. ಚಂದ್ರೇ...

ಜತ್ರೋಪ ಹೆಸರಲ್ಲಿ ಸರ್ಕಾರಕ್ಕೆ ವಂಚನ...

ಎರಡು ವರ್ಷಗಳ ಹಿಂದೆ ಪ್ರಮುಖ ಜೈವಿಕ ಇಂಧನದ ಜತ್ರೋಪ ಬೆಳೆಯ ಅಭಿವೃದ್ಧಿ ನೆಪದಲ್ಲಿ 1500 ಕೋಟಿ ರೂ. ಬಂಡವಾಳ ಹೂಡಿ ರೈತರೊಂದಿಗೆ ಒಪ್ಪಂದ ಮಾಡಿಕೊಳ್ಳುವುದಾಗಿ ಬೊಗಳೆ ಬಿಟ್ಟಿದ್ದ ಅನಿವಾಸಿ ಭಾರತೀಯ ಕಂಪೆನಿಯೊಂದು ಸರ್ಕಾರಕ್ಕೆ 150 ಕೋಟಿ ರೂ. ಪಂಗನಾಮ ಹಾಕಲು ನೀಲನಕ್ಷೆ ಸಿದ್ಧಪಡಿಸಿದ್ದ ಸಂಚು ಈಗ ಬಟಾಬಯಲಾಗಿದೆ.

ಸುಮಾರು 850 ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ನೇಮಿಸಿಕೊಂಡು ಸರ್ಕಾರ ಮತ್ತು ರೈತರನ್ನು ಚಪರಾಲ ಎಲ್.ಎಲ್.ಸಿ. ಟೆಕ್ಸಾಸ್ (ಯುಎಸ್‌ಎ) ಕಂಪನಿ ವಂಚಿಸುತ್ತಿದೆ ಎಂದು ಈಗ ಕಂಪೆನಿಯ ಅಧಿಕಾರಿಗಳೇ ಹೋರಾಟ ಸಮಿತಿ ರಚಿಸಿಕೊಂಡು ಪ್ರತಿಭಟಿಸತೊಡಗಿದ್ದಾರೆ.


ಅರುಣ್ ಪ್ರಸಾದ್

2004 ರಲ್ಲಿ 1500 ಕೋಟಿ ರೂ. ಬಂಡವಾಳ ಹೂಡಿ ರೈತರಿಗೆ ಮೂರು ವರ್ಷಗಳವರೆಗೆ ಜತ್ರೋಪ ಸಸಿ ಮತ್ತು ಗೊಬ್ಬರವನ್ನು ಉಚಿತವಾಗಿ ನೀಡುವ ಜೊತೆಗೆ 20 ವರ್ಷ ಜತ್ರೋಪ ಬೀಜಗಳನ್ನು ಮರು ಖರೀದಿ ಮಾಡಲಾಗುವುದು ಎಂದು ಕಂಪೆನಿ ಪ್ರಕಟಿಸಿತ್ತು. ಆದರೆ ಬೀಜ ನೀಡಲು ಮತ್ತು ಖರೀದಿಸಲು ತಾಲ್ಲೂಕು ಕೇಂದ್ರಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯದೇ, ಸಮರ್ಪಕವಾಗಿ ರೈತರಿಗೆ ಗೊಬ್ಬರ ಹಾಗು ಸಸಿಯನ್ನು ವಿತರಿಸದೇ, 2,30,000 ಎಕರೆ ಭೂ ಪ್ರದೇಶದಲ್ಲಿ ಜತ್ರೋಪ ಬೆಳೆ ಬೆಳೆಯಲಾಗುತ್ತಿದೆ ಎಂದು ಸರ್ಕಾರಕ್ಕೆ ಸುಳ್ಳು ವರದಿ ನೀಡಿ ಸಬ್ಸಿಡಿ ಪಡೆಯುತ್ತ ಚಪರಾಲ ಕಂಪೆನಿ ಹಗಲು ದರೋಡೆಗಿಳಿದಿದೆ.


ಇತ್ತ ರೈತರಿಗೆ ದಕ್ಷಿಣ ಆಫ್ರಿಕಾದ ಗುಣಮಟ್ಟದ ಹೈಬ್ರೀಡ್ ಬೀಜಗಳೆಂದು ನಂಬಿಸಿ ಕಳಪೆ ಗುಣಮಟ್ಟದ ಸ್ಥಳೀಯ ಬೀಜಗಳನ್ನು ವಿತರಿಸಿ, ಅತ್ತ ಸರ್ಕಾರಕ್ಕೆ ರೈತರಿಗೆ ಉಚಿತ ಸಸಿ ನೀಡಿದ್ದೇವೆಂದು ವರದಿ ಸಲ್ಲಿಸಿ ಸರ್ಕಾರ ಮತ್ತು ರೈತರಿಗೆ ಚಪರಾಲ ಕಂಪೆನಿ ಜತ್ರೋಪ ಟೋಪಿ ಹಾಕುತ್ತಿದೆ.

ಇದುವರೆವಿಗೂ ಕಂಪೆನಿ ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಮೈಸೂರು, ಬಳ್ಳಾರಿ ಹೀಗೆ ಒಟ್ಟು 17 ಜಿಲ್ಲೆಗಳಲ್ಲಿ 850 ಕ್ಷೇತ್ರಾಭಿವೃದ್ಧಿ ಅಧಿಕಾರಿಗಳನ್ನು ನೇಮಿಸಿಕೊಂಡು, ಅವರಿಗೂ ನಂಬಿಕೆಯ ಮಹಾಪೂರ ಹರಿಸಿ ಪಂಗನಾಮ ಹಾಕಿ ಬಿಟ್ಟೀ ದುಡಿಸಿಕೊಂಡಿದ್ದಾರೆ.

ಅಧಿಕಾರಿಗಳಾಗಿ ಕಂಪೆನಿ ಸೇರುವವರು ಸ್ವಂತ ಗೋದಾಮು ಹೊಂದಿ ಆರಂಭದ ಖರ್ಚು ವೆಚ್ಚ ಭರಿಸಬೇಕು, ಅಂಥವರಿಗೆ ದಿನಭತ್ಯೆ ಪ್ರಯಾಣ ಭತ್ಯೆ ಓಡಾಟಕ್ಕೆ ದ್ವಿಚಕ್ರ ವಾಹನ ನೀಡುವ ಭರವಸೆ ನೀಡಿ ಇದುವರೆವಿಗೂ ಯಾವುದನ್ನೂ ಮಾಡದೇ ಕನಿಷ್ಠ ಗೋದಾಮಿನ ಬಾಡಿಗೆಯನ್ನೂ ನೀಡದೇ ಕಂಪನಿಯು ವಂಚಿಸಿದೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಯಡೇಹಳ್ಳಿ ಕೆ. ಅರುಣ್‌ಪ್ರಸಾದ್ ಎಂಬಾತ ಈ ವಂಚಕ ಕಂಪೆನಿಯ ನಿರ್ದೇಶಕನಾಗಿ ಕಂಪನಿಯ ಎಲ್ಲಾ ಚಟುವಟಿಕೆ ನಿರ್ವಹಿಸುತ್ತಿದ್ದಾತ. ಆದರೆ ಕಳೆದ ಐದು ತಿಂಗಳಿಂದ ಕಂಪೆನಿಯ ಯಾರೊಂದಿಗೂ ಆತ ಸಂಪರ್ಕದಲ್ಲಿ ಇಲ್ಲದಿರುವುದು ಉದ್ಯೋಗಿಗಳು ಮತ್ತು ರೈತರಲ್ಲಿ ನಡುಕ ಹುಟ್ಟಿಸಿದೆ. ಕಂಪನಿಯ ಛೇರ್‌ಮನ್ ಬಾಬ್ಬಿ ಚಪರಾಲ ಉದ್ಯೋಗಿಗಳೊಂದಿಗೆ ಒಂದೇ ಒಂದು ಸಭೆ ನಡೆಸದೇ ಇರುವುದರಿಂದ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯನೂ ಆದ ಅರುಣ್ ಪ್ರಸಾದ್ ಕಣ್ಮರೆಯಾಗಿರುವುದರಿಂದ, ಮತ್ತು ಅರುಣ್ ಪ್ರಸಾದ್ ಉದ್ಯೋಗಿಗಳಿಗೆಂದು ಸಂದಾಯವಾದ ಹಣವನ್ನು ತನ್ನ ಖಾತೆಗೆ ಜಮಾ ಮಾಡಿಕೊಂಡಿದ್ದರಿಂದ ರೈತರು ಮತ್ತು ಉದ್ಯೋಗಿಗಳು ಕಟ್ಟಿದ ಕನಸು ಭಗ್ನವಾಯಿತೆಂಬುದರಲ್ಲಿ ಎಳ್ಳಷ್ಟೂ ಅನುಮಾನವಿಲ್ಲ.

ಅರುಣ್‌ಪ್ರಸಾದ್ ಕಂಪನಿ ಹೆಸರಲ್ಲಿ ಸುಮಾರು 5 ಕೋಟಿ ರೂಪಾಯಿ ಪಡೆದು ಮೋಸ ಮಾಡಿದ್ದಾನೆ. ಅಮಾಯಕ ನಿರುದ್ಯೋಗಿ ಮತ್ತು ರೈತರನ್ನು ವಂಚಿಸಿ... ಸುಳ್ಳು ವರದಿ ನೀಡಿ ಸಬ್ಸಿಡಿ ಪಡೆದು ಸರ್ಕಾ... ಚಳ್ಳೆಹಣ್ಣು ತಿನ್ನಿಸಿದ್ದಾನೆ. ಇವನ ವಿರುದ್ಧ ಸೂಕ್ತ... ನಡೆಸಬೇಕಿದೆ.


ಚಪರಾಲ ಸಂಸ್ಥೆ ರೈತರಿಗೆ ಉಚಿತವಾಗಿ ನೀಡುತ್ತೇನೆಂದಿದ್ದ ಜತ್ರೋಪಾ ಸಸಿಗಳು


ರೆಡ್ ಕಾರ್ಪೆಟ್ಟು ಹಾಸಿ... ನ್ಯಾಷನಲ್ ಕಂಪೆನಿಗಳನ್ನು... ತಿಸಲಿಕ್ಕಾಗೆ ಇರುವ ಸರ್ಕಾ... ಇಂತಹ ಅನ್ಯಾಯಕ್ಕೆ ಒಳ... ಸಾಧ್ಯ. ರೈತರ ಪರ ಒಂದಷ್ಟು... ಇದ್ದರೆ, ನಿರುದ್ಯೋಗಿಗಳ ಬ... ಇದ್ದರೆ, ಎಲ್ಲೇ ಅಡಗಿದ್ದರು... ರಾಲ, ಅರುಣ್ ಅಂಥ ... ವಂಚಕರನ್ನು ಹಿಡಿದು ತರಲಿ... ಹೆಸರಲ್ಲಿ ಆಸ್ತಿಗಳಿದ್ದರೆ, ... ಗೋಲು ಹಾಕಿ ಹಣ ಕಳೆದು... ವರಿಗೆ ಹಿಂತಿರುಗಿಸಲಿ. ಸರ್ಕಾ... ವನ್ನು ವಾಪಸ್ಸು ಪಡೆಯ...

ಇದು ಕುಮಾರಸ್ವಾಮಿ... ಯಡಿಯೂರಪ್ಪನವರಿಂದ ಸಾ... ಸಾಧ್ಯವೇ ಇಲ್ಲ ಎಂದೆನಿಸು...

ಗೂಡಿನಲ್ಲಿ ಹಕ್ಕಿ

'ಮೇಷ್ಟರು ಹೇಗಿದ್ದಾರೆ' ಎಂದು ಹಲವು ಸಲ ಕೇಳಿದರಂತೆ ನಜೀರ್. ಅವರು ಅಮೆರಿಕಾಕ್ಕೆ ಹೋಗುವ ಮುನ್ನ ನೋಡಿದ್ದೆ ಬಂದಮೇಲೆ ಅವರಿಗೆ ತೊಂದರೆಯಾದೀತೆಂದು ಹೋಗಿರಲಿಲ್ಲ, ಅವರ ಆರೋಗ್ಯದ ಬಗ್ಗೆ ಅವರಿವರಿಂದ ವಿಚಾರಿಸುತ್ತಿದ್ದೆ ಮಾತ್ರ. ಸಂಜೆ ನಾಲ್ಕೂವರೆಗೆ ನೋಡಲು ಬಂದವರನ್ನು ಅವರಲ್ಲಿಗೆ ಬಿಡಲಾಗುತ್ತಿತ್ತಂತೆ; ಹಲವು ನಿಮಿಷ ಮಾತ್ರ 'ನಮಸ್ಕಾರ' ಎಂದು ಮಾತ್ರ ಹೇಳಿ ಸುಮ್ಮನಾಗುತ್ತಿದ್ದರಂತೆ. ಒಮ್ಮೆ ಸಂಪುಟದ ಸಭೆಗೆ ಹೋದದ್ದು, ಇನ್ನೊಮ್ಮೆ ಛೂಸೇನೆಯ ಸಮಾರಂಭಕ್ಕೆ ಹೋಗಿದ್ದು ತಿಳಿಯಿತು. ಆದರೂ ನಾನು ನೋಡಲು ಹೋಗಲಿಲ್ಲ, ಇರುವ ಸ್ವಲ್ಪ ಶಕ್ತಿಯನ್ನು ನನ್ನ ಮಾತುಗಳಿಂದ ಕಸಿದುಕೊಳ್ಳಲು ಇಷ್ಟವಿರಲಿಲ್ಲ, ಆದರೆ ನಜೀರ್ ವಿಚಾರಿಸಿದಾಗ ಹೋಗದೆ ಇರಬಾರದು ಅನ್ನಿಸಿತು. ಬರುವುದಾಗಿ ಹೇಳಿ ಕಳಿಸಿದೆ. ನಾನು ಮತ್ತು ಡಾ.ಶ್ರೀನಿವಾಸಗೌಡರು ಬೆಳಿಗ್ಗೆಯೇ ಹೋದೆವು. ಭೇಟಿಯ ವೇಳೆಯ ಬಗ್ಗೆ ಗೊಂದಲವಾಗಿ ಅರ್ಧ ಗಂಟೆ ಮುಂಚೆಯೇ ನಜೀರರಿಗೆ ಅವರ ಸಹಾಯಕರು ತೊಂದರೆ ಕೊಟ್ಟಿದ್ದರು.

ನಾವು ಹೋದೊಡನೆ ಎದ್ದು ಕೂತರು. ತಮ್ಮ ಕಾಯಿಲೆಯ ಭೀಕರತೆ ಅವರಿಗೆ ಗೊತ್ತಿತ್ತು; ಅದರ ಹಂತ ಮತ್ತು ವಿವರವನ್ನು ಕೂಡ ಅರಿತಿದ್ದರು. ಆದರೆ ನನಗೆ ಸಂತೋಷವಾದದ್ದು ವರ್ಷಗಳ ಕೆಳಗೆ ನಾವಿಬ್ಬರೂ ಮಾತಾಡುತ್ತಿದ್ದಂತೆಯೇ ಮಾತಾಡತೊಡಗಿದೆವು. ರಾಜಕೀಯವನ್ನಲ್ಲ, ನಮ್ಮ ಕುತೂಹಲವನ್ನು ಅಪಾರವಾಗಿ ಕೆರಳಿಸುವ ಗ್ರಾಮಗಳ ಆರ್ಥಿಕ ಸ್ಥಿತಿ ಕುರಿತು ಚರ್ಚಿಸತೊಡಗಿದೆವು. ಒಮ್ಮೆ ನಜೀರ್ ಮೊಲ ಸಾಕುವುದರ ಬಗ್ಗೆ ಚೆನ್ನಾಗಿ ಅಧ್ಯಯನ ನಡೆಸಿ ಅದಕ್ಕಾಗಿ ಪ್ರಯೋಗ ಕೈಗೊಳ್ಳಲು ಯೋಚಿಸಿದ್ದರು. ನಾನು ಏಳು ಮೊಲ ತಂದು ಸಾಕತೊಡಗಿದ್ದೆ. ಏಳು ಮೊಲ ಸಾಕಲು ಪೆಟ್ಟಿಗೆ, ಅವುಗಳ ತಿನಿಸು ಮುಂತಾದ್ದನ್ನು ಕುರಿತು ಮಾತಾಡಿದೆವು. ಏಳು ಮೊಲಗಳ ಒಂದು ಸೂಲಿಗೇ ಎಪ್ಪತ್ತು ಮರಿಗಳು. ಅವು ಎರಡು ತಿಂಗಳಲ್ಲಿ ಒಂಭತ್ತು ಸಾವಿರ ಮೊತ್ತ ನೀಡಬಲ್ಲಷ್ಟು ಮಾಂಸ ನೀಡುವುದು, ಖರ್ಚೆಲ್ಲ ಹೋದರೂ ಆರು ಸಾವಿರ ಉಳಿಯುವುದು- ಇತ್ಯಾದಿ ಮಾತಾಡಿದೆವು. ಮತ್ತು ಹೂವುಗಳ ಬಗ್ಗೆ, ಜಗತ್ತಿನ ಹೂವಿನ ಮಾರ್ಕೆಟ್ಟು, ಹೂವು ಬೆಳೆಯಲು ಕರ್ನಾಟಕ ಎಷ್ಟು ಒಳ್ಳೆಯ ಹವೆ, ಮಣ್ಣು ಪಡೆದಿದೆ ಎಂದು ಮಾತಾಡಿದೆವು.




ನಜೀರ್‌ಸಾಬ್ ಕಾಯಿಲೆಯಿಂದ ನರಳುತ್ತಿರುವಾಗಲೇ ಮಳೆ ಸುರಿಯತೊಡಗಿತ್ತು. ಅವರು ಮೀನು ಉತ್ಪಾದಿಸುವ ಯೋಜನೆ ಹಾಕಿಕೊಂಡು ನೀರಿಗಾಗಿ ಚಿಂತಿಸುವಾಗಲೇ ಮಳೆ ಸುರಿದಿತ್ತು, ಅರ್ಧ ಎಕರೆ ಇದ್ದರೂ ಹೇಗೆ ಮೀನಿನ ಗುಂಡಿ ತೊಡಿಕೊಳ್ಳಬಹುದು, ಬರೀ ಮಳೆ ಆಶ್ರಯಿಸಿದ್ದ ಜಮೀನು ಕೂಡ ಮೀನಿನಿಂದ ಎಷ್ಟು ವರಮಾನ ನೀಡಬಲ್ಲದು ಎಂದು ಮಾತಾಡಿದರು. ಅಲ್ಲದೆ ನಜೀರ್‌ದು ಒಕ್ಕಲುತನದ ಹೃದಯ. ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿರುವಾಗಲೇ ಮಲಗಿದ್ದಾರೆ; ತಿರುಗಾಡಲು ಇಷ್ಟಪಡುವ ನಜೀರ್ ಚಲಿಸದ ಸ್ಥಿತಿ ತಲುಪಿದ್ದಾರೆ. ಅದು ಅವರಿಗೆ ಬೇಸರ.

"ಮುಂದಿನ ತಿಂಗಳು ಗುಂಡ್ಲುಪೇಟೆ, ಬಂಡೀಪುರ, ಚಾಮರಾಜನಗರ ಮುಂತಾದ ಎಲ್ಲ ಕಡೆ ಸುತ್ತಿ ಬರುತ್ತೇನೆ. ಕೆರೆಗಳನ್ನು ನಾನು ನೋಡಬೇಕು. ಜನರನ್ನು ನೋಡಬೇಕು. ನಾನು ಬಲ್ಲ ಅನೇಕರು ಬಸ್ ಛಾರ್ಜ್ ಖರ್ಚು ಮಾಡಿಕೊಂಡು ಬೆಂಗಳೂರಿಗೆ ಬಂದು ಕಾಸು ಕಳೆದುಕೊಳ್ಳುವುದು ನನಗೆ ಇಷ್ಟವಿಲ್ಲ, ನಾನೇ ಹೋದರೆ ಎಲ್ಲವನ್ನೂ ನೋಡಿದ ಹಾಗಾಗುತ್ತೆ" ಅಂದರು. "ನಾನು ಕಾಯಿಲೆಯ ಬಗ್ಗೆ ಯೋಚಿಸುವುದನ್ನೇ ನಿಲ್ಲಿಸಿದ್ದೇನೆ" ಅಂದರು. ಅವರ ಕಣ್ಣಿನ ದೋಷ ಹೊರಟು ಹೋಗಿದೆ. ತೂಕ ಸ್ವಲ್ಪ ಜಾಸ್ತಿಯಾಗಿದೆ. ಚಿಕಿತ್ಸೆ ಸ್ವಲ್ಪ ಪರಿಣಾಮಕಾರಿಯಾಗಿದೆ.

ನಾನೆಂದೆ, "ನಾವು ಕಾಯಿಲೆಯ ಬಗ್ಗೆ ಸಾವಿನ ಬಗ್ಗೆ ತಲೆಕೆಡಿಸಿಕೊಳ್ಳಲೇಬೇಕಿಲ್ಲ. ಹುಟ್ಟಿದ ಮನುಷ್ಯರೆಲ್ಲರೂ ಸಾಯುತ್ತಾರೆ. ಕೆಲವರು ಬೇಗ, ಕೆಲವರು ತಡವಾಗಿ ಸಾಯುತ್ತಾರೆ. ಇಲ್ಲಿ ಏನು ಮಾಡುತ್ತಿದ್ದೇವೆ, ಈ ಹುಟ್ಟಿನ ಸಾವಿನ ಚೌಕಟ್ಟಿನಲ್ಲಿ ಏನು ಮಾಡುತ್ತೇವೆ ಅನ್ನೋದು ಮುಖ್ಯ, ಆ ದೃಷ್ಟಿಯಿಂದ ಒಂದೊಂದು ದಿನಕ್ಕೂ ಒಂದು ಚೆಂದ, ಸಾರ್ಥಕ್ಯ ಅಥವಾ ಕುರೂಪ ಇರುತ್ತದೆ..."

ಅರ್ಧ ಗಂಟೆಗಿಂತ ಹೆಚ್ಚು ಹರಟಿದ ನಜೀರರ ಎಚ್ಚರ, ಹೊಣೆಗಾರಿಕೆ, ಸಂಕೋಚ ಹಾಗೇ ಇರುವುದು ಇನ್ನೂ ಮಾತಾಡಲು ಅವರಲ್ಲಿದ್ದ ಕಾತರ, ಅಚ್ಚರಿ, ಸಂತೋಷವನ್ನುಂಟು ಮಾಡಿದವು. "ಸುಸ್ತು ಮಾಡಿಕೊಳ್ಳಬೇಡಿ- ಮತ್ತೆ ಬರ್ತೇವೆ" ಅಂದು ಬಂದೆವು.




ಸೆಪ್ಟೆಂಬರ್ 18, 1988

ಸ್ಥಳಾಂತರ

ಈ ವಾರ ನಾವು ನಮ್ಮ ಕಚೇರಿಯ ಹೊಸ ಕಟ್ಟಡಕ್ಕೆ ಹೋಗುತ್ತಿದ್ದೇವೆ. ಮೂರೂವರೆ ವರ್ಷದಿಂದ ಕಟ್ಟುತ್ತಿದ್ದ ಕಟ್ಟಡ ಮುಗಿದಿದೆ. ಚೆಂದವಾಗಿದೆ. ಬಸವನಗುಡಿಯ ಬಿ.ಎಂ.ಎಸ್. ಮಹಿಳಾ ಕಾಲೇಜಿನ ಎದುರು; ಬ್ಯೂಗಲ್ ರಾಕ್ ಉದ್ಯಾನವನದಿಂದ ಈಚೆಗೆ.

ಅದಕ್ಕಿಂತ ಹೆಚ್ಚಾಗಿ ನನ್ನ ಮನಸ್ಸಿನಲ್ಲಿರುವುದು ಈಗ ನಾವು ಬಿಡುತ್ತಿರುವ ಕಟ್ಟಡ. ನಾನು ಅಧ್ಯಾಪಕನಾಗಿದ್ದಾಗ ಇಲ್ಲಿಗೆ ಬಂದೆ. ಸರಿಯಾಗಿ ಇಪ್ಪತ್ತು ವರ್ಷವಾಯಿತು. ಇಲ್ಲಿಗೆ ಬರುವ ಮುನ್ನ ಜಯನಗರದ ಎರಡು ಔಟ್‌ಹೌಸ್‌ಗಳಲ್ಲಿ, ಭಾರತ್ ಟಾಕೀಸ್ ಹತ್ತಿರದ ಜರ್ನಲಿಸ್ಟ್ ಕಾಲನಿಯಲ್ಲಿ ಇದ್ದೆವು. ಜಯನಗರದ ಪುಟ್ಟ ಮನೆಗೆ ರೂ. 45 ಬಾಡಿಗೆ ಕೊಡುತ್ತಿದ್ದೆವು; ಜರ್ನಲಿಸ್ಟ್ ಕಾಲನಿಯಲ್ಲಿ ರೂ. 80. ಜಯನಗರದ ಔಟ್‌ಹೌಸಿನಲ್ಲಿ ನನ್ನ ಮಗಳು ಗೌರಿ ಹುಟ್ಟಿದ್ದು; ಮನೆಯೊಡೆಯರ ತಕರಾರು, ತರಲೆಯಿಂದ ರೋಸಿ ಇಲ್ಲಿಗೆ ಬಂದೆವು. ಆಗ ಈ ಮನೆಯ ಒಡೆಯ ವಾಸುದೇವ ರಾವ್. ಅವರ ಕುಟುಂಬದವರು ಈ ಮನೆಯ ಮಹಡಿಗೆ ರೂ. 150 ಬಾಡಿಗೆ ಕೇಳಿದರು; ವಾಸುದೇವರಾವ್ "ಅದು ಅಧ್ಯಾಪಕರಿಗೆ ಹೆಚ್ಚು ಬಾಡಿಗೆ" ಎಂದು ರೂ. 125ಕ್ಕೆ ಕೊಟ್ಟರು. ಮೂರು ತಿಂಗಳ ಅಡ್ವಾನ್ಸ್, ಎರಡು ರೂಮು, ಒಂದು ಹಾಲ್, ಅಡಿಗೆ ಮನೆ, ಉಗ್ರಾಣವೆಲ್ಲ ಇದ್ದ ಮನೆ.



ಇಲ್ಲಿನ ನನ್ನ ವಾಸದಲ್ಲಿ ಬಹಳ ಘಟನೆಗಳು ಆಗಿವೆ. 'ಪಲ್ಲವಿ'ಯ ದೃಶ್ಯ ಕೂಡ ಇಲ್ಲಿ ಚಿತ್ರೀಕರಣಗೊಂಡಿದೆ. ಮಿಕ್ಕೆಲ್ಲ ಚಿತ್ರಗಳು, ನನ್ನಲ್ಲಿದ್ದ ಹಳೆಯ ಕಾರು, ಆಮೇಲೆ ಸ್ಕೂಟರ್-ಅವುಗಳ ನಂಬರ್ ಕೂಡ ನೆನಪಾಗುತ್ತಿಲ್ಲ, ಅವನ್ನೆಲ್ಲ ಮಾರಿ ಹತ್ತು ವರ್ಷ ವಾಹನಗಳ ತಂಟೆಗೇ ಹೋಗದೆ ಇದ್ದೆ. ಬೆಂಗಳೂರು ವಿಶ್ವವಿದ್ಯಾನಿಲಯ ಕೆಂಗೇರಿಗೆ ವರ್ಗಾ ಆಯಿತು. ಪತ್ರಿಕೆ ಶುರುವಾದದ್ದು ಈ ಮಹಡಿಯಲ್ಲಿಯೇ. ಒಂದು ಚಿಕ್ಕ ರೂಮಿನಲ್ಲಿ ಒಂದು ಟೇಬಲ್, ಎರಡು ಟೀಪಾಯ್‌ಗಳ ಮೇಲೆ ಶುರುವಾದದ್ದು ಪತ್ರಿಕೆ. ಮೊದಲ ವರ್ಷ ನನ್ನ ಮೇಲೆ ಹಲ್ಲೆಯಾದಾಗ ಗೆಳೆಯರೊಂದಿಗೆ ಕೂತು ಅಲ್ಲೇ ಮಾತಾಡಿದ್ದು, ವರ್ಷ ಮುಗಿಯುವುದರೊಳಗೆ ಸಿಮೆಂಟ್ ಬ್ಲಾಕ್‌ಗಳಿಂದ ಮಹಡಿಯ ಮೇಲೆ ಪುಟ್ಟ ಮಹಡಿ ಕಟ್ಟಿಕೊಂಡೆವು. ಅಲ್ಲಿ ಮೊಳೆ ಜೋಡಿಸಲು ತೊಡಗಿದಾಗ ಆ ಭಾರಕ್ಕೆ ಈ ಪುಟ್ಟ ಮಹಡಿ ಬಿದ್ದಿದ್ದರೂ ಆಶ್ಚರ್ಯವಿರಲಿಲ್ಲ, ಈ ಆತಂಕ ಇವತ್ತಿಗೂ ಇದೆ. ಇದು ಹಳೆಯ ಮನೆ. ಮಳೆ ಬಂದಾಗ ಮಹಡಿಯ ಗೋಡೆ ನೆನೆಯುತ್ತವೆ.

ಮನುಷ್ಯ ಹೇಗೆ ತನ್ನ ಮನೆ, ತನ್ನ ಕೋಣೆಗೆ ಮಾನಸಿಕವಾಗಿ ಅಂಟಿಕೊಳ್ಳುತ್ತಾನೆ! ನಾವು ಈ ಮನೆಗೆ ಬಂದಾಗ ಎದುರಿಗಿರುವ ತೆಂಗಿನ ಗಿಡಗಳು ಆಳೆತ್ತರ ಕೂಡ ಇರಲಿಲ್ಲ; ಆಮೇಲೆ ಮಹಡಿಯ ಮೆಟ್ಟಿಲನ್ನೆಲ್ಲ ಆವರಿಸಿದವು; ಕಿಟಕಿಯ ಮೂಲಕ ಗರಿ ತೂರಿದವು. ಈಗ ಆಕಾಶದಲ್ಲಿ ಗೊಂಚಲು ಗೊಂಚಲು ಕಾಯಿಬಿಡುತ್ತವೆ. ನನ್ನ ಮಕ್ಕಳು ಇಲ್ಲೇ ಬೆಳೆದರು. ಪತ್ರಿಕೆ ಬೆಳೆದಂತೆಲ್ಲ ಕೆಳಗಿನ ಮನೆಯೂ ಬೇಕಾಯಿತು; ಈಗ ಕೊಡುತ್ತಿದ್ದ ಬಾಡಿಗೆ ಎರಡು ಸಾವಿರ. ಕೆಲವರು ಹೇಳಿದರು "ಇದನ್ನು ಬಿಡಬೇಡಿ. ಈ ಮನೆಯವರು ಕೋರ್ಟಿಗೆ ಹೋದರೂ ನಿಮ್ಮಿಂದ ಬಿಡಿಸಿಕೊಳ್ಳಲಾಗುವುದಿಲ್ಲ, ಇದು ಪತ್ರಿಕಾ ಕಚೇರಿ, ವ್ಯಾಪಾರದ ಸ್ಥಳ- ಆದ್ದರಿಂದ ಖಂಡಿತ ಬಿಡಬೇಡಿ!"

ನಾನೆಂದೆ, "ನನಗೆ ಅಂಥ ಆಸೆ ಇಲ್ಲ, ಇನ್ನೊಬ್ಬರಿಗೆ ತೊಂದರೆ ಕೊಡಕೂಡದು. ಕಾನೂನುಗಳು ನನ್ನ ಮನಸ್ಸನ್ನು ಹೊಕ್ಕು ಲೋಭಿಯನ್ನಾಗಿ ಮಾಡಲಾರವು. ಈ ಮನೆ ಬಿಡುವಾಗ ನನ್ನೆದೆ ಭಾರವಾಗಿದೆ. ಇಲ್ಲಿ ನನ್ನ ಅತ್ಯುತ್ತಮ ವರ್ಷಗಳನ್ನು ಕಳೆದಿದ್ದೇನೆ. ನಾವೆಲ್ಲರೂ ಸಂತೋಷಪಟ್ಟಿದ್ದೇವೆ. ಅಷ್ಟು ಸಾಕು."

ಅಲ್ಲದೆ... ಒಂದು ಮನೆಯಲ್ಲಿ ಇಪ್ಪತ್ತು ವರ್ಷ ಬದುಕಿದ್ದರೆ ಆ ರಸ್ತೆ, ನಿತ್ಯ ನೋಡುವ ಜನ, ಬೆಳೆದ ರಸ್ತೆಯ ಹೆಣ್ಣು ಗಂಡುಗಳು, ಮನಸ್ತಾಪ ಮತ್ತು ಸ್ನೇಹಗಳೆಲ್ಲ ಸೇರಿಕೊಂಡಿರುತ್ತವೆ. ಮನುಷ್ಯನ ಬದುಕು ಅವುಗಳ ಒಂದು ಭಾಗ ಮಾತ್ರ. ■

ಗಾದೆಗಳು ವೇದಗಳಿಗೆ ಸಮಾನ ಅಂತಾರೆ, ಹಾಗಾದರೆ SMSಗಳು?



ಎಸ್.ಸಿ.ರಮೇಶ್, ಮೈಸೂರು
ಕುಮಾರಣ್ಣ-ಜಮೀರ್ ಅಪ್ಪಿಕೊಳವಳಿ, ಅಂಬಿ ರೆಸಾರ್ಟ್‌ನಲ್ಲಿನ 'ಹನಿಮೂನ್...' ಈ ದಾಂಪತ್ಯ ಎಲ್ಲಿಯವರೆಗೆ?
* ಸಂತೋಷ್ ಲಾಡ್ ಪುರೋಹಿತನಾಗಿ, ಚೆಲುವ ಗಟ್ಟಿ ಮೇಳ ಬಾರಿಸುವ ತನಕ.

ಎಸ್.ಜಿ. ರಾಜಶೇಖರ ರೆಡ್ಡಿ, ಗೌರಿಬಿದನೂರು
ನಿಜವಾದ ಅರ್ಥದಲ್ಲಿ ಮತ್ತು ಸರ್ಕಾರದ ಅರ್ಥದಲ್ಲಿ ನಕ್ಸಲೈಟ್ ಅಂದ್ರೆ ಏನು?
* ಹಗಲು ದರೊಡೆ ಮಾಡ್ತಿರೋರೆಲ್ಲ ನಕ್ಸಲೈಟರನ್ನೇ ದೇಶದ್ರೋಹಿಗಳು ಅಂತಿದ್ದಾರೆ ಕಣ್ರೀ.

ಎಂ. ಸುರೇಶ್, ದಾಸಣ್ಣನ ಮಾಳಿಗೆ
ಹುಡುಗಾಟ ಇದ್ದಂತೆ ಹುಡುಗಿಯಾಟ ಏಕಿಲ್ಲ?
* ಹುಡುಗಾಟ ಅನ್ನೋದೂ ಹುಡುಗಿಯರೂ ಆಡುವ ಆಟ ಗೊತ್ತಾ.

ಬಿ.ಸ್ವಾಮಿ, ಅನಂತಶಯನ ಗುಡಿ
ಕುಮಾರಸ್ವಾಮಿ ಮಲಗುವುದು ಹಳ್ಳಿಗಳಲ್ಲಿ, ಮಜಾ ಮಾಡುವುದು ರೆಸಾರ್ಟ್‌ಗಳಲ್ಲಿ, ಇದು ಸರಿಯೇ?
* ಮತ್ತು ತಲೆಹರಟೆ ಮಾಡುವುದು ವಿಧಾನಸೌಧದಲ್ಲಿ ಎಂಬುದೇ ನಮ್ಮ ತಕರಾರು!

ಕೆ.ಶ್ರೀನಿವಾಸ್, ಮಂಡ್ಯ
ಗೌರಿ ತಂದೆಗೆ ತಕ್ಕ ಮಗಳೊ? ತಾಯಿಗೆ ತಕ್ಕ ಮಗಳೊ?
* ಇಶಾಳಿಗಂತೂ ಪ್ರೀತಿಯ ಅಪ್ಪ!

ದಿ.ಎಲ್.ನಾಗರಾಜ್, ಹರಪನಹಳ್ಳಿ
ಜೆಡಿಎಸ್‌ನವರು ಮುಂದಿನ ಅವಧಿಗೆ ಸಿಎಂ ಹುದ್ದೇನೆ ಅನಗತ್ಯ ಎಂದಿದ್ದಾರಲ್ಲಾ?
* ರೇವಣ್ಣ ಅದಕ್ಕೇ ಹುಚ್ಚನಂತಾಡುತ್ತಿರುವುದು.

ಕವಿತಾ ಮಧುಸೂದನ್, ದಾವಣಗೆರೆ
ಶಿವಮೊಗ್ಗೆಯ ಇಡೀ ಸಾಹಿತ್ಯ ಸಮ್ಮೇಳನದಲ್ಲಿ ಪ್ರಮುಖವಾಗಿ ನೆನಪಿನಲ್ಲುಳಿಯುವಂಥದ್ದು ಯಾವುದು?
* ಚಡ್ಡಿಗಳಿಗೆ ಮುಖಭಂಗ ಆಗಿದ್ದು ಅಂತ ಗೌರಿ, ವಿಶಲ ಹೆಗಡೆ ನಗಾಡುತ್ತಿದ್ದಾರಂತೆ.

ದಿ.ಎಲ್. ಶ್ವೇತಾ, ಹರಪನಹಳ್ಳಿ
ಸೂರಿಲ್ಲದ ಎಲ್ಲರಿಗೂ ಮನೆ ಸಾಧ್ಯವೇ?
* ಸದ್ಯಕ್ಕೆ ದೇವೇಗೌಡರ ಕುಟುಂಬದ ಮೂರು ತಲೆಮಾರುಗಳಿಗೆ ಸಾಕಾಗುವಷ್ಟು ಸಾಧ್ಯವಾಗಿದೆಯಂತೆ.

ಅನಿಲ್ ಕುಮಾರ್ ಕೋಟೆ, ದೇವದುರ್ಗ
ಜೆಡಿಎಸ್‌ನ ಸಿದ್ಧರಾಮಯ್ಯನಿಗೂ, ಕಾಂಗ್ರೆಸ್‌ನ ಸಿದ್ಧರಾಮಯ್ಯನಿಗೂ ಇರುವ ವ್ಯತ್ಯಾಸ?
* ಕಾಂಗ್ರೆಸ್ ಸಿದ್ದುನ ನಂಬುವುದು ಕಷ್ಟವಾಗುತ್ತಿದೆ!

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ
ನಟಿಯರಿಗೆ ಕಡಿಮೆ ಬಟ್ಟೆ ತೊಡಿಸಿದಷ್ಟು ನಟರಿಗೆ ತೊಡಿಸುವುದಿಲ್ಲವಲ್ಲ ಏಕೆ?
* 'ಧೂಮ್-2'ರಲ್ಲಿ ಹೃತಿಕ್‌ನ ಬಾಡಿ ನೋಡಿರುವ ಹುಡುಗಿಯರು ಈ ಪ್ರಶ್ನೆ ಅಪ್ರಸ್ತುತ ಅಂತಿದ್ದಾರೆ ಗೊತ್ತಾ?

ಬಿ.ಚಂದ್ರೇಗೌಡ, ಬೆಂಗಳೂರು
ಚೌಕಾಸಿ ಮಾಡುವುದರಲ್ಲಿ ಹೆಂಗಸರೇ ಹೆಚ್ಚು ಪ್ರಾವೀಣ್ಯತೆ ಹೊಂದಿರುತ್ತಾರಲ್ಲ?
* ಅಮೂಲ್ಯವಾದದ್ದನ್ನು ವಿನಿಮಯ ಮಾಡುವವರೆಲ್ಲ ಹಾಗೇನೇ.

ಎಂ.ಶಿವಸ್ವಾಮಿ, ಬೆಂಗಳೂರು
ಆಡುವುದು ಒಂದು, ಮಾಡುವುದು ಇನ್ನೊಂದು. ಇಂಥವರಿಗೆ ಏನೆನ್ನಬೇಕು?
* ಮುಂದಿನ ಮ್ಯಾಚ್ ಅನ್ನು ಗೆಲ್ಲುತ್ತೇವೆ ಅಂತಿದ್ದಾರೆ ನಮ್ಮ ಕ್ರಿಕೆಟ್ ತಂಡ. ಕಾದು ನೋಡೋಣ.

ಎಂ.ಎಸ್. ಕಾರ್ತಿಕ್, ಕುಮಟಾ
ನವದಂಪತಿಗಳಿಗೆ ಮಧುಚಂದ್ರ ಯಾಕೆ?
* ದಾಂಪತ್ಯ ಹಳಸಿದಂತೆ ದುಃಸ್ವಪ್ನಗಳು ಹೆಚ್ಚಾಗುವುದರಿಂದ.

ಅಕ್ಕಿ ಬಸವೇಶ, ಉಪನಾಯಕನಹಳ್ಳಿ
ಗಾದೆಗಳು ವೇದಗಳಿಗೆ ಸಮಾನ ಅಂತಾರೆ, ಹಾಗಾದರೆ SMSಗಳು?
* ಪುಂಡರ ಪೋಲಿ ಫಿಲಾಸಫಿ!

ಬಹುಮಾನಿತ ಪ್ರಶ್ನೆ

ಛೀ ತುಂಟಿ!

ನವ ದಂಪತಿಗಳು ಜಾತ್ರೆಯೊಂದಕ್ಕೆ ಹೋದಾಗ ಅಲ್ಲಿನ ಜನಜಂಗುಳಿಯಲ್ಲಿ ಬೇರೆ ಬೇರೆ ಆದರು. ಇದರಿಂದ ಕಂಗಾಲಾದ ಗಂಡ ಪೊಲೀಸರಿಗೆ ದೂರು ನೀಡಿದ. ಹೆಂಡತಿ ಪತ್ತೆ ಆಗಲಿಲ್ಲ, ಆತ ಪತ್ರಿಕೆಗಳಲ್ಲೂ ಕಾಣೆಯಾಗಿದ್ದಾರೆ ಕಾಲಂನಲ್ಲಿ ಕಾಣೆಯಾದ ತನ್ನ ಹೆಂಡತಿ ಬಗ್ಗೆ ಜಾಹೀರಾತು ನೀಡಿದ. ಆದರಿಂದಲೂ ಏನು ಪ್ರಯೋಜನವಾಗಲಿಲ್ಲ,

ಕೊನೆಗೆ ಯಾವ ದಿಕ್ಕೂ ತೋಚದೆ ರಾಮಮಂದಿರಕ್ಕೆ ಹೋಗಿ "ದೇವರೇ ನೀನೇ ನನ್ನ ಹೆಂಡತಿಯನ್ನು ಹುಡುಕಿಕೊಡಬೇಕು" ಎಂದು ಪ್ರಾರ್ಥಿಸಿದ. ಆಗ ರಾಮ "ಅಯ್ಯೋ ಪೆದ್ದ, ಇಲ್ಲಿಗ್ಯಾಕೆ ಬಂದೆ? ಹತ್ತಿರದಲ್ಲೇ ಇರುವ ಹನುಮಂತನ ದೇವಸ್ಥಾನಕ್ಕೆ ಹೋಗಿ ಪ್ರಾರ್ಥಿಸು. ನನ್ನ ಹೆಂಡತಿ ಕಳೆದು ಹೋದಾಗಲೂ ಆಕೆಯನ್ನು ಪತ್ತೆ ಹಚ್ಚಿದ್ದು ಆ ಮಂಗಗಳೇ" ಎಂದು ಉಪದೇಶಿಸಿದ.




ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ವಾರದ ಪ್ರಶ್ನೆ:

ಹಾಲಿವುಡ್ಡಿನ ನಟ ಗೇರ್ ಮುಖ್ಯಮಂತ್ರಿ ಕುಮಾರಸ್ವಾಮಿಯನ್ನು ಏಕೆ ಮೆಚ್ಚಿಕೊಂಡರು?

ಜನವರಿ 3ರ ಸಂಚಿಕೆಯ ನಮ್ಮ ಪ್ರಶ್ನೆ: ಸದ್ದಾಂಗೆ ಗಲ್ಲು ಶಿಕ್ಷೆ. ಬುಶ್‌ಗೆ ಏನು ಶಿಕ್ಷೆ?
ನಿಮ್ಮ ಉತ್ತರ: ಬಿನ್‌ಲಾಡೆನ್ ಈ ಬಗ್ಗೆ ಇನ್ನೂ ತೀರ್ಮಾನಿಸಿಲ್ಲವಂತೆ.
ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಎ.ಕೆ. ಪಟ್ನಾಯಕ್, ಬೆಂಗಳೂರು



ಬಂಧಿತ ಇಮ್ರಾನ್

ಹಂಪೆಯಲ್ಲಿನ್ನ ಕರಕುಶಲ ವ್ಯಾಪಾರಿ ಇಮ್ರಾನ್ ಜಲಾಲ್ ಒಬ್ಬ ಕಾಶ್ಮೀರಿ ಉಗ್ರಗಾಮಿ ಎಂದು ಈಗ ಸುದ್ದಿಯಾಗಿದೆ. ಇಮ್ರಾನ್ ತನಿಖೆಯಲ್ಲಿ ಹೇಳಿದ್ದಾನೆ ಎನ್ನಲಾಗಿರುವ ಬಹಳಷ್ಟು ವಿಚಾರಗಳು ಪೊಲೀಸ್ ಆಫೀಸರ್‌ಗಳ ಹೇಳಿಕೆಗಳ ಮೂಲಕ ಕಳೆದ ಒಂದು ವಾರದಿಂದಲೂ ಜನರಿಗೆ ತಲುಪುತ್ತಿವೆ. ಸುದ್ದಿ ಮಾಧ್ಯಮಗಳು ಪೊಲೀಸರ ಹೇಳಿಕೆಗಳನ್ನು ಚಾಚೂತಪ್ಪದೆ ವರದಿ ಮಾಡುತ್ತಿವೆ. ಈಗ ಇಮ್ರಾನ್ ವಿಚಾರಣೆಗೆಂದೂ ಮುಂಬೈ, ಗುಜರಾತ್, ದೆಹಲಿ ಹಾಗೂ ದೂರದ ಕಾಶ್ಮೀರದಿಂದಲೂ ವಿಶೇಷ ಪೊಲೀಸರು ಬರುತ್ತಿರುವುದನ್ನು ನೋಡಿದರೆ ಈ ಇಮ್ರಾನ್‌ನ ಹಿನ್ನೆಲೆ 'ಅಸಾಮಾನ್ಯ'ವಾದದ್ದೇ ಇರಬಹುದೆನ್ನುವ ಭಾವನೆ ಜನರಿಗೆ ಬಂದಿದೆ. ಆದರೆ ಸಿಸಿಬಿ ಪೊಲೀಸರು ನಡೆಸಿದ ಕಾರ್ಯಾಚರಣೆ ಹಾಗೂ ಅವರ ತನಿಖಾ ವಿಧಾನಗಳಲ್ಲೂ ಕೆಲವು 'ಅಸಾಮಾನ್ಯ' ನಡವಳಿಕೆಗಳು ಕಂಡುಬರುತ್ತಿರುವುದೇ ಆಶ್ಚರ್ಯಕರ ಸಂಗತಿಯಾಗಿದೆ.

ಈಗ ಪೊಲೀಸರು ನಿರೂಪಿಸುತ್ತಿರುವ ಘಟನೆಗಳ ಪ್ರಕಾರ ಹೇಳಬೇಕೆಂದರೆ.....

ಜನವರಿ 5 ರ ಬೆಳಗ್ಗೆ ಬೆಂಗಳೂರು ಸಿಟಿ ಹೊರ ವಲಯದ ಗೊರಗುಂಟೆಪಾಳ್ಯದಲ್ಲಿ ಹೊಸಪೇಟೆಯಿಂದ ಬರುತ್ತಿದ್ದ VRL ಬಸ್ಸೊಂದನ್ನು ತಡೆದು ನಿಲ್ಲಿಸಿದ ಸಿಸಿಬಿ ಪೊಲೀಸರು. ಅದರಿಂದ ಇಮ್ರಾನ್ ಎಂಬ ವ್ಯಕ್ತಿಯನ್ನು ಕೆಳಗಿಳಿಸಿ ಬಂಧಿಸಿದ್ದರು. ಅವತ್ತು ಅವನ ಬ್ಯಾಗ್ ಚೆಕ್ ಮಾಡಿದಾಗ ಒಂದು ಎಕೆ 47, ನೂರಾರು ರೌಂಡ್ಸ್‌ಗಳು, ಸ್ಯಾಟಲೈಟ್ ಫೋನ್ ಎಲ್ಲಾ ಸಿಕ್ಕವೆಂದು ಹೇಳಿದರು.

ಈ ವಿಚಾರ ಇಲ್ಲಿ ಮುಖ್ಯವಾಗುವುದು ಏಕೆಂದರೆ ಪೊಲೀಸರು ಈ ರೀತಿಯಾದ 'ವೀರೋಚಿತ ಕಾರ್ಯಾಚರಣೆ' ನಡೆಸಿ ಇಮ್ರಾನ್‌ನನ್ನು ಬಂಧಿಸುವ ಬದಲಾಗಿ ಸುಮ್ಮನೆ ಹಿಂಬಾಲಿಸಬಹುದಿತ್ತು. ಬೆಂಗಳೂರಿನಲ್ಲಿ ಅವನು ಇನ್ನೂ ಯಾರ್‍ಯಾರನ್ನು ಭೇಟಿಯಾಗುತ್ತಾನೆ, ಯಾವ ಮನೆಗೆ, ಏರಿಯಾಗಳಿಗೆಲ್ಲಾ ಓಡಾಡುತ್ತಾನೆಂದು ಗೊತ್ತಾಗುತ್ತಿತ್ತು. ಆಗ ಬೆಂಗಳೂರಿನಲ್ಲಿ ಅಡಗಿರುವ ಎಷ್ಟೋ ಜನ ಕಾಶ್ಮೀರಿ, ಲಷ್ಕರ್-ಎ-ತೊಯಿಬಾ ಉಗ್ರರು ಹಾಗೂ ಅಲ್ ಖೈದಾ ಕನೆಕ್ಷನ್ ಹೊಂದಿರುವವರೆಲ್ಲರೂ ಒಂದೇ ಸಾರಿ ಸಿಕ್ಕಿಬೀಳುತ್ತಿರಲಿಲ್ಲವೆ!

ಸಿಸಿಬಿಯ ಡಿಸಿಪಿ ರವಿಕಾಂತೇಗೌಡರು ಹಾಗೇಕೆ ಮಾಡಲಿಲ್ಲ?

ಇಮ್ರಾನ್ ಒಬ್ಬ ಕರಕುಶಲ ವಸ್ತುಗಳ ವ್ಯಾಪಾರಿಯಲ್ಲ, ಬದಲಾಗಿ ಉಗ್ರಗಾಮಿ ಎಂದು ಗೊತ್ತಾಗಿ ಅವನ ಮೇಲೆ ಕಳೆದ ಆರು ತಿಂಗಳಿಂದ ನಿಗಾ ಇಡಲಾಗಿತ್ತು ಎಂದು ಹೇಳಲಾಗುತ್ತಿದೆ. ಅಷ್ಟೇ ಅಲ್ಲ, ಹಂಪೆಯಲ್ಲಿರುವ ಇನ್ನಿತರ ಕಾಶ್ಮೀರಿ ಜನರ ವಿರುದ್ಧ ಹಜಾರರಾಮ ದೇವಸ್ಥಾನದಲ್ಲಿ ನಮಾಜ್ ಮಾಡಿದರೆಂದೂ, ಬಷೀರ್ ಅಹ್ಮದ್ ಎಂಬಾತ ಹಸುವೊಂದನ್ನು ಲೈಂಗಿಕವಾಗಿ ಬಳಸಿಕೊಂಡನೆಂತಲೂ ಈಗ ಸುದ್ದಿ ಹಬ್ಬಿಸಲಾಗಿದೆ.

ಇದು ಭಜರಂಗ ದಳದವರು ನಡೆಸಿರುವ ಪ್ರಚಾರ. ವಿಪರ್ಯಾಸವೇನೆಂದರೆ ಇವತ್ತು ರಾಜ್ಯ ಪೊಲೀಸರು ಹಾಗೂ ಭಜರಂಗ ದಳದವರು ಒಂದೇ ಭಾಷೆಯಲ್ಲಿ ಮಾತನಾಡುತ್ತಿರುವುದು. ಒಂದು ವೇಳೆ ಇಮ್ರಾನ್ ಜಲಾಲ್ ಅಕ್ರಮ ಶಸ್ತ್ರಾಸ್ತ್ರ ಸಾಗಾಣಿಕೆ ಮಾಡುತ್ತಾ ವಿಧ್ವಂಸಕ ಕೃತ್ಯಗಳನ್ನು ನಡೆಸುವ ದುಷ್ಟ ಯೋಜನೆ

ಹಂಪೆ ಇಮ್ರಾನ್; ವಾಸ್ತವ ಏನು?

ಇದೇ 'ಕತೆ' ಎಲ್ಲಾ ಪತ್ರಿಕೆ ಹಾಗೂ ಟಿವಿಗಳಲ್ಲಿ ಸೆನ್ಸೇಷನಲ್ ನ್ಯೂಸ್ ಆಗಿ ಪ್ರಕಟವಾಗಿದೆ.

ಆದರೆ ವಾಸ್ತವವಾಗಿ ನಡೆದದ್ದೇನು ಗೊತ್ತೆ?

ಇಮ್ರಾನ್ ಅರೆಸ್ಟ್ ಆಗಿದ್ದು ಜನವರಿ 5 ರಂದು ಅಲ್ಲ, ಬದಲಾಗಿ ಡಿಸೆಂಬರ್ 27 ರ ರಾತ್ರಿ. ಅದೇ ರೀತಿ ತಮಗೆ ಇಂಥ ದಿನ ಇಂಥದ್ದೇ ಬಸ್ಸಿನಲ್ಲಿ ಕಾಶ್ಮೀರಿ ಭಯೋತ್ಪಾದಕನೊಬ್ಬ ಭಾರಿ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು ಹೊರಟಿದ್ದಾನೆನ್ನುವ ರಹಸ್ಯ ಮಾಹಿತಿ ಸಿಕ್ಕಿತ್ತು, ಅದರಂತೆ ಇಮ್ರಾನ್ ಇದ್ದ ಬಸ್ ಅನ್ನು ಜನವರಿ 5ರ ನಸುಕಿನ ಜಾವ ಅಡ್ಡಗಟ್ಟಿ ಅವನನ್ನು ಅರೆಸ್ಟ್ ಮಾಡಿದ್ದೇವೆನ್ನುತ್ತಿದ್ದಾರೆ ಸಿಟಿ ಪೊಲೀಸರು.



ಮನೆ ಮಾಲೀಕ ಸುಂದರರಾಜ್

ಆದರೆ ಇದೂ ಅಷ್ಟು ಖಚಿತವಲ್ಲ. ಯಾಕೆಂದರೆ ಇಮ್ರಾನ್ ಅರೆಸ್ಟ್ ಆಗಿದ್ದು ಬೆಂಗಳೂರಿನಲ್ಲಿ ಅಲ್ಲ, ಬದಲಾಗಿ ಹೊಸಪೇಟೆಯ ರಾಣೆಗಂಜ್‌ನ ಅವನ ಬಾಡಿಗೆ ಮನೆಯಲ್ಲೇ. ಇದು ನಡೆದಿರುವುದು ಡಿಸೆಂಬರ್ 27 ರ ರಾತ್ರಿ. ಅವತ್ತು ರಾತ್ರಿ 8 ಗಂಟೆ ಸುಮಾರಿಗೆ ರಾಣೆಗಂಜ್‌ನ ಮಾಜಿ ಮುನಿಸಿಪಾಲಿಟಿ ನೌಕರ, ಸುಂದರರಾಜ್ ಮಾಲೀಕರಾಗಿರುವ ವಠಾರದ ಮನೆಗೆ ಆರೆಂಟು ಜನ ಅಪರಿಚಿತರು ಬಂದಿದ್ದಾರೆ. ಅವರನ್ನು ನೋಡಿದ ಸುಂದರರಾಜ್ ಮಗಳು ಶೀಲಾ 'ಯಾರು' ಎಂದಾಗ ಪೊಲೀಸರೆಂಬ ಉತ್ತರ ಬಂದಿದೆ. ಆದಾದ ಕೆಲ ನಿಮಿಷಗಳಲ್ಲೇ ಪೊಲೀಸರು ಇಮ್ರಾನ್‌ನನ್ನು ಕರೆದುಕೊಂಡು ಹೋಗಿದ್ದಾರೆ. ಆಗ ಇಮ್ರಾನ್ ಕೈಲಿದಿದ್ದು ಒಂದು ಸಣ್ಣ ಕೈಚೀಲ ಮಾತ್ರ. ಮನೆ ಬಾಗಿಲು ತೆರೆದಿಟ್ಟೇ ಇಮ್ರಾನ್ ಪೊಲೀಸರೊಂದಿಗೆ ಹೋಗಿದ್ದ.

ಹೊಸಪೇಟೆ ನಗರಸಭೆ ಮೆಂಬರ್ ಆಗಿರುವ ಶೀಲಾ ಇಷ್ಟು ವಿಷಯವನ್ನು 'ಭಯೋತ್ಪಾದಕ ಇಮ್ರಾನ್'ನ ಮನೆ ನೋಡಲು ಬಂದಿದ್ದ ಬಹುತೇಕ ಪತ್ರಕರ್ತರಿಗೆ ಹೇಳಿದ್ದರೂ ಯಾರೂ ಗಮನಿಸದೆ ನಿಜಾಂಶವನ್ನು kill ಮಾಡಲಾಗಿದೆ.

ಹೊಂದಿದ್ದು ಸಾಬೀತಾದರೆ ಅವನನ್ನು ಶಿಕ್ಷಿಸಲೇಬೇಕು. ಆದರೆ ಹಾಗೆ ಮಾಡುವ ಅವಸರದಲ್ಲಿ ಅದೇ ಹಂಪೆಯಲ್ಲಿ ನೆಲೆಸಿರುವ ನಮ್ಮದೇ ದೇಶದ ಕಾಶ್ಮೀರಿ ಜನಾಂಗದವರೆಲ್ಲರ ಮೇಲೂ ಅನುಮಾನ ಪಟ್ಟು ಜನಸಾಮಾನ್ಯರು ಎಲ್ಲರನ್ನೂ ಭೀತಿಯಿಂದ ನೋಡುವಂತಹ ವಾತಾವರಣ ಸೃಷ್ಟಿಸಿದ್ದೂ ಅಲ್ಲದೆ ಇಮ್ರಾನ್ ಬಂಧಿಸಿದ ಬೆನ್ನ ಹಿಂದೆಯೇ ಪೊಲೀಸರು ಲಿಯೋ ಎಂಬಾತ ಇಮ್ರಾನ್ ಸಹಚರನಾಗಿದ್ದು ಈಗ ನಾಪತ್ತೆಯಾಗಿದ್ದಾನೆ ಎಂದಿದ್ದರು. ವ್ಯಾಪಾರಕ್ಕೆಂದು ಬಾಂಬೆಗೆ ಹೋಗಿದ್ದ ಲಿಯೋ ಪತ್ರಿಕೆಗಳಲ್ಲಿ ಈ ಸುದ್ದಿ ಓದಿ ತಾನಾಗೇ ಧಾವಿಸಿ ಬಂದು ತಾನು ಪರಾರಿಯಾಗಿರಲಿಲ್ಲವೆಂದು ಹೇಳಬೇಕಾಯಿತು. ಒಂದು ವೇಳೆ ಲಿಯೋ ಉಗ್ರಗಾಮಿಯಾಗಿದಿದ್ದರೆ ತಾನಾಗೇ ಹಿಂತಿರುಗಿ ಪೋಲೀಸರೆದುರು ನಿಲ್ಲುತ್ತಿದ್ದನೆ?

ಈ ನಡುವೆ ಇಮ್ರಾನ್ ಬಗ್ಗೆ ಇನ್ನಷ್ಟು ಕುತೂಹಲಕಾರಿ ಮಾಹಿತಿಗಳು ಸಿಗುತ್ತಿವೆ.

ಇಮ್ರಾನ್ ಅಂಗಡಿಗೆ ಹೋಗುವಾಗ ಪ್ರತಿ ದಿನ ತನ್ನ ಮನೆ ಬೀಗದ ಕೈಯನ್ನು ಮನೆ ಮಾಲೀಕ ಸುಂದರರಾಜ್ ಕೈಲಿ ಕೊಟ್ಟು ಹೋಗುತ್ತಿದ್ದನಂತೆ. ತನ್ನ ಮನೆಯಲ್ಲಿ ಅಷ್ಟೆಲ್ಲಾ ಅಪಾಯಕಾರಿ ಶಸ್ತ್ರಾಸ್ತ್ರಗಳನ್ನಿಟ್ಟುಕೊಂಡು ಇಮ್ರಾನ್ ಹೀಗೆ ಮಾಡುತ್ತಿದ್ದನೆನ್ನುವುದು ನಿಜಕ್ಕೂ ಆಶ್ಚರ್ಯಕರವಾಗಿದೆ. ಹೊಸಪೇಟೆಯ ದಿನಪತ್ರಿಕೆಯ ಫೋಟೋಗ್ರಾಫರ್‌ಗಳಿಬ್ಬರು ಜನವರಿ 6 ರ ಬೆಳಗ್ಗೆ 4.30 ಗಂಟೆಗೆ ಇಮ್ರಾನ್ ಹಾಗೂ ಪೊಲೀಸರಿಗಾಗಿ ಕಾಯುತ್ತಾ ಇದ್ದಾಗ ಕೆಲ ಅಪರಿಚಿತ ವ್ಯಕ್ತಿಗಳು ಮೂರು ಬ್ಯಾಗ್‌ಗಳೊಂದಿಗೆ ಮನೆಯ ಓಣಿ ಪ್ರವೇಶಿಸಿ 10 ನಿಮಿಷದ ನಂತರ ಹೊರಬಿದ್ದರಂತೆ.

ಇವರ್‍ಯಾರಿರಬಹುದು!?

-ಬಿಳಿದಾಳೆ ಈಶ



ಹಂಪಿಯಲ್ಲಿ ನೆಲೆಸಿರುವ ಕಾಶ್ಮೀರಿ ಯುವಕರು



ಇಮ್ರಾನ್‌ನ ಕರಕುಶಲ ಮಳಿಗೆ


ನಾಯಿ ಬಗಳಿದ್ರೆ ಭೂಲೋಕ ಹಾಳಾಯ್ತದಾ



ಬಿರುಬರುತ್ತ ಭಾವಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಎಡವಟ್ ಎಡೂರಪ್ಪ ಮಂಕಾಗುತ್ತಿದ್ದಾರಂತಲ್ಲಾ, ಈಚೆಗೆ ತಮ್ಮ ನೇತೃತ್ವದಲ್ಲೇ ನಡೆದ 73 ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚೆಡ್ಡಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕದಿದ್ದರೂ, ಎಂಟು ಜನ ಸಣ್ಣ ಚೆಡ್ಡಿಗಳಿಗೆ ಸರಿಯಾಗಿ ಗೂಸಾ ಬಿದ್ದ ಬೆನ್ನಲ್ಲೇ ಆಕ್ರೋಶಗೊಂಡ ಎಡೂರಪ್ಪ ಸಮ್ಮೇಳನದಲ್ಲಿ ಇಲ್ಲದಿದ್ದ ಆಂಟಿ ಚೆಡ್ಡಿಗಳ ಮೇಲೆ ಕೇಸು ಜಡಿದದ್ದೂ ಅಲ್ಲದೆ "ಮುಂದಿನ ಮೂವತ್ತು ದಿನಗಳಲ್ಲಿ ಸಹ್ಯಾದ್ರಿ ಉತ್ಸವ ಮಾಡಿ, ಸೇಡು ತೀರಿಸಿಕೊಳ್ಳುತ್ತೇನೆ" ಎಂದಿದ್ದರಂತಲ್ಲಾ, ಇದಾದ ಕೆಲವೇ ದಿನಗಳ ನಂತರ ಅಮಲು ಇಳಿಸಿಕೊಂಡ ಎಡೂರಪ್ಪನನ್ನು ಚೆಡ್ಡಿಗಳು ಸಹ್ಯಾದ್ರಿ ಉತ್ಸವದ ಬಗ್ಗೆ ಕೇಳಲಾಗಿ "ಅಯ್ಯೋ ಹೋಗ್ರಿ, ನಮ್ಮದೆ ನಮಿಗಾಗ್ತದೆ ನೀವು ಬೇರೆ ಬಂದ್ರಿ. ಆ ಕುಮಾರಸ್ವಾಮಿ ಆಗ್ಲೆ ನಮ್ಮವರ ಮೂರ ಜನ ಎತ್ತಾಯ್ಕಂಡು ಹೋಗ್ಯವುನೆ. ಈಗಾಗ್ಲೆ ಇನ್ನೊಬ್ಬನ ಮನೆ ಹತ್ರಕ್ಕೂ ಹೋಗಿ ವ್ಯವಹಾರ ಮುಗಿಸಿ ಬಂದವುನೆ. ಹಿಂಗೆ ಆದ್ರೆ ಕತೆಯೇನ್ರಿ?" ಎಂದು ಗೋಳಾಡಿದರಂತಲ್ಲಾ, ಇದರಿಂದ ಮಂಕಾದ ಚೆಡ್ಡಿಗಳು "ಸಾರ್, ನೀವು ಈ ಟೈಮಲ್ಲಿ ಸುಮ್ಮನೆ ಕೂರಬಾರ್ದು. ನೀವು ಏನಾರ ಮಾಡಿ. ಆಗ್ಲೆ ಆಯನೂರ್ ಮಂಜುನಾಥ್ ಕಾಂಗ್ರೆಸ್ ಬೇಲಿ ಮೇಲೆ ಕುಳಿತಿದ್ದಾನೆ. ನೀವೊಂದಿಷ್ಟು ಸನ್ನೆ ಮಾಡಿದ್ರೆ ಸಾಕು ಈ ಕಡೆ ನೆಗೆಬವುದು" ಎಂದು ಅತ್ಯುಪಯುಕ್ತ ಸಲಹೆ ಕೊಟ್ಟವಂತಲ್ಲಾ, ಆಗ ಎಡೂರ "ಗೆದ್ದಿರೊ ಎಮ್ಮೆಲ್ಲೆಗಳೇ ಹೋಯ್ತಾಯಿರುವಾಗ ಸೋತಿರೋರ ತಗೊಂಡು ಏನು ಮಾಡನ ಹೋಗ್ರಿ" ಎಂದರಂತಲ್ಲಾ, ಧೂತ್ತೇರಿ!

* * * * * * * * * *

ಚಾಮುಂಡೇಶ್ವರಿಗೆ ಹೋಗಿ ಮನಗಿ ಮನಗಿ, ಮುಸುಡಿಗೆ ಮೂರೇಟು ಗುದ್ದಿಸಿಕೊಂಡು ಬಂದ ಕುಮಾರಣ್ಣ "ಈಗ ಜೇವರ್ಗಿಗೆ ಹೋಗಿ ಮನಗಿ ಬರುತ್ತೇನೆ" ಎಂದಿದ್ದನ್ನು ಮರೆತು "ಎಚ್.ಐ.ವಿ. ಮನೆ ಹುಡುಕಿ ಮಲಗಿದ್ದು ಬರುತ್ತೇನೆ" ಎಂದು ಈಗ ಶಪಥ ಮಾಡಿದ್ದಾರಂತಲ್ಲಾ, ಈ ಸುದ್ದಿ ಕೇಳಿದ ಅನಿತಕ್ಕ ಗಾಬರಿಯಿಂದ ಸೀರೆ ಶಂಕರಣ್ಣನ ಬಳಿ "ನೋಡೋ ಶಂಕ್ರ, ನೀನಾರ ವಸಿ ಹೇಳೊ ನಿಮ್ಮ ಕುಮಾರಣ್ಣನಿಗೆ. ಹೋಗಿ ಹೋಗಿ ಏಡ್ಸ್ ರೋಗಿ ಮನೆಲಿ ಮನಗಿದ್ದು ಬತ್ತರಂತಲ್ಲಾ, ಇದು ಸರಿನಾ?" ಎಂದಳಂತಲ್ಲಾ,



ಆದಕ್ಕೆ ರೇಷ್ಮೆ ಸೀರೆ ಶಂಕ್ರ "ಅಯ್ಯೋ, ಅದಕ್ಯಾಕೆದರತಿ ತಗಳಕ್ಕ. ಈ ಕುಮಾರಣ್ಣನ ಕಟಗಂಡು ನೀನು ಪಟ್ಟ ಸುಖ ನಾನು ನೋಡಿಲವೆ? ಅಂಗೇನಾರ ಕುಮಾರಣ್ಣ ಏಡಸು ರೋಗಿ ಮನಿಗೋಗಿ ಮನಿಗಿದ್ದು ಬಂದ್ರೆ ನೀನು ಕಡ್ಡಿ ಮುರದಂಗೆ ಹೇಳಿಬುಡು. ಅಮ್ಯಾಲೆ ನೀನು ಆರಾಮಾಗಿರಬವುದು" ಎಂದನಂತಲ್ಲಾ, "ಕಡ್ಡಿಮುರದಂಗೆ ಹೇಳದ್ಯಂಗೊ ಶಂಕ್ರ?" ಎಂದು ಅನಿತಕ್ಕ ಅಳುಮಿಶ್ರಿತ ದನಿಯಲ್ಲಿ ಕೇಳಲಾಗಿ, ಶಂಕ್ರ ವಯ್ಯಾರದಿಂದ ಕೈಬೀಸಿ "ನೋಡಕ್ಕ, ಏಡ್ಸ್ ಕಾಯಿಲೆ ಮನಿಗೋಗಿ ಮನಗಿದ್ದು ಬಂದಮ್ಯಾಲೆ ನನ್ತಕ್ಕೆ ಬಂದು ಮನಗಬ್ಯಾಡ ಅಂತ ಮಕ್ಕಡೆ ಮನಿಕ. ಆಗ ಯಲ್ಲ ಸರಿಯಾಯ್ತದೆ" ಎಂದನಂತಲ್ಲಾ, ಧೂತ್ತೇರಿ!

* * * * * * * * * *

ಇದ್ದಕ್ಕಿದ್ದಂತೆ ಪ್ರಬುದ್ಧ ರಾಜಕಾರಣಿಯಂತೆ ಮಾತನಾಡುತ್ತಿರುವ ರೇವಣ್ಣನವರನ್ನು ಮಾತನಾಡಿಸಬೇಕೆನಿಸಿತು. ಅವರ ಮನೆಯ ಮುಂದಿದ್ದ ನೂರಾರು ಕಾರುಗಳು, ಸಾವಿರಾರು ಜನ ಜೆಡಿಎಸ್ ಕಂಟ್ರಾಕ್ಟರುಗಳನ್ನು ತಡಾಯ್ದು ಅವರನ್ನು ಸಂದಿಸುವುದಕ್ಕಿಂತ ಫೋನ್ ಮಾಡಿದರೆ ವಾಸಿ ಎಂದು ಹಾಗೇ ಮಾಡಿದಾಗ, ಫೋನ್ ಕೆಟ್ಟ ಹಾಡನ್ನು ಶುರು ಮಾಡಿ ಕಟ್ಟಾಯ್ತು.

"ಹಲೋ, ನಾನು ಸಾರ್ ಯಾಹೂ."

"ಯಾವೂ ಅಂದ್ರೆ ಇವುರೇನ್ರಿ ಪತ್ರಿಕೆಯವರ?"

"ಹೌದು ಸಾರ್."

"ಏನ್ ಬೇಕಾಗಿತ್ತು?"

"ಏನಿಲ್ಲ ಸಾರ್, ಆ ಜೆಡಿಎಸ್ ಶಾಸಕರು ನಿಮ್ಮ ಮೇಲೆ ಚಾಡಿ ಹೇಳಿದ್ದಾರಲ್ಲ, ಇದು ಸರಿನಾ ಸಾರ್?"

"ಹೇಳಿಕಳ್ಳಿ ಬುಡ್ರಿ, ನಾಯಿ ಬೊಗಳಿದ್ರೆ ಭೂಲೋಕ ಹಾಳಾಯ್ತದಾ?"

"ಯರಡು ಮೂರು ನಾಯಿ ಬೊಗಳಿದವಂತ ಸಾರ್?"

"ಯರಡು ಮೂರಲ್ಲ, ಅಷ್ಟೂ ನಾಯಿ ಒಟ್ಟಿ ಬೊಗಳಿದ್ರೂ ನಾನೇನು ಹೆದರೊ ಪೈಕಿಯಲ್ಲ, ನಾನೇನ ಒಂದು ಸತಿ ಗುರುಗುಟ್ರೆ ಇದ್ಯಲ್ಲ ಬಾಲ ಅದಿಕಾಯ್ಕಂ ಓಡದು ನನಿಗ್ಗೊತ್ತಿಲ್ವೆ?"

"ಯಾಕ್ ಸಾರ್ ನಿಮ್ಮ ಮೇ ಇವುರಿಗ್ಯಲ್ಲ ಸಿಟ್ಟು?"

"ಪಟ್ಟೆಕಿಚ್ಚು ಕಂಡ್ರಿ, ಇನ್ನೇ ಯಿಲ್ಲ ಪಟ್ಟೆಕಿಚ್ಚು"

"ಅದೆ ಯಾಕೆ ಅಂತ?"

"ಮುಂದೆ ಎಡೂರಪ್ಪ ಮುಖ ಮಂತ್ರಿಯಾದ್ರೆ ನಾನು ಉಪಮುಖ ಮಂತ್ರಿಯಾಯ್ತಿನಿ ಅಂತ. ಅಲ್ರೀ ಮುಖ್ಯಮಂ ಯಾಗಿರೋ ನಾನು ಉಪಮುಖ್ಯಮಂತ್ರಿಯಾದ ನೇನ್ರಿ?"

"ಅಂಗರೆ ಮುಖ್ಯಮಂತ್ರಿ ಕ್ಯಾಂಡೇಟ್ ಸಾ ನೀವು?"

"ನಾನು ಯಾವತ್ತು ಈಗಿರೊ ಮನೆಗೆ ಬಂದನ ಅವತ್ತೇ ಕ್ಯಾಂಡೇಟಾದೆ. ನಾನಿರೊ ಮನೆಲಿದ್ದೋರೆ ಮುಖ್ಯಮಂತ್ರಿ ಆಗ್ಯವುರೆ ಕಂಡ್ರೀ. ಅದ್ಕೆ ಎಂ. ಪ್ರಕಾಶ್‌ಗೆ ಅಲಾಟಾದ ಮನೆಯ ಅವುರೆಸರ ಪಡದ ನಾನು ಬರಕಂಡೆ."

"ಅಂಗರೆ ಮನೆನೆ ಮುಖ್ಯಮಂತ್ರಿ ಮಾಡು ಸಾರ್?"

"ಅಲ್ವೆಮತ್ತೆ? ಇವುರೇನೂ ಮಾಡದು ಬ್ಯಾ ಮಾಜಿ ಪ್ರಧಾನಿ ಮಗ ನಾನು. ನಂತಂದೆ ಮನ ಮಾಡಿದ್ರೆ ಏನು ಬೇಕಾದ್ರೂ ಆಯ್ತಿನಿ. ಅವುರ ಬೀದಿ ನಾಯಲ್ಲ ನಾನು. "ಏನೊ ತಿಂತಾಯಿದಿ ಸಾರ್?"

"ಇಲ್ಲ ಯಾಕ್ರಿ?"

"ಕಡ್ಲೆಕಾಯಿ ಬಾಯಾಡಿಸಿಗಂಡು ಮಾತಾಡ ಕೇಳುಸ್ತು, ಅದ್ಕೆ ಕೇಳಿದೆ."

"ಕಡ್ಲೆಕಾಯಿ ಯಾಕೆ ತಿನ್ನನ? ಇದು ಹಿಟ್ಟುಣ್ಣೊ ಟೇಮು."

"ನೀವು ಹಿಟ್ಟುಣ್ತಿರ ಸಾರ್?"

"ಸಣ್ಣದಾಗಿದಾ ನಂತಂದೆ ಹಿಟ್ಟುಣ್ಣಾ ಕಲಿಸಿದ್ರು. ನನಿ ಅವುರೆ ಗಾಡ ಪಾದರು ಯಲ್ಲ."

"ಕುಮಾರಸ್ವಾಮಿಗಿಂತ ನೀವು ಹಿರಿಯೋರಾ ಅವುರಿಗಿಂತ ಮೊದ್ಲೆ ಮಂತ್ರಿಯಾಗಿದ್ರೂ, ಈ ಆರ್ಡಿನರಿ ಮಂತ್ರಿಯಾಗಿದ್ದಿರಲ್ಲ, ನಿಮಗೆ ಅವುಮಾನ ಸಾರ್?"

"ನೋಡ್ರಿ, ನನಿಗೆ ನೀವೇಳೊ ಮಾನ, ಅವುಮಾ ಅಂತವ್ಯಲ್ಲ ಗೊತ್ತಾಗದಿಲ್ಲ, ಇವುರಿಗೆಲ್ಲಾ ಉತ್ತರ ಹೇಳ ಕಾಲ ಬತ್ತದೆ ನೋಡ್ತಯಿರಿ."

"ಆ ಕಾಲ ಯಾವಾಗ ಬತ್ತದೆ ಸಾರ್?"

"ನೋಡ್ತಯಿರಿ, ಯಲ್ಲ ನಿಮ್ಮ ಕಣ್ಣೆದ್ರುಗೆ ನ್ಡಿತ ಆಗ ನನ್ನ ಮ್ಯಾಲೆ ಚಾಡಿ ಹೇಳಿರೊ ಜನ ಸರಿಯಾದುತ್ರ ಕೊಡ್ತಿನಿ."

"ನಿಮ್ಮ ಮೇಲೆ ಚಾಡಿ ಹೇಳಿದಾರೆ ಅನ್ನ ನಂಬ ಬುಟ್ರಲ್ಲ ಸಾರ್."

"ಯಾರು ಹೇಳಿರಬವುದು ಅಂತ ಗೊತ್ತು, ಅ ನಂಬಿದೆ."

"ಯಾರು ಹೇಳ್ಯವುರೆ ಸಾರ್?"

"ಇನ್ಯಾರಿದ್ದರೂ ಗಣಿ ಲೈಸೆನ್ಸ್, ಡಿ ನೋಟಿ ಕೇಶನ್ ಗಿರಾಕಿಗಳು ನಮ್ಮಲ್ಲೇ ಅವುರೆ."

"ಗಣಿ ವ್ಯವಹಾರ ನಿಮ್ಮ ಕುಟುಂಬದಲ್ಲೂ ಅ ಅಂದ್ರೆ ಬಾಲಕೃಷ್ಣ ಡಾ. ರಮೇಶ್ ಚಾಡಿ ಹೇಳಿದ್ದಾ"

"ರೀ ನಮ್ಮ ಕುಟುಂಬದಲ್ಲಿ ನಾವೇ ಚಾ ಹೇಳಿಕಳ್ತೀವೇನ್ರಿ? ಹೇಳಿದ್ರು ಕೇಳೋರ್‍ಯಾರು? ಅಷ್ಟೂ ಗೊತ್ತಾಗದಿಲ್ಲವಲ್ರಿ ನಿಮಗೆ. ಯಾವ ಸೀಮೆಯವ ನೀವು?

"ಧೂತ್ತೇರಿ!!!"

-ಯಾಹೂ

ಮುಸ್ಲಿಂ ಹುಡುಗಿಯ ಕಿಡ್ನಾಪ್, ರೇಪ್, ಮರ್ಡರ್

ಗೋರಿಪಾಳ್ಯದ ಸೈತಾನ್ ತೋತಾ_ರಫೀಕ್



ಕೊಲೆಯಾದ ಅಸ್ಮಾತಾಜ್

ಪ್ರಾಣಕ್ಕೇ ಬೆಲೆಯಿಲ್ಲದ ಮೇಲೆ ಮಾನಕ್ಕೆಲ್ಲಿ ಬೆಲೆ?

ಅದು ಗೋರಿಪಾಳ್ಯ, ಗಲ್ಲಿಗಲ್ಲಿಗಳಲ್ಲಿ ತಲೆ ಎತ್ತಿದ ಮಜೂರ್ ಗ್ಯಾಂಗ್‌ಗಳು, ಮೊಬೈಲ್ ಕಳ್ಳರು, ಒಬ್ಬರನ್ನೊಬ್ಬರು ಮುಗಿಸಲು ನಿಂತ ಹಂತಕ ಪಡೆಗಳಿಗೆ ಸಧ್ಯ ಅಲ್ಲಿನ ಬಡಪಾಯಿ ಮುಸ್ಲಿಂ ಹುಡುಗಿಯರೇ ಬಲಿಯಾಗಬೇಕಿದೆ. ಮಾಜಿ ಕೌನ್ಸಿಲರ್ ಆರಿಫ್ ಪಾಷಾ ಎಂಬ ಕ್ರಿಮಿನಲ್ ಪುಢಾರಿ ಸಾಕಿಕೊಂಡ ಮೊಬೈಲ್ ಕಳ್ಳರು, ಪಿಕ್‌ಪಾಕೆಟ್ ಗ್ಯಾಂಗ್‌ಗಳು ಮತ್ತು ರೌಡಿಪಡೆಗಳಿಂದ ತನ್ನ ಮಾನ ಉಳಿಸಿಕೊಳ್ಳಲು ಹೋಗಿಯೇ ಅಸ್ಮಾತಾಜ್ ಎಂಬ ನಿರ್ಗತಿಕ ಮುಸ್ಲಿಂ ಪೋರಿಯ ಹೆಣ ಬಿದ್ದಿದೆ.

ಬಹುಶಃ ಕಾಲ್‌ಸೆಂಟರ್ ಯುವತಿಯನ್ನೋ, ಅಧಿಕಾರಿಯ ಮಗಳನ್ನೋ ಯಾರಾದರೂ ಈ ರೀತಿ ಮಾಡಿದ್ದರೆ ಪೊಲೀಸರು ನಿರ್ದಾಕ್ಷಿಣ್ಯವಾಗಿ ಎನ್‌ಕೌಂಟರ್ ಮಾಡಿ ಬಿಸಾಡುತ್ತಿದ್ದರೇನೊ.

ಆದರೆ ಗೋರಿಪಾಳ್ಯದ ಅಸ್ಮಾತಾಜ್ ಪಾತ್ರೆ ಕಲಾಯಿ ಮಾಡುವ ನಿರ್ಗತಿಕ ಶಫೀವುಲ್ಲಾ ಖಾನ್‌ನ ಮಗಳು. ಆಕೆಯನ್ನು ಮಾಜಿ ಕೌನ್ಸಿಲರ್ ಆರಿಫ್ ಪಾಷಾನ ಬಂಟ ತೋತಾ ರಫೀಕ್ ಎಂಬ ಕ್ರಿಮಿನಲ್ ಹಾಡುಹಗಲೇ ಗೋರಿಪಾಳ್ಯದ ನಡುರಸ್ತೆಯಿಂದ ಹೊತ್ತೊಯ್ಯುತ್ತಾನೆ. ಹಾಗೇ ಹೊತ್ತೊಯ್ದವನು ಅವಳ ಮೇಲೆ ಅಮಾನುಷವಾಗಿ ಅತ್ಯಾಚಾರವೆಸಗಿದ್ದಾನೆ. ಅಷ್ಟೇ ಆಗಿದ್ದರೆ ಗೋರಿಪಾಳ್ಯದ ಬಗ್ಗೆ ಬರೆಯಬೇಕಿರಲಿಲ್ಲ, ಸೈತಾನ್ ರಫೀಕ್ ಆಕೆಯನ್ನು ಕೊಂದುಹಾಕಿದ್ದಾನೆ.

ಏಕೆ ಗೊತ್ತೆ? ತಾನು ಕಿಡ್ನಾಪ್ ಮಾಡಿದ ಹುಡುಗಿಯ ಹೆಂದೆ ತಾಯಿ ತನ್ನ ವಿರುದ್ಧ ಪೊಲೀಸರಿಗೆ ದೂರು ಕೊಟ್ಟರು ಎಂಬ ಒಂದೇ ಕಾರಣಕ್ಕೆ!



ಆರಿಫ್ ಮಗ ಇಮ್ರಾನ್‌ನ ಹಂತಕ ಪಡೆಯಲ್ಲಿ ತೋತಾರಫೀಕ್

ಹೇಳಿ, ತಮ್ಮ ಮುದ್ದಿನ ಮಗಳನ್ನು ಯಾರೋ ಘಾತಕಿಯೊಬ್ಬ ನಡುರಸ್ತೆಯಲ್ಲಿ ಹೊತ್ತೊಯ್ದರೆ ಆಕೆಯ ಹೆಂದೆ ತಾಯಿ ಪೊಲೀಸರಿಗಲ್ಲದೆ ಇನ್ಯಾರಿಗೆ ದೂರು ಕೊಡಬೇಕಿತ್ತು?

ಗೋರಿಪಾಳ್ಯದ ಪಾಳೇಗಾರ ಆರಿಫ್ ಹುಟ್ಟುಹಾಕಿದ ಹಂತಕ ಪಡೆಗಳ ಪೈಶಾಚಿಕತೆಗೆ ಇದು ಸಣ್ಣ ಸ್ಯಾಂಪಲ್ ಮಾತ್ರ. ಇಲ್ಲಿನ ರೌಡಿಪಡೆಗಳ ಹಾವಳಿ ಕಂಡೇ ಸರ್ಕಾರ ಗೋರಿಪಾಳ್ಯವನ್ನು ಮಹಿಳಾ ಮೀಸಲು ವಾರ್ಡ್ ಆಗಿ ಬದಲಾಯಿಸಿತು. ಅಲ್ಲಿಯತನಕ ಗೋರಿಪಾಳ್ಯದ ಪಾಳೇಗಾರ ನಂತೆ ಮೆರೆಯುತ್ತಿದ್ದ ಆರಿಫ್ ಕಳೆದ ಪಾಲಿಕೆ ಚುನಾವಣೆಯಲ್ಲಿ ತನ್ನ ಪತ್ನಿ ಜರೀನಾಳನ್ನೇ ನಿಲ್ಲಿಸಿ ಗೆಲ್ಲಿಸಿಕೊಂಡ. ಅಲ್ಲಿಗೆ ಆರಿಫ್, ಆತನ ತಮ್ಮ ಫಾರೂಕ್, ಆರಿಫ್ ಮಗ ಇಮ್ರಾನ್, ಇರ್ಫಾನ್ ಮತ್ತು ಫಾರೂಕ್ ಮಕ್ಕಳಾದ ಶಬ್ಬೀರ್, ಉಮರ್, ಅಕಬರ್, ಅಜಗರ್ ಇತ್ಯಾದಿಗಳಿಂದ ಗೋರಿಪಾಳ್ಯವನ್ನು ಮುಕ್ತಗೊಳಿಸುವ ಇಲ್ಲಿನ ಬಡ ಮುಸ್ಲಿಮರ ನಿರೀಕ್ಷೆಯೇ ಹುಸಿಯಾಗಿತ್ತು.

ಇಂಥದೊಂದು ದುಷ್ಟಕೂಟದ ವಿರುದ್ಧ ಶುರುವಿನಿಂದಲೂ ಸೆಣಸುತ್ತಲೇ ಬಂದವನು ಗೋರಿಪಾಳ್ಯದ ಅಲ್ತಾಫ್. ಕಳೆದ ಪಾಲಿಕೆ ಚುನಾವಣೆಯಲ್ಲಿ ಅಲ್ತಾಫ್‌ಗೆ ಪಕ್ಕದ ಜೆ.ಜೆ.ನಗರ ವಾರ್ಡಿನಿಂದ ಕಾಂಗ್ರೆಸ್ ಟಿಕೆಟ್ಟು ಸಿಕ್ಕಿತ್ತು. ತಾನು ಗೆಲ್ಲದಿದ್ದರೇನಂತೆ ಅಲ್ತಾಫ್ ಸೋಲಬೇಕೆಂದು ಲೆಕ್ಕಹಾಕಿದ ಆರಿಫ್ ಅಲ್ಲೂ ನಿಂತು ಮುಸ್ಲಿಮರ ಓಟು ಒಡೆದ. ಅಷ್ಟಕ್ಕೇ ತೃಪ್ತನಾಗದೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರಕ್ಕೆಂದು ಬಂದಿದ್ದ ಅಲ್ತಾಫ್ ತಂಡದ ಮೇಲೆ ದಾಳಿ ಮಾಡಿಸಿ ಅನ್ಯಾಯವಾಗಿ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ಕೊಲ್ಲಿಸಿಬಿಟ್ಟ.

ಹಾಗೆ ಅಲ್ತಾಫ್‌ನ ಇಬ್ಬರು ತಮ್ಮಂದಿರನ್ನು ನಡುರಸ್ತೆಯಲ್ಲಿ ಅಟ್ಟಾಡಿಸಿ ಕೊಚ್ಚಿ ಹಾಕಿದವರಲ್ಲಿ ಪ್ರಮುಖ

ಆರೋಪಿಗಳೇ ಆರಿಫ್‌ನ ಮಗ ಇಮ್ರಾನ್ ಮತ್ತು ಆತನ ಬಲಗೈ ಬಂಟ ತೋತಾ ರಫೀಕ್!

ಈ ತೋತಾ ರಫಿಕ್ ಬೆಂಗಳೂರಿನ ನಟೋರಿಯಸ್ ಮೊಬೈಲ್ ಲಿಫ್ಟರ್. ಪ್ರಾರಂಭದಲ್ಲಿ ಪಿಕ್‌ಪಾಕೆಟ್ ಮಾಡಿಕೊಂಡಿದ್ದ. ಈತನ ಅಣ್ಣಂದಿರಾದ ತುರಾಬ್, ಇಸ್ಮಾಯಿಲ್ ತಮ್ಮ ಆಲೀಂ ಎಲ್ಲರೂ ಬೆಂಗಳೂರಿನ ಕುಖ್ಯಾತ ಪಿಕ್‌ಪಾಕೆಟರ್ಸ್. ಕಲಾಸಿಪಾಳ್ಯ, ಚಿಕ್ಕಪೇಟೆ, ಮಾರ್ಕೆಟ್, ಟ್ಯಾನರಿ ರೋಡ್, ಜೇಜೆನಗರ ಪೊಲೀಸ್ ಠಾಣೆಗಳಲ್ಲಿ ಒಬ್ಬೊಬ್ಬರ ಮೇಲೂ ಅರ್ಧ ಡಜನ್ ಕ್ರಿಮಿನಲ್ ಕೇಸುಗಳಿವೆ. ತೋತಾ ರಫೀಕ್ ಈ ಹಿಂದೆ ಕಾಲಾ ಆಸಿಫ್ ಎಂಬ ಮಜೂರ್‌ನನ್ನು ಕತ್ತರಿಸಿ ಜೈಲಿಗೆ ಹೋಗಿದ್ದ. ಮತ್ತೊಬ್ಬ ಮೊಬೈಲ್ ಲಿಫ್ಟರ್ ಮುನ್ನಾನ ಕಾಲು ಕತ್ತರಿಸಿದ್ದ.



ರಕ್ಕಸ ಅರೀಫ್ ಪಾಷಾ

ಇಲ್ಲಿಗೆ ನಾಲ್ಕು ವರ್ಷದ ಹಿಂದೆ ಪಕ್ಕದ ಅರಾಫತ್‌ನಗರದ ಆಟೋ ಡ್ರೈವರ್ ಒಬ್ಬನ ಮಗಳನ್ನು ಹೊತ್ತೊಯ್ದು ಮದುವೆಯಾದ. ಆಕೆಗೆ ಇಬ್ಬರು ಮಕ್ಕಳಾದರೂ ರಫೀಕ್ ಹುಚ್ಚು ಬಿಡಲಿಲ್ಲ. ಮಾಜಿ ಕೌನ್ಸಿಲರ್ ಆರಿಫ್ ತಮ್ಮ ಫಾರೂಕ್‌ನ ಮಗ ಶಬ್ಬೀರ್ ಜೊತೆ ಸೇರಿ ಜೆ.ಸಿ. ನಗರದಲ್ಲಿದ್ದ ಇಬ್ಬರು ಲೈವ್‌ಬ್ಯಾಂಡ್ ಹುಡುಗಿಯರನ್ನು ಅಪಹರಿಸಿ ಮುಕ್ಕಿದ. ಇದಾಗಿ ತಿಂಗಳಿಗೇ ಪಕ್ಕದ ಗಲ್ಲಿಯಿಂದ ಮತ್ತೆ ಇಬ್ಬರು ಬ್ಯಾಂಡ್ ಹುಡುಗಿಯರನ್ನು ಹೊತ್ತೊಯ್ದ. 2005 ರ ಮಾರ್ಚ್‌ನಲ್ಲಿ ಆರಿಫ್ ಮಗ ಇಮ್ರಾನ್ ಮತ್ತು ತೋತಾ ರಫೀಕ್ ಸೇರಿ ಬ್ರಿಗೇಡ್ ರಸ್ತೆಯ ಲೈವ್‌ಬ್ಯಾಂಡ್ ಒಂದರಿಂದ ನಾಲ್ವರು ಗಾಯಕಿಯರನ್ನು ಕಿಡ್ನಾಪ್ ಮಾಡಿ ಅತ್ಯಾಚಾರವೆಸಗಿದ ಬಗ್ಗೆ ಇವತ್ತಿಗೂ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಕೇಸಿದೆ.

ತೋತಾ ರಫೀಕ್ ಇಮ್ರಾನ್‌ನ ಬಂಟನಷ್ಟೇ ಅಲ್ಲ ತನ್ನದೇ ಹದಿನೈದು ಮಂದಿ ಮಜೂರ್‌ಗಳ ಗ್ಯಾಂಗ್ ಕೂಡ ಕಟ್ಟಿಕೊಂಡಿದ್ದಾನೆ. ಪಾಪಿಗಳ ಹಿಂಡು ಪಾಪದ ದುಡ್ಡು ಹೆಚ್ಚಾದಂತೆಲ್ಲ ಗೋರಿಪಾಳ್ಯದ ಅರಾಫತ್‌ನಗರ, ಮೋಮಿನ್‌ಪುರ, ಜೇಜೆನಗರ ಸರ್ಕಲ್, ಸುಜಾತಾ ಟೆಂಟ್ ಹಿಂಭಾಗದ ಬಡ ಮುಸ್ಲಿಂ ಹುಡುಗಿಯರ ಪಾಲಿಗೆ ಕೀಚಕನಾಗಿ ಅವತರಿಸಿದ.

ವರ್ಷದ ಹಿಂದೆ ಮೋಮಿನ್‌ಪುರದ ಬತ್ತಿ ಉಜ್ಜುವ ಹುಡುಗಿಯೊಬ್ಬಳನ್ನು ಹೊತ್ತೊಯ್ದು ಪೀಡಿಸಿದ. ಅದಾಗಿ ಅರೇ ತಿಂಗಳಿಗೆ ಸುಜಾತಾ ಟೆಂಟ್ ಹಿಂಭಾಗದ ಬೀಫ್ ಅಂಗಡಿಯವನ ಮನೆಗೆ ನುಗ್ಗಿ ಆತನ ಮಗಳನ್ನು ಮುಕ್ಕಿದ. ತಿಂಗಳ ಹಿಂದೆಯೇ ಗಾರ್ಮೆಂಟ್ ಕೆಲಸಕ್ಕೆ ಹೋಗಿ ಬರುತ್ತಿದ್ದ ಕುಲ್ಸುಮ್ ಎಂಬಾಕೆಯನ್ನು ನಡುರಸ್ತೆಯಲ್ಲೇ ಎತ್ತಿ ಆಟೋಕ್ಕೆ ತುರುಕಿ ಕೊಂಡಿದ್ದ.

ಮರ್ಯಾದೆಗೆ ಅಂಜಿದ ನಿರ್ಗತಿಕ ಮುಸ್ಲೀಮರ‍್ಯಾರೂ ಈ ಬಗ್ಗೆ ಪೊಲೀಸರಿಗೆ ದೂರು ಕೊಡಲಿಲ್ಲ, ಕೊಟ್ಟರೂ ಸ್ವತಃ ಪಾಳೇಗಾರ ಆರಿಫ್‌ನೇ ಪೊಲೀಸ್ ಠಾಣೆಗೆ ಬಂದು ಬಿಡಿಸಿ ಕೊಂಡು ಹೋಗುತ್ತಿದ್ದ. ತೋತಾ ರಫೀಕ್ ಒಬ್ಬನೇ ಅಲ್ಲ ಆರಿಫ್ ಗ್ಯಾಂಗ್ ಸಾಕಿ ಬೆಳೆಸಿದ ಅನೇಕ ಪೋರ್ಕಿ ಗಳೆಲ್ಲ ಹೀಗೆ ಗೋರಿಪಾಳ್ಯದ ಬಡ ಮುಸ್ಲಿಂ ಹುಡುಗಿಯರ ಪಾಲಿನ ಕೀಚಕರಾಗಿ ಅವತರಿಸಿದ್ದರು.

ಇಂಥ ಪೀಡಕ ಸಂತತಿಯಿಂದ ಅಸ್ಮಾತಾಜ್ ತಾನೇ ಹೇಗೆ ಬಚಾವಾಗುವುದು ಸಾಧ್ಯವಿತ್ತು?

ಪಾತ್ರೆಕಲಾಯಿ ಮಾಡುವ ರಫೀವುಲ್ಲಾ ಖಾನ್ ಮತ್ತು ನೂರ್‌ಜಹಾನ್ ದಂಪತಿಗಳ ಇಬ್ಬರು ಗಂಡು ಐವರು ಹೆಣ್ಣುಮಕ್ಕಳ ಪೈಕಿ ಹದಿನೆಂಟರ ಅಸ್ಮಾತಾಜ್ ಕೊನೆಯ ಹೆಣ್ಣುಮಗಳು. ಈಕೆಯ ಹೊರತಾಗಿ ಎಲ್ಲ ಹೆಣ್ಣು ಮಕ್ಕಳಿಗೂ ಮದುವೆಯಾಗಿತ್ತು, ಏಳನೇ ತರಗತಿ ತನಕ ಓದಿ ಆನಂತರ ಗಾರ್ಮೆಂಟ್ ಕೆಲಸಕ್ಕೆ ಬಿದ್ದ ಅಸ್ಮಾ ಘಾತಕಿ ತೋತಾ ರಫೀಕ್ ಕಣ್ಣಿಗೆ ಬಿದ್ದದ್ದು ಇದೇ ಗೋರಿಪಾಳ್ಯದಲ್ಲಿ. ಒಂಭತ್ತನೇ ಕ್ರಾಸಿನಲ್ಲಿ ಆಕೆಯ ಅಕ್ಕ ರಜಿಯಾ ಸುಲ್ತಾನಾಳನ್ನು ನೋಡಲು ಪದೇಪದೇ ಬರುತ್ತಿದ್ದ ಅಸ್ಮಾಳನ್ನು ಪಕ್ಕದಲ್ಲೇ ಅಡ್ಡೆ ಹಾಕುತ್ತಿದ್ದ ತೋತಾ ರಫೀಕ್ ಆಗಾಗ ಕೀಚಾಯಿಸುತ್ತಿದ್ದ.

ಇಲ್ಲಿಗೆ ಆರು ತಿಂಗಳಿಂದ ಆಕೆ ಸಿಕ್ಕಾಗಲೆಲ್ಲ ಅಡ್ಡಗಟ್ಟಿ ತನ್ನನ್ನು ಮದುವೆಯಾಗುವಂತೆ ರಫೀಕ್ ಪೀಡಿಸುತ್ತಿದ್ದ. ಅಸ್ಮಾ ಪೊಲೀಸ್ ಕಂಪ್ಲೇಂಟ್ ಕೊಡ್ತೀನಿ ಎಂದರೆ ನಿನ್ನ ಅಪ್ಪ ಅಮ್ಮನನ್ನೇ ಮುಗಿಸಿಬಿಡ್ತೀನಿ ಎಂದು ಹೂಂಕರಿಸಿದ್ದ.

ಭೀತಿಗೆ ಬಿದ್ದ ಅಸ್ಮಾ ಇದ್ಯಾವುದನ್ನೂ ಮನೆಯಲ್ಲಿ ಹೇಳಿ ಕೊಂಡಿರಲಿಲ್ಲ. ಕಳೆದ ಬುಧವಾರ ತಮ್ಮ ತಬ್ರೇಜ್‌ನನ್ನು ಕರಕೊಂಡು ಟ್ಯಾನರಿ ರೋಡ್‌ನ



ಸೈತಾನ್ ತೋತಾರಫೀಕ್

ಸಂಬಂಧಿಯೊಬ್ಬರ ಮನೆಗೆ ಹೋದರೆ ಬಸ್ಸಿಳಿಯುವ ಮುನ್ನವೇ ರಫೀಕ್ ಪ್ರತ್ಯಕ್ಷನಾಗಿದ್ದ!

ಆದರೆ ಡಿಸೆಂಬರ್ 27 ಮಧ್ಯಾಹ್ನ ರಫೀಕ್‌ನಿಂದ ಅಸ್ಮಾ ಬಚಾವಾಗಲೇ ಇಲ್ಲ. ತಮ್ಮ ತಬ್ರೇಜ್‌ನನ್ನು ಹೊತ್ತೊಯ್ದವನೇ ಆತನಿಂದಲೇ ಫೋನ್ ಮಾಡಿಸಿ ಅಸ್ಮಾಳನ್ನು ಕರೆಸಿಕೊಂಡಿದ್ದಾನೆ. ಅಸ್ಮಾ ಬಂದಿದ್ದೇ ಆಕೆಯನ್ನು ಎತ್ತಿ ಮಹಬೂಬ್‌ನ ಆಟೋಕ್ಕೆ ತುರುಕಿ, ತಮ್ಮ ತಬ್ರೇಜ್‌ನ ಮೊಬೈಲನ್ನೇ ಕಿತ್ತುಕೊಂಡು ನಾಪತ್ತೆಯಾಗಿದ್ದಾನೆ. ಮರ್ಯಾದೆಗೆ ಅಂಜಿ ಸುಮ್ಮನಿದ್ದ ತಾಯಿ ನೂರ್‌ಜಹಾನ್ ಜನವರಿ 2 ರಂದು ಜೇಜೆನಗರ ಪೊಲೀಸ್ ಠಾಣೆಗೆ ಬಂದು ದೂರು ಕೊಟ್ಟಿದ್ದಾಳೆ.

ರಫೀಕ್‌ನ ಇಬ್ಬರು ಅಕ್ಕಂದಿರು ಮತ್ತು ಆಟೋ ಚಾಲಕ ಮಹಬೂಬ್‌ನನ್ನು ಪೊಲೀಸರು ಕರೆಸಿ ಕೂಡ್ರಿಸಿ ಕೊಂಡರೆ ಅವರನ್ನು ಆರಿಫ್‌ನೇ ಬಂದು ಬಿಡಿಸಿ ಒಯ್ದಿದ್ದ. ವಿಧಿಯಿಲ್ಲದೇ ಮಹಬೂಬ್ ಮನೆ ಬಳಿ ಕೇಳಲು ಹೋದರೆ ಅಸ್ಮಾಳ ತಾಯಿ ಮತ್ತು ಇಬ್ಬರು ಅಕ್ಕಂದಿರನ್ನು ಮಹಬೂಬ್ ನಡುರಸ್ತೆಯಲ್ಲೇ ಹಾಕಿ ತುಳಿದುಬಿಟ್ಟ. ಇದನ್ನು ಪೊಲೀಸರಿಗೆ ಹೇಳಿದರೆ ಪೊಲೀಸರು ನೀನೇಕೆ ಹೋಗಿದ್ದೆ ಎಂದು ತಾಯಿಯನ್ನೇ ಬಯ್ದರು.

ಯಾವತ್ತು ತನ್ನ ಮೇಲೆ ಪೊಲೀಸರಿಗೆ ದೂರು ಕೊಟ್ಟಿದ್ದಾರೆಂದು ಗೊತ್ತಾಯಿತೋ ರಫೀಕ್ ಕೆರಳಿದ್ದಾನೆ. ತನ್ನ ವಶದಲ್ಲಿದ್ದ ಅಸ್ಮಾಳ ಮೇಲೆ ಈಗಾಗಲೇ ಅಮಾನುಷವಾಗಿ ಅತ್ಯಾಚಾರವೆಸಗಿದ್ದ. ಬಿಟ್ಟರೆ ಅಸ್ಮಾ



ತಂದೆಯೊಂದಿಗೆ ಖುಷಿಯಲ್ಲಿ ಅಸ್ಮಾತಾಜ್

ಬದುಕಿರುತ್ತಿದ್ದಳು. ಆದರೆ ರಫಿಕ್ ಸೈತಾನ. ಕನಕಪುರ ರಸ್ತೆಯ ನಿರ್ಜನ ತುರಳ್ಳಿ ಕಾಡಿಗೆ ಕರೆದೊಯ್ದಿದ್ದೇ ಆಕೆಯನ್ನು ಕೊಂದು ಹಾಕಿದ್ದಾನೆ. ಹೆಣವನ್ನು ಅಲ್ಲೆ ಎಸೆದು ಆಕೆಯ ತಮ್ಮ ತಬ್ರೇಜ್ ಮೊಬೈಲಿಗೆ ಫೋನ್ ಮಾಡಿ 'ನೋಡು ನಿನ್ನಕ್ಕನ್ನ ಕೊಂದು ಕೆಂಗೇರಿ ಮೋರಿಗೆ ಹಾಕಿದ್ದೀನಿ' ಎಂದಿದ್ದಾನೆ. ಇದನ್ನು ಜೇಜೆನಗರ ಪೊಲೀಸರಿಗೆ ಹೇಳಿದರೆ 'ಅಲ್ರೀ, ತಾನೇ ಕೊಂದು ಯಾರಾದರೂ ಫೋನ್ ಮಾಡಿ ಹೇಳ್ತಾರೇನ್ರೀ?' ಎಂದು ನಕ್ಕಿದ್ದಾರೆ. ಕೆಂಗೇರಿ ಪೊಲೀಸ್ ಠಾಣೆಗೆ ಹೋದರೆ ಅಲ್ಲೂ ಯಾವುದೇ ಬಾಡಿ ಸಿಕ್ಕಿಲ್ಲ ಎಂದಿದ್ದಾರೆ.

ಆದರೆ ಜನವರಿ 5ಕ್ಕೆ ತಲಘಟ್ಟಪುರ ಪೊಲೀಸರೇ ನಿಮ್ಮಲ್ಲಿ ಯಾವುದಾದ್ರೂ ಹುಡುಗಿಯ ಮಿಸ್ಸಿಂಗ್ ಕೇಸ್ ಇದೆಯಾ ಎಂದು ಜೇಜೆನಗರಕ್ಕೆ ಫೋನ್ ಮಾಡಿದ್ದಾರೆ. ಹೋಗಿ ನೋಡಿದರೆ ಅದು ಅಸ್ಮಾತಾಜ್‌ಳದ್ದೇ ಹೆಣ ವಾಗಿತ್ತು. ರಫೀಕ್ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ. ಕತ್ತು ಹಿಸುಕಿ ಕೊಂದು ಹಾಕಿದ್ದ!

ಒಬ್ಬ ಕ್ರಿಮಿನಲ್ ಯಾರೋ ಯುವತಿಯನ್ನು ನಡುರಸ್ತೆಯಲ್ಲಿ ಹೊತ್ತೊಯ್ಯುವುದು, ಅದನ್ನು ಪೊಲೀಸರಿಗೆ ತಿಳಿಸಿದ ಒಂದೇ ತಪ್ಪಿಗೆ ಅತ್ಯಾಚಾರವೆಸಗಿ ಕೊಂದು ಹಾಕೋದು, ಆನಂತರ ನಾನೇ ಕೊಂದು ಇಂಥಲ್ಲೇ ಬಾಡಿ ಬೀಸಾಕಿದ್ದೇನೆಂದು ಮನೆಯವರಿಗೆ ಫೋನ್ ಮಾಡಿ ಹೇಳೋದು ಬೆಂಗಳೂರಿನಲ್ಲಿ ಹಿಂದ್ಯಾವತ್ತಾದರೂ ನಡೆದಿತ್ತಾ?

ಏಕೆಂದರೆ ಅದು ಗೋರಿಪಾಳ್ಯ. ಅಲ್ಲಿ ಹೆಣ್ಣಾಗಿ ಹುಟ್ಟುವುದೇ ಮಹಾಪರಾಧ!

—ವರದಿಗಾರ

ಮುಸ್ಲಿಂ ಹುಡುಗಿಯರ ಪಾಡು



ಹಿಂದಾದರೆ ಬತ್ತಿ ಉಜ್ಜಿಕೊಂಡೋ ಬೀಡಿ ಕಟ್ಟಿಯೋ ಹೊಟ್ಟೆ ಹೊರೆದು ಕೊಳ್ಳುತ್ತಿದ್ದ ಗೋರಿಪಾಳ್ಯದ ಮುಸ್ಲಿಂ ಹುಡುಗಿಯರು ಇತ್ತೀಚೆಗೆ ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಿದ್ದಾರೆ. ಹಾಗೆ ಮನೆಯಿಂದ ಹೊರಬಿದ್ದ ಅನೇಕ ಹುಡುಗಿಯರು ಇಲ್ಲಿನ ಕ್ರಿಮಿನಲ್‌ಗಳಿಗೆ ತುತ್ತಾಗುತ್ತಲೂ ಇದ್ದಾರೆ.

ಈಗ ಅಸ್ಮಾತಾಜ್ ಬಲಿಯಾಗಿದ್ದೇ ಆರಿಫ್ ಪಾಷಾ ರಫೀಕ್ ತನ್ನ ಹುಡುಗನೇ ಅಲ್ಲ, ಅವನನ್ನು ಹಿಂದೆಯೇ ಒದ್ದೋಡಿಸಿದ್ದೆ ಎಂದು ತಿಪ್ಪೆ ಸಾರಿಸುತ್ತಿದ್ದಾನೆ. ಅಷ್ಟಕ್ಕೂ ಅಸ್ಮಾತಾಜ್ ತಾಯಿ ನೂರ್‌ಜಹಾನ್ ಆರೀಫ್‌ಗೆ ವರಸೆಯಲ್ಲಿ ತಂಗಿಯಾಗಬೇಕು. ತಾನೇ ಸಾಕಿದ ಕ್ರಿಮಿಯಿಂದ ತನ್ನ ತಂಗಿಯ ಮಗಳೇ ಕೊಲೆಯಾದಾಗಲೂ ಆರಿಫ್‌ಗೆ ಆ ಬಗ್ಗೆ ನಯಾಪೈಸೆಯ ಪಶ್ಚಾತ್ತಾಪ ವಿಲ್ಲ, ವಿಪರ್ಯಾಸವೆಂದರೆ ತನ್ನ ಕಡುವೈರಿ ಅಲ್ತಾಫ್ ವಿರುದ್ಧ ಈತನೇ ಬೆಳೆಸಿದ್ದ ಕಾಲು ಎಂಬಾತನೇ ಇಲ್ಲಿಗೆ 2 ವರ್ಷದ ಹಿಂದೆ ಈತನ ಮಗಳನ್ನೇ ಹೊತ್ತೊಯ್ದಿದ್ದ, ಇಷ್ಟಾಗ್ಯೂ ಆರಿಫ್‌ಗೆ ಬುದ್ಧಿ ಬಂದಿಲ್ಲ, ಕನಿಷ್ಠ ತನ್ನ ಹುಡುಗರಿಂದ ಮುಸ್ಲಿಂ ಹುಡುಗಿಯರನ್ನು ಕಾಪಾಡಬೇಕೆಂಬ ಕನಿಷ್ಠ ಪರಿವೆಯೂ ಈತನಿಗಿಲ್ಲ.

ಜೇಜೆನಗರದ ಎಸ್ಸೈ ಲಿಂಗರಾಜ್ ಮಾತ್ರ ಇತ್ತೀಚೆಗೆ ಆರಿಫ್ ಗ್ಯಾಂಗಿನ ಕೀಚಕರನ್ನು ಎಳೆದೊಯ್ದು ರಿಪೇರಿ ಮಾಡುತ್ತಿದ್ದಾರೆ. ಮಿಕ್ಕಂತೆ ಮಸೀದಿಗಳಾಗಲಿ, ಇಲ್ಲಿನ ನಾಯಕರಾಗಲಿ ಮುಸ್ಲಿಂ ಹುಡುಗಿಯರ ಪಾಡು ಕೇಳಲ್ಲ, ಅವರ ಪಾಲಿಗೆ ಯಾರೂ ಇಲ್ಲ.

ಸುಪಾರಿ ಕಿಲ್ಲರ್ ಆಗಿದ್ದ, ಸ್ವತಃ ಮುಸ್ಲಿಂ ದ್ವೇಷಿಯೂ ಆಗಿದ್ದ ಮೂಲ್ಕಿ ರಫೀಕ್‌ನ ಎನ್‌ಕೌಂಟರ್ ಆಗಿದೆ ಎಂಬ ಸುದ್ದಿ ತಿಳಿದು, ಆತನ ಹೆಂಡತಿ-ಮಕ್ಕಳ ಹೊರತಾಗಿ ಮರುಗುವವರು ಯಾರೂ ಇಲ್ಲ. ಆದರೆ ಮೊದಲು ಭಜರಂಗಿ ರೌಡಿ ಪೊಳಲಿ ಅನಂತುನನ್ನು ಕೊಂದು ಆನಂತರ ಸುಖಾನಂದ ಶೆಟ್ಟಿಯನ್ನು ಮುಗಿಸುವ ಮೂಲಕ ಮುಸ್ಲಿಂ ಡಾನ್ ಆಗಲು ಹೊರಟಿದ್ದ ಮೂಲ್ಕಿ ರಫೀಕನನ್ನು ನಕಲಿ ಎನ್‌ಕೌಂಟರ್‌ನಲ್ಲಿ ಮುಗಿಸಿದ ಮೂಲಕ ಮಂಗಳೂರಿನ ಖಾಕಿ ವ್ಯವಸ್ಥೆ ಮತ್ತೊಮ್ಮೆ ಇಲ್ಲಿನ ಖಾವಿ ಪಡೆಯ ಶಹಬ್ಬಾಸ್‌ಗಿರಿಗೆ ಪಾತ್ರವಾಗಿದೆ. ಅಷ್ಟೇ ಅಲ್ಲ, ರಫೀಕನನ್ನು ಕೊಲ್ಲುವ ಮೂಲಕ ಗೋಲಿಬಾರ್‌ನಲ್ಲಿ ಹತರಾದ ಪ್ರೇಮ್ ಮತ್ತು ದಿನೇಶ್ ಎಂಬ ಮೂಲ್ಕಿಯ ಚಡ್ಡಿ ಪಡೆಯ ಕಾರ್ಯಕರ್ತರ ಸಾವಿಗೆ ಪೊಲೀಸರೇ ಪ್ರಾಯಶ್ಚಿತ್ತ ಮಾಡಿಕೊಂಡಂತಾಗಿದೆ.

ಮೂಲ್ಕಿ ರಫೀಕ್‌ಗೆ 'ಚಡ್ಡಿ' ಪೊಲೀಸರ ಗುಂಡೇಟು



ಸುಖಾನಂದ ಶೆಟ್ಟಿ ಹತ್ಯೆಯಲ್ಲಿ ಯಾವತ್ತು ಮೂಲ್ಕಿ ರಫೀಕನ ಹೆಸರು ಕೇಳಿಬಂದಿತ್ತೋ ಅಂದೇ 'ಲಂಕೇಶ್' ಮೂಲ್ಕಿ ರಫೀಕನಿಗೆ ಕಾದಿದೆ ಎನ್‌ಕೌಂಟರ್ ಎಂದು ಸ್ಪಷ್ಟವಾಗಿ ವರದಿ ಮಾಡಿತ್ತು. ಅದೀಗ ನಿಜವಾಗಿದೆ. ಈ ನಡುವೆ ಆತನ ಸಹಚರ ಸುಧೀರ್‌ನ ಎನ್‌ಕೌಂಟರ್ ಆದ ಸುಮಾರು ಒಂದು ತಿಂಗಳಿಗೆ ಮೂಲ್ಕಿ ರಫೀಕ್ ಪೊಲೀಸರು ಆಡಿದ 'ಪರಾರಿ' ಮತ್ತು 'ಎನ್ ಕೌಂಟರ್' ಎಂಬ ಎರಡು ಅಂಕಗಳ ನಾಟಕದಲ್ಲಿ ನಿಕಾಲಿಯಾಗಿದ್ದಾನೆ.



ರಫೀಕನ ಹೆಂಡತಿ

ಮೂಲ್ಕಿ ರಫೀಕ್‌ನ ಇತಿಹಾಸ

ಮೂಲ್ಕಿಯ ಆಲಿಗಾರ್ಡನ್‌ನ ಹಸನಬ್ಬ-ಬೀಪಾತಮ್ಮ ದಂಪತಿಗಳ ಏಳು ಮಕ್ಕಳಲ್ಲಿ ಮೂರನೇಯವನೇ ರಫೀಕ್. ಬಾಲ್ಯದಲ್ಲೊಮ್ಮೆ ಗಣೇಶ ಚತುರ್ಥಿ ಸಂದರ್ಭದಲ್ಲಿ ಮುನೀರ್ ಎಂಬಾತನಿಗೆ ಕರ್ಮಾರ್ ಸೊಂಟೆ ಯಲ್ಲಿ ಬಡಿದು ಗಲಾಟೆ ಮಾಡಿದ್ದ. ಈ ಪ್ರಕರಣ ಆದನಂತರ ಈತನಿಗೆ ಕರ್ಮಾರ್ ಸೊಂಟೆ ರಫೀಕ್ ಎಂಬ ಅಡ್ಡಹೆಸರು ಅಂಟಿಕೊಂಡಿತು. ಮೂರನೆ ತರಗತಿಗೇ ಓದು ನಿಲ್ಲಿಸಿ ಮೋಗವೀರರ ಜತೆ ರಂಪಣೆಯಲ್ಲಿ ಮೀನು ಹಿಡಿಯಲು ತೊಡಗಿದ್ದ ರಫೀಕ್, ಫಾರಿನ್‌ನಲ್ಲಿದ್ದ ಮೈಯುದ್ದೀನ್ ಎಂಬಾತನ ಹೆಂಡತಿ ಮೇಲೆ ಕಣ್ಣು ಹಾಕಿ ಅವಳನ್ನು ಬುಟ್ಟಿಗೆ ಹಾಕಿಕೊಂಡಿದ್ದ. ಆನಂತರ ಆತ ಹಿಡಿದಿದ್ದು ಬರೀ ಅಡ್ಡ ದಾರಿಯನ್ನೇ. ಇದೇ ಹೊತ್ತಿಗೆ ಮೂಲ್ಕಿ ನವೀನ ಎಂಬ ರೌಡಿಯ ಗೆಳೆತನವಾಗಿ ರಫೀಕನಿಗ ರೌಡಿಜಂನ ದೀಕ್ಷೆಯೂ ಸಿಕ್ಕಿತು.

ಪಾತಕ ಲೋಕಕ್ಕೆ ಎಂಟ್ರಿ

ರಫೀಕ್ ಕೈಯಾರೆ ಮಾಡಿದ ಮೊದಲ ಕೊಲೆ ಕೆ.ಸಿ. ರೋಡ್ ತಲಪಾಡಿಯ ಡಬ್ಬಲ್ ಮರ್ಡರ್. ಕೈಯಲ್ಲಿ ಬಿಡಿಗಾಸಿಲ್ಲದೆ ಬಕನಾಸಿಯಂತೆ ಅಂಡಲೆಯುತ್ತಿದ್ದ ರಫೀಕ್, ಅಜ್ಮಲ್ ಎಂಬ ಮಾಂಸದ ವ್ಯಾಪಾರಿಗೆ ಗಂಟು ಬಿದ್ದ. ವ್ಯಾಪಾರದಲ್ಲಿ ತನ್ನ ಪ್ರತಿಸ್ಪರ್ಧಿಗಳಾದ ಅಮೀರ್ ಹುಸೇನ್ ಮತ್ತು ರಿಜ್ವಾನ್‌ನನ್ನು ಮುಗಿಸಿದರೆ ಒಂದು ಲಕ್ಷ ಕೊಡುತ್ತೇನೆಂದು ಅಜ್ಮಲ್ ರಫೀಕ್‌ಗೆ ಸುಪಾರಿ ನೀಡಿದ. 2000ದ ಆಗಸ್ಟ್ ತಿಂಗಳ ಮೊದಲನೆ ದಿನ ಬೆಳಗಿನಜಾವ ತಮ್ಮ ಮನೆಯಿಂದ ಬರುತ್ತಿದ್ದ ಅಮೀರ್ ಹುಸೇನ್ ಮತ್ತು ರಿಜ್ವಾನ್‌ರನ್ನು ಕೆ.ಸಿ. ರೋಡ್ ಬಳಿ ತನ್ನ ಸಹಚರರದಿಂದ ಕೊಲ್ಲಿಸಿದ. ಆದರೆ ತಾನು ಪೊಲೀಸರಿಗೆ ಸಿಕ್ಕಿ ಬಿದ್ದರೆ ಎನ್‌ಕೌಂಟರ್ ಮಾಡುತ್ತಾರೆಂದು ಬೆದರಿ ತಲೆಮರೆಸಿಕೊಂಡಿದ್ದ ರಫೀಕ್ ಪುಡಿ ರಾಜಕಾರಣಿ ಕಂ ರೌಡಿ ಎಂ.ಡಿ. ಜಬ್ಬಾರ್‌ಗೆ ಗಂಟುಬಿದ್ದ. ಆಗ ಉಳ್ಳಾಲದಲ್ಲಿ ಎಸ್.ಐ. ಆಗಿದ್ದ ಗಣಪತಿಯ ಪ್ರಮೋಷನ್ ವಿಚಾರದಲ್ಲಿ ಜಬ್ಬಾರ್ ಓಡಾಡಿದ್ದ ಕಾರಣಕ್ಕೆ ಗಣಪತಿಯಿಂದ ರಫೀಕ್‌ನನ್ನು ಬಂಧಿಸುವ ನಾಟಕ ನಡೆದಿತ್ತು. ಸಂಪೂರ್ಣವಾಗಿ ತಯಾರಿ ನಡೆಸಿದ ರೀತಿಯಲ್ಲೇ ಮುಂಚಿತವಾಗಿಯೇ ಗೊತ್ತು ಮಾಡಿದ್ದ ದಿನ ಎಲ್ಲರ ಸಮ್ಮುಖದಲ್ಲೇ ಚೋಕಟ್ಟೆಯ ರೈಲ್ವೇ ಟ್ರ್ಯಾಕ್ ಬಳಿ ಪೊಲೀಸರ ಬಲೆಗೆ ರಫೀಕ್ 'ಬಿದ್ದ'.

ಆದರೆ ಈ ಪ್ರಕರಣದಲ್ಲಿ ಆತ ನಾಲ್ಕು ವರ್ಷ ಜೈಲು ವಾಸ ಅನುಭವಿಸಿ ಹೊರಗೆ ಬರುವ ಹೊತ್ತಿಗೆ ಅವನ 'ಅಪತ್ಬಾಂಧವ' ಎಂ.ಡಿ. ಜಬ್ಬಾರ್‌ನ ಕೊಲೆಯಾಗಿತ್ತು. ಜೈಲಿಂದ ಹೊರಬಂದದ್ದೇ ಮಾಡಲೊಂದು ಕೆಲಸ ಇರಲಿ ಎಂದು ಸೂಲಲ್ಪಾಡಿ ಫೈನಾನ್ಸ್‌ನಲ್ಲಿ ಸೀಜರ್ ಆಗಿದ್ದ ರಫೀಕ್ ಬಲಾತ್ಕಾರವಾಗಿ ಕ್ವಾಲೀಸ್ ಕಾರೊಂದನ್ನು ಸೀಜ್ ಮಾಡಿ ಮತ್ತೆ ಪೊಲೀಸರಿಗೆ 'ವಾಂಟೆಡ್' ಆದ.

ಅವತ್ತು ಪೊಲೀಸರ ಕಣ್ಣುತಪ್ಪಿಸಿ ಹೆಂಡತಿ ಮತ್ತು ಮಕ್ಕಳೊಂದಿಗೆ ಕ್ವಾಲೀಸ್ ಕಾರು ಸಮೇತ ಭೂಗತನಾದ ರಫೀಕ್ ಮತ್ತೆ ಕಾಣಿಸಿಕೊಂಡಿದ್ದು 2005ರಲ್ಲಿ. ಆಗ ಇಬ್ಬರು ಮುಸ್ಲಿಂ ಉದ್ಯಮಿಗಳಿಂದ ಸುಪಾರಿ ಪಡೆದ ರಫೀಕ್ ತನ್ನ ಗಾಡ್‌ಫಾದರ್ ಜಬ್ಬಾರ್‌ನನ್ನು ಕೊಂದಿದ್ದ ಪೊಳಲಿ ಅನಂತುನನ್ನು ಪೊಳಲಿ ದ್ವಾರದ ಅದೇ ವರ್ಷ ಜೂನ್ ತಿಂಗಳ 21ನೇ ತಾರೀಖು ಬರ್ಭರವಾಗಿ ಕೊಚ್ಚಿ ಹಾಕಿದ. ಇದಾದ ನಂತರ ಮಂಗಳೂರಿನಲ್ಲಿ ತನಗೆ ಉಳಿಗಾಲವಿಲ್ಲ ಎಂಬುದನ್ನು ಅರ್ಥಮಾಡಿಕೊಂಡ ರಫೀಕ್ ಬೆಂಗಳೂರಿಗೆ ಬಂದ. ಅಲ್ಲಿ ಆತನಿಗೆ ಆಶ್ರಯ ನೀಡಿದ್ದು ಮೂಲ್ಕಿ ಮೂಲದವನೇ ಆದ, ಬೆಂಗಳೂರಲ್ಲಿದ್ದೇ ದೇಶಾದ್ಯಂತ ಗಣ್ಯರಿಗೆ ಭವಿಷ್ಯ ಹೇಳುವ ದಂಧೆಯಲ್ಲಿ ತೊಡಗಿರುವ ಒರ್ವ ಖದೀಮ ಭಟ್ಟ.

ಕಳೆದ ಒಂದು ವರ್ಷದಿಂದ ಬೆಂಗಳೂರಿಗೆ ಹತ್ತಿರದ ಕುಣಿಗಲ್‌ನಲ್ಲಿ ಬಾಡಿಗೆ ಮನೆಯಲ್ಲಿ ವಾಸಿಸುತ್ತ, ತನ್ನ ಹೆಂಡತಿ ಮೂಲಕ ದಕ್ಷಿಣ ಕನ್ನಡದಲ್ಲಿ ಡೀಲು ಕುದುರಿಸಿ ಕಮಾಯಿಸುತ್ತಿದ್ದ ರಫೀಕ್ ಕೊನೆಗೆ ಕೈ ಹಾಕಿದ್ದೇ ಸುಖಾನಂದ ಶೆಟ್ಟಿ ಹತ್ಯೆಗೆ.

ಪ್ರಕಾಶ್ ಪಿಂಟೋ

ಹಣಕ್ಕೋಸ್ಕರ ಯಾವುದಕ್ಕೂ ಹೇಸದ ರಫೀಕ್‌ಗೆ ಒಂದು ಆಸೆಯಿತ್ತು. ಮಂಗಳೂರಿನ ಬಪ್ಪಬ್ಯಾರಿ ಪ್ರಕರಣದಲ್ಲಿ ಚಡ್ಡಿ ವೀರನಂತೆ ಮಿಂಚಿದ ಸುಖಾಂದ ಶೆಟ್ಟಿಯನ್ನು ಮುಗಿಸಿದರೆ ತಾನೊಬ್ಬ ಮುಸ್ಲಿಂ ಡಾನ್ ಆಗಬಹುದು; ಹಣವೂ ಕಂತೆಗಟ್ಟಲೆ ಹರಿದುಬರಬಹುದು; ಮುಸ್ಲಿಂ ದ್ವೇಷಿ ಎನ್ನುವ ಕಳಂಕವೂ ತೊಡೆದು ಹಾಕಬಹುದು ಎನ್ನುವ ಭ್ರಮೆ ಆತನಿಗಿತ್ತು. ಅದೇ ಹೊತ್ತಿಗೆ ಈತನಿಗೆ ಅನಾಹುತಕಾರಿ ಹಂತಕ, ಜೈಲ್ ಬ್ರೇಕರ್ ಸುಧೀರ್‌ನ ಸಖ್ಯವೂ ಬೆಳೆದಿತ್ತು. ಆತನ ಮೂಲಕ ಸ್ಕೆಚ್ ಹಾಕಿದ ರಫೀಕ್ ಸುಖಾನಂದ ಶೆ[...] ಕೊಲೆಯನ್ನು ಸುಸೂತ್ರವಾಗಿ ಮಾಡಿಸಿದ. ಶೆ[...] ಕೊಲೆಯಲ್ಲಿನ ಪಾತ್ರಧಾರಿಗಳು ಒಬ್ಬೊಬ್ಬರೇ ಪೊಲೀ[...] ಬಲೆಗೆ ಬೀಳುತ್ತಲೇ ರಫೀಕ್ ತಮಿಳುನಾಡಿ[...] ಪರಾರಿಯಾದ. ಅಲ್ಲಿನ ತಿರುತ್ತಣಿ ಎಂಬ ಪ್ರದೇಶದ[...] 600 ರೂಪಾಯಿ ಮತ್ತು 250 ರೂಪಾಯಿಯ ಎರ[...] ಬಾಡಿಗೆ ರೂಮುಗಳನ್ನು ಹಿಡಿದು ಪತ್ನಿ-ಮಕ್ಕಳ ಸಮೇ[...] ದಿನ ಎಣಿಸುತ್ತಿದ್ದ. ಸುಧೀರ್‌ನ ಎನ್‌ಕೌಂಟರ್ ನಂ[...] ರಫೀಕ್‌ನ ಜಾಡು ಹಿಡಿದ ಪೊಲೀಸರು ಮೊಬೈ[...] ಟ್ಯಾಪಿಂಗ್ ಮೂಲಕ ತಮಿಳುನಾಡಿಗೆ ಹೋಗಿ ರಫೀಕ[...] ಅಡಗುತಾಣ ಪತ್ತೆ ಮಾಡಿದರು.

ತಮಿಳುನಾಡಿನ ಪೊಲೀಸರ ಸಹಕಾರದೊಂದಿ[...] ಆತನ ರೂ. 250 ಬಾಡಿಗೆಯ ರೂಂಗೆ ನುಗ್ಗಿದಾ[...] ಆತ ಇನ್ನೊಂದು ರೂಂನಲ್ಲಿದ್ದ. ಆದರೆ ಮಗನ ಮೂ[...] ಅಪಾಯವನ್ನರಿತು, ಅಲ್ಲಿಂದಲೂ ಆಟೋರಿಕ್ಷಾ ಹಿಡಿ[...] ತಪ್ಪಿಸಿಕೊಳ್ಳುವ ಯತ್ನದಲ್ಲಿದ್ದಾಗಲೇ ರಫೀಕ್‌ನ[...] ಪೊಲೀಸರು ಬಂಧಿಸಿದರು. ಹಾಗೆ ರಫೀಕ್‌ನ[...] ಜೀವಂತವಾಗಿ ಹಿಡಿದು ತಂದ ಬಗ್ಗೆಯೇ ಸಂಶಯಗ[...] ಕೇಳಿಬಂದವು. ಸುಧೀರ್‌ನನ್ನು ಕೊಂದು ರಫೀಕ್‌ನ[...] ಪೊಲೀಸರು ಉಳಿಸಿದ್ದರ ಹಿಂದೆ ಮೂಲ್ಕಿ ಮೂಲ[...] ಭಟ್ಟನ ಕೈವಾಡ ಇರಬಹುದೇ ಎಂದು ಜನ ತರ್ಕಿಸಿದ್ದ[...]

ಹಾಗಂತ ರಫೀಕ್‌ನನ್ನು ಜೀವಂತ ಉಳಿಸ[...] ಆಸಕ್ತಿಯೇನು ಪೊಲೀಸರಿಗೆ ಇರಲಿಲ್ಲ. ರಫೀಕ್‌ನ[...] ತಮಿಳುನಾಡಿನಲ್ಲಿ ಹಿಡಿದದ್ದು ಅ[...] ಮಾಧ್ಯಮಗಳಿಗೆ ಗೊತ್ತಾದದ್ದು ಪೊಲೀಸರ[...] ಪೀಕಲಾಟಕ್ಕೆ ಸಿಕ್ಕಿಸಿತ್ತು. ಏಕೆಂದರೆ ಈ[...] ಆತನನ್ನೂ ಸುಧೀರ್‌ನನ್ನು ಮುಗಿಸಿದ[...] ಸುಲಭವಾಗಿ ಮುಗಿಸುವಂತಿರಲಿಲ್ಲ. ಜೊ[...] ರಫೀಕನ ಬಾಯಿ ಬಡಿಸುವ ಹರಕತ[...] ಪೊಲೀಸರಿಗಿತ್ತು.



ರಫೀಕನನ್ನು ಎನ್‌ಕೌಂಟರ್ ಮಾಡಿದ ಸ್ಥಳ

ಕೋರ್ಟಿಗೆ ಹಾಜರುಪಡಿಸಿದ ರಫೀ[...] ತನಿಖೆಗೆಂದು ನ್ಯಾಯಾಲಯ ಆತನ[...] ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಸುಖಾನ[...] ಶೆಟ್ಟಿಯ ಹತ್ಯೆಯ ವಿಚಾರಣೆ ನಡೆದ ನಂ[...] ಪೊಳಲಿ ಅನಂತು ಹತ್ಯೆಯ ವಿಚಾರಣೆಗೆ[...] ರಫೀಕ್ ಬೇಕೆಂದು ಬಜ್ಪೆ ಪಿ.ಎಸ್. ಗಂಗೀ[...]

'ಎನ್‌ಕೌಂಟರ್' ಎಂಬ ಲೈಸೆನ್ಸ್

'ಎನ್‌ಕೌಂಟರ್'. ಇದು ತಮಗೆ ಬೇಡವಾದವರನ್ನು ಪೊಲೀಸರು ಮುಗಿಸುವುದಕ್ಕೆಂದೇ ಇರುವ ವಿಶೇಷ ಲೈಸನ್ಸೇ? ಕ್ರಿಮಿನಲ್‌ಗಳ ಗೂಡಾಗುತ್ತಿರುವ ಕರಾವಳಿ ಕರ್ನಾಟಕದಲ್ಲಿ ಪೊಲೀಸರಿಗೆ 'ಎನ್‌ಕೌಂಟರ್' ಹೆಸರಲ್ಲಿ- ಆತ ಒಬ್ಬ ಅನಾಹುತಕಾರಿ ಕ್ರಿಮಿನಲ್ ಆಗಿದ್ದರೂ- ತಮಗಿಷ್ಟ ಬಂದಂತೆ ಕೊಲ್ಲುವುದು ಸಲೀಸಾಗುತ್ತಿರುವುದಂತೂ ಸತ್ಯ. ಸುಖಾನಂದ ಶೆಟ್ಟಿ ಹತ್ಯೆಯಲ್ಲಿ ಮೂಲ್ಕಿ ರಫೀಕನ ಹೆಸರು ಕೇಳಿಬರುತ್ತಲೇ ಆತನ ಎನ್‌ಕೌಂಟರ್ ಕೂಡಾ ತೀರ್ಮಾನವಾಗಿತ್ತು. ಅಂದರೆ ಇಂತವನು ಇಂತಹುದೇ ದಿನ ಎನ್‌ಕೌಂಟರ್‌ಗೆ ಬಲಿಯಾಗುತ್ತಾನೆ ಅನ್ನುವಷ್ಟು ಅದು ಸಹಜವಾಗುತ್ತಿದೆ!

ಇವತ್ತು ದಕ್ಷಿಣ ಕನ್ನಡ ಪ್ರದೇಶದಲ್ಲಿ ಎರಡು ರೀತಿಯ 'ಎನ್‌ಕೌಂಟರ್' ಗಳಾಗುತ್ತಿವೆ. ಮೊದಲನೆಯದ್ದು ನಕ್ಸಲರ 'ಎನ್‌ಕೌಂಟರ್' ಹತ್ಯೆಗಳು. ದಕ್ಷಿಣ ಕನ್ನಡ ಜಿಲ್ಲೆಗೆ ಈ ಎನ್‌ಕೌಂಟರ್‌ನ ಪರಿಚಯವಾದದ್ದೇ 2003ನೇ ಇಸವಿ ನವೆಂಬರ್ 17ನೇ ತಾರೀಖು ಈದುವಿನಲ್ಲಿ ಪಾರ್ವತಿ ಹಾಜಿಮಾ ಎಂಬ ನಕ್ಸಲೈಟರು ಪೊಲೀಸರ ಗುಂಡಿಗೆ ಬಲಿಯಾಗುವುದರ ಮೂಲಕ. ಆನಂತರ ಒಂದು ವರ್ಷದ ಅವಧಿಯಲ್ಲಿ ಮೆಣಸಿನ ಹಾಡ್ಯದಲ್ಲಿ ಸಾಕೇತ್ ರಾಜನ್ ಮತ್ತು ಶಿವಲಿಂಗುನನ್ನು, ಕುಂದಾಪುರ ಬಳಿಯ ದೇವರ ಬಾಳುವಿನಲ್ಲಿ ಅಜಿತ್ ಕುಸುಬ ಮತ್ತು ಉಮೇಶ ಬನಕಲ್‌ನನ್ನು ನಕ್ಸಲರೆಂಬ ಕಾರಣಕ್ಕೆ ಪೊಲೀಸರು ಕೊಂದರು. ಆನಂತರ ಮೊನ್ನೆ ಮೊನ್ನೆ 2006ನೇ ಡಿಸೆಂಬರ್ 26 ರಂದು ಕೇಸು ಮುಡಿಯಲ್ಲಿ ನಡೆದದ್ದು ದಿನಕರನ ಎನ್‌ಕೌಂಟರ್. ಅಲ್ಲಿಗೆ 2003ರ ಆರಂಭದಿಂದ 2006ರ ಅಂತ್ಯದೊಳಗೆ ಪಶ್ಚಿಮ ಘಟ್ಟದ ಸೆರಗಿನಲ್ಲಿ ಎನ್‌ಕೌಂಟರ್ ಹೆಸರಲ್ಲಿ ಆರು ಮಂದಿ ನಕ್ಸಲರ ರಕ್ತಪಸರಣವಾಯಿತು.

ಇತ್ತ ಅದೇ ಹೊತ್ತಿಗೆ ಕಳೆದ ಒಂದು ವರ್ಷದ ಅವಧಿಯಲ್ಲಿ ಎನ್‌ಕೌಂಟರ್ ಹೆಸರಲ್ಲಿ ಸತ್ತ ರೌಡಿಗಳ ಸಂಖ್ಯೆ 3. ದುಬೈನಲ್ಲಿರುವ ರೌಡಿ ಬನ್ನಂಜೆ ರಾಜಾನ ಸಹಚರ, ಮಂಗಳೂರಿನ ಉದ್ಯಮಿಗಳಿಗೆ ದುಃಸ್ವಪ್ನವಾಗಿದ್ದ ಸುಪಾರಿ ಕಿಲ್ಲರ್ ಕಾಸರಗೋಡು ಮೂಲದ ಫಾಜಿಯನ್ನು ಒಂದು ವರ್ಷದ ಹಿಂದೆ ಮಂಗಳೂರಿನ ಹೊರವಲಯದ ನಿರ್ಜನ ರಸ್ತೆಯಲ್ಲಿ ನಡುರಾತ್ರಿ ಪೊಲೀಸರು ಎನ್‌ಕೌಂಟರ್ ಮಾಡಿ ಪರಂಧಾಮಕ್ಕಟ್ಟಿದರು. ಆನಂತರದ್ದೇ ಸುಖಾನಂದ ಶೆಟ್ಟಿಯ ಹಂತಕ, ಮೂಲ್ಕಿ ರಫೀಕ್‌ಯ ಸಹಚರ ಬುಲೆಟ್ ಸುಧೀರನ ಎನ್‌ಕೌಂಟರ್. ಪೊಲೀಸರಿಗೆ ಸಿಕ್ಕ ಖಚಿತ ಮಾಹಿತಿಯಂತೆ ಶಿವಮೊಗ್ಗದ ಜೋಗ್ ಫಾಲ್ಸ್‌ನಲ್ಲಿ ಸೆರೆಸಿಕ್ಕ ಸುಧೀರ್ ಮರುದಿನ ಬೆಳಕು ಹರಿಯುವ ಹೊತ್ತಿಗೆ ಮಂಗಳೂರು ತಲುಪುವ ಬದಲು, ಬೈಂದೂರಿನ ಹತ್ತಿರ ಹೆಣವಾಗಿ ಬಿದ್ದಿದ್ದ.

ಈ ನಡುವೆ ಮೂಲ್ಕಿ ರಫೀಕನಿಗಾಗಿ ಪೊಲೀಸರ ಬೇಟೆ ನಡೆಯುತ್ತಿತ್ತು. ಸುಧೀರ್‌ನಿಂದಾಗಿ ಪೊಲೀಸರಿಗೆ ರಫೀಕನ ಜಾಡು ಹಿಡಿಯುವುದು ಸುಲಭವಾಗಿತ್ತು. ಸೆಲ್‌ಫೋನ್ ಟ್ಯಾಪ್ ಮಾಡುವ ಮೂಲಕ ರಫೀಕ್ ತಮಿಳುನಾಡಿನ ತಿರುತ್ತಣಿಯಲ್ಲಿ ಅಡಗಿರುವುದನ್ನು ಪತ್ತೆಹಚ್ಚಿದ ಪೊಲೀಸರು ಅಲ್ಲಿಯ ಪೊಲೀಸರ ಸಹಕಾರದಿಂದ ಪತ್ನಿ ಸಮೇತ ಬಂಧಿಸಿದ್ದರು. ಒಂದು ವರ್ಷದ ಹಿಂದೆ ಪೊಳಲಿ ಅಂನತುವನ್ನು ಕೊಲೆ ಮಾಡಿ ತಲೆ ಮರೆಸಿಕೊಂಡಿದ್ದ ರಫೀಕ್, ವಾಟೆಂಡ್ ಆಗಿದ್ದು ಕೊಂಡೇ ಸುಪಾರಿ ಪಡೆದು ಸುಖಾನಂದ ಶೆಟ್ಟಿಯ ಕೊಲೆ ಮಾಡಿದ್ದ. ಶೆಟ್ಟಿಯ ಹತ್ಯೆಯ ನಂತರವಂತೂ ರಫೀಕ್‌ನನ್ನು ಜೀವಂತವಾಗಿಟ್ಟು ಆತನ ಬಾಯಿ ಬಡಿಸುವ ಜರೂರತ್ತು ಪೊಲೀಸರಿಗಿತ್ತು. ಇದೀಗ ಬಾಯಿ ಬಡಿಸಿದ್ದೂ ಆಗಿದೆ. ಆತನ ಅಂತ್ಯವೂ ಆಗಿದೆ.

ಈ ನಡುವೆ ಸುಖಾನಂದ ಶೆಟ್ಟಿಯ ಶವದ ಮೆರವಣಿಗೆಯಲ್ಲಿ ಸಂಭವಿಸಿದ ಗೋಲಿಬಾರ್‌ನಲ್ಲಿ ಪ್ರೇಮ್ ಮತ್ತು ದಿನೇಶ್ ಎಂಬಿಬ್ಬರು ಬಲಿಯಾ[...] ಬೇಕಾಯಿತು. ಆದರೆ ಅಲ್ಲಿ ನಡೆದ ವಿಷಯವ[...] ಬೇರೆಯೇ ಆಗಿತ್ತು. ಶೆಟ್ಟಿಯ ಹತ್ಯೆಯಾದದ್ದು ಕುಳ್ಳಾನ[...] ಆದರೆ ಮರಣೋತ್ತರ ಪರೀಕ್ಷೆಗೆ ಶೆಟ್ಟಿಯ ದೇಹವ[...] ಮೂಲ್ಕಿಗೆ ಕೊಂಡೊಯ್ಯುವ ಬದಲು ಮಂಗಳೂರಿ[...] ಎ.ಜೆ. ಹಾಸ್ಪಿಟಲ್‌ಗೆ ತಂದಿದ್ದರಿಂದ ಸುಖಾನಂ[...] ಶೆಟ್ಟಿಯ ತೀರಾ ಹತ್ತಿರದ ಸ್ನೇಹಿತರಾದ ಪ್ರೇ[...] ಮತ್ತು ದಿನೇಶ್ ಪೊಲೀಸರನ್ನು ಎ.ಜೆ. ಆಸ್ಪತ್ರೆಯ[...] ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದರು. ಅವ[...] ಎಸ್ಪಿ ದಯಾನಂದರ ಮೇಲೆಯೇ ಏರಿ ಹೋ[...] ಕೆಂಗಣ್ಣಿಗೆ ಈಡಾಗಿದ್ದರು. ಆನಂತರ ಮೂಲ್ಕಿಯ[...] ಬಲವಂತದಿಂದ ಜರುಗಿದ ಶವದ ಮೆರವಣಿಗೆ[...] ಸಂದರ್ಭದಲ್ಲಿ ದಾಂಧಲೆಗಳು ಶುರುವಾಗಿ ಪೊಲೀ[...] ಗನ್ನುಗಳು ಇವರಿಬ್ಬರನ್ನು ಗುರಿಯಾಗಿಸಿ [...] ತೆಗೆದುಕೊಂಡವು. ಅಲ್ಲಿಗೆ ಸುಖಾನಂದ ಶೆಟ್ಟಿ[...] ಹತ್ಯೆಗೆ ಪ್ರತಿಯಾಗಿ ಎರಡು ಎನ್‌ಕೌಂಟರ್, ಎರ[...] ಗೋಲಿಬಾರು ಒಟ್ಟು ನಾಲ್ಕು ಮಂದಿಯ [...] ತೆಗೆದುಕೊಂಡಂತಾಗಿದೆ. ಪೊಲೀಸರ ಈ ಅಟ್ಟಹಾ[...] ಕೊನೆ ಎಂದು?

ಬಿಜೆಪಿ ಪಾಲಿಗೆ 'ಮೋಹಿನಿ' ಶೋಭಾ ಯಡ್ಡಿಯೇ ಭಸ್ಮಾಸುರ

ಬಿಜೆಪಿ ಎಂಬ ರಕ್ಕಸ ಸಂತಾನವನ್ನು ನಾಶಮಾಡಲೆಂದೇ ಮೋಹಿನಿಯೊಬ್ಬಳು ...ರಿಸಿದ್ದಾಳೆ...

...ವರು ಶೋಭಾ ಕರಂದ್ಲಾಜೆ.

...ಈ ಮೋಹಿನಿಯ ದೆಸೆಯಿಂದ ನಮ್ಮ ಪಕ್ಷ ನಿರ್ನಾಮವಾಗುವುದು ಗ್ಯಾರಂಟಿ ...ು ಎಲ್ಲರೂ ಬೊಂಬಡ ಹಾಕುತ್ತಿದ್ದರೂ ಅದಕ್ಕೀಗ ಬೆಲೆ ಸಿಗುತ್ತಿಲ್ಲ. ಅಷ್ಟೇ ... ಈ ಮೋಹಿನಿಯ ಆರಾಧಕ ಉಪಮುಖ್ಯಮಂತ್ರಿ ಯಡಿಯೂರಪ್ಪನವರಂತೂ ...ತವೇ ಬೀಳಲಿ ಮೇಲೆ ನಾ ನಿನ್ನ ಕೈ ಬಿಡೆನು' ಎಂದು ಪಣತೊಟ್ಟು ...ಭಾರನ್ನು ಮಂತ್ರಿ ಮಾಡಲು ನಿಂತುಬಿಟ್ಟಿದ್ದಾರೆ. ಆದರೆ ಪಾರ್ಟಿ ಹೈಕಮಾಂಡ್ ...ತ್ರ 'ಥೂ ಇದೇನಿದು, ನಮ್ಮ ಪಾರ್ಟಿ ಮರ್ಯಾದೆ ಏನಾಗುತ್ತೆ?' ಎಂದು ... ನಿಂತಿದ್ದಾರೆ.

...ಈಗಿನ ಕೋ-ಜಾ ಸರ್ಕಾರದಲ್ಲಿ ಎಂಎಲ್‌ಸಿ ಶೋಭಾ ಮಂತ್ರಿಯಾಗುವ ...ಂಥದಲ್ಲಿ ಬಿಜೆಪಿ ...ಯದೊಳಗೀಗ ಆಂತರಿಕ ...ಟ ನಡೆದಿದೆ. ಎಲ್ಲಿಗೆ ...ು ನೋಡಿ ಈ ಹಿಂದೂ ...ರ ದುರ್ಗತಿ. ಒಂದು ...ದಲ್ಲಿ ಭಾರತಾಂಬೆಯನ್ನು ...ವ ಕಾಂಟ್ರ್ಯಾಕ್ಟ್ ...ದುಕೊಂಡಂತೆ ...ತ್ತಿದ್ದವರು, ಜೊತೆಗೆ ...ನೂ ಧರ್ಮ ಹಿಂದೂ ...ತಿಗಳ ನಿತ್ಯಭಜನೆ ಬೇರೆ. ...ರೆ ಒಬ್ಬ ಶೋಭಾ ...ದ್ಲಾಜೆ ಸುಂದರ ಮುಖ ...ವಾಗ ಕರ್ನಾಟಕದ ...ಕೀಯ ರಂಗದಲ್ಲಿ ...ಸಿತೋ ಅವತ್ತೆ ಬಿಜೆಪಿಯೊಳಗೆ ಅಲ್ಲೋಲಕಲ್ಲೋಲ ಶುರುವಾಗಿತ್ತು. ಅದೀಗ ...ದು ಬೆಳೆದೂ ಇಡೀ ಬಿಜೆಪಿ ಪಾರ್ಟಿಯೇ ಒಳಗಿಂದೊಳಗೆ ಇಬ್ಭಾಗವಾಗಿ ...ೀಗಿದೆ. ಆದರೇನು ಯಡ್ಡಿಯದು ಮಾತ್ರ 'ಭೂಮಿಯೇ ಬಾಯ್ಬಿಡಲಿ ಇಲ್ಲೇ ... ನಿನ್ನ ಕೈಬಿಡೆನೆಂಬ' ಅದೇ ರಾಗ ಅದೇ ಹಾಡು.





...ಇಷ್ಟಕ್ಕೂ ಶಾಸಕಿ ಶೋಭಾ ಕರಂದ್ಲಾಜೆ ಬಿಜೆಪಿ ಕೋಟಾದಡಿ ಮಂತ್ರಿ ...ಗಬಾರದೆಂಬ ನಿಯಮವೇನೂ ಇಲ್ಲ. ಆದರೆ ಬೇರೆ ಮಂತ್ರಿಗಿರಿ ಆಕಾಂಕ್ಷಿ ...ಂದಿಗೆ ವ್ಯವಹರಿಸುವಾಗ ಇದೇ ಬಿಜೆಪಿ ನಾಯಕರು, "ಎಷ್ಟು ಸಾರಿ ...ದ್ದೀರಿ, ಜಾತಿ, ಉಪಜಾತಿ, ಪ್ರಾಂತ್ಯ ಜಿಲ್ಲೆ ಎಲ್ಲಾ ಮಾನದಂಡಗಳಿಂದಲೂ ...ಶೀಲಿಸಿಯೇ ತಾನೆ ಮಿನಿಸ್ಟರ್ ಮಾಡುತ್ತಿದ್ದದ್ದು" ಈಗ ಶೋಭಾಗೂ ...ೇ ಮಾನದಂಡವಿಟ್ಟು ನೋಡಿದರೆ ಆಕೆ ಇಷ್ಟು ಬೇಗ ಮಂತ್ರಿಯಾಗಲು ...ಕಾಶಗಳಿಲ್ಲ. ಇನ್ನೂ ಮೇಲಾಗಿ ಮಹಿಳಾ ಕೋಟಾ ಎಂಬ ಮಾತು ಬಂದರೂ ...ೋಭಾಗಿಂತಾ ಹಿರಿಯ ಪಾರ್ಟಿ ನಾಯಕಿ ಶಾಸಕಿ ಶಕುಂತಲಾ ಶೆಟ್ಟಿ ಇದ್ದಾರೆ. ...ಲಾಗಿ ಶಕುಂತಲಾ ಶೋಭಾ ರೀತಿ ಹಿಂಬಾಗಿಲಿನಿಂದ ಶಾಸಕಿಯಾದವರಲ್ಲ. ... ಚುನಾವಣೆ ಎದುರಿಸಿ ಗೆದ್ದು ಬಂದಿರುವವರು. ಹಾಗಾಗಿ ಮಹಿಳಾ ...ಟಾದಡಿ ಒಂದು ವೇಳೆ ಯಾರಿಗಾದರೂ ಮಂತ್ರಿಗಿರಿ ಸಿಕ್ಕಿದರೆ ಅದು ಶಕುಂತಲಾ ಶೆಟ್ಟಿಗೆ ಸಿಗಬೇಕೆ ವಿನಃ ಶೋಭಾ ಕರಂದ್ಲಾಜೆಗಲ್ಲ...

ಈ ಎಲ್ಲಾ ತರ್ಕಗಳನ್ನು ಈಗ ಮಂಡಿಸುತ್ತಿರುವವರು ಬೇರ್‍ಯಾರೂ ಅಲ್ಲ, ಸ್ವತಃ ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರು ಹಾಗೂ ನಾಯಕರುಗಳು.

ಆದರೂ ಶೋಭಾ ಮಂತ್ರಿಯಾಗಲೇಬೇಕೆಂಬ ಹಠ ಯಡಿಯೂರಪ್ಪನವರದು. ಇದಕ್ಕೆ ರಾಜಕೀಯ ಕಾರಣಗಳಿಗಿಂತಾ ಯಡ್ಡಿಯ ವೈಯಕ್ತಿಕ ಒಲವು ನಿಲುವುಗಳೇ ಕಾರಣ ಎಂಬುದಂತೂ ಈಗ ಜಗಜ್ಜಾಹೀರಾಗಿರುವ ವಿಚಾರ. ಅಸಲಿಗೆ ರಾಜ್ಯ ಬಿಜೆಪಿ ಪಾಲಿಗೆ ಇದೇ ಗ್ರಹಚಾರ.

ಮುಖಭಂಗ ಯಾರಿಗೆ

ಇದೇ ಜನವರಿ 25 ರಂದು ನಡೆಯಲಿರುವ ಸಂಪುಟ ವಿಸ್ತರಣೆಯಲ್ಲಿ ಒಂದು ವೇಳೆ ಶೋಭಾಗೆ ಮಂತ್ರಿಗಿರಿ ಸಿಕ್ಕಿಬಿಟ್ಟರೆ ಅದು ಭಿನ್ನಮತೀಯ ನಾಯಕ ಅನಂತ್‌ಕುಮಾರ್, ಬಸನಗೌಡ ಪಾಟೀಲ್ ಯತ್ನಾಳ್, ಲಿಂಬಾವಳಿ, ಸಿ.ಟಿ. ರವಿ, ಸುನೀಲ್ ಕುಮಾರ್‌ಗಳಿಗೆ ಮುಖಭಂಗವಾದಂತೆಯೇ ಸರಿ.

ಈಗಾಗಲೇ ಇಡೀ ರಾಜ್ಯ ಬಿಜೆಪಿಯನ್ನು ವಶೀಕರಣ ಮಾಡಿಕೊಂಡು ತನ್ನ ತಾಳಕ್ಕೆ ತಕ್ಕಂತೆ ಕುಣಿಸುವ ಕಲೆ ಶೋಭಾಗೆ ಸಿದ್ಧಿಸಿದೆ. ಪಾರ್ಟಿ ಅಧ್ಯಕ್ಷ ಸಂಸದ ಸದಾನಂದ ಗೌಡರಂತೂ ಶೋಭಾ ಕಾಲಲ್ಲಿ ತೋರಿಸಿದ್ದನ್ನು ತಲೆ ಮೇಲೆ ಹೊತ್ತುಕೊಂಡು ಮಾಡಿ ಮುಗಿಸುವಂತೆ ಶರಣಾಗತರಾಗಿಬಿಟ್ಟಿದ್ದಾರೆ. ಹಾಗಿಲ್ಲದಿದ್ದರೆ ಬಿಜೆಪಿ ಪಾರ್ಟಿ ಆಫೀಸ್ ಇದ್ದ ಜಾಗವನ್ನೇ ಶೋಭಾ ಇಚ್ಛೆಯಂತೆ ಆಕೆಯ ನೆಂಟರ ಮನೆಗೆ ವರ್ಗಾಯಿಸುತ್ತಿದ್ದರೆ ಗೌಡರು?


ಹಾಗೆ ನೋಡಿದರೆ ಯಡ್ಡಿ ಹಾಗೂ ಅನಂತ್ ನಡುವಿನ ಕಳೆದೊಂದು ದಶಕದ ಜಗಳಕ್ಕೆ ಇನ್ನಷ್ಟು ಖದರ್ ಬಂದಿರುವುದೇ ಶೋಭಾ ಪ್ರವೇಶದಿಂದ. ಕೋ-ಜಾ ಸರ್ಕಾರ ರಚನೆಯಾದ ನಂತರ ಇತ್ತೀಚೆಗೆ ನಡೆದ ಪಾರ್ಟಿ ಜಿಲ್ಲಾ ಅಧ್ಯಕ್ಷರುಗಳ ಆಯ್ಕೆಯಲ್ಲೂ ಅನಂತ್ ಹಿಂಬಾಲಕರನ್ನು ತುಳಿದು ಮೂಲೆಗೆಸೆದ ಶೋಭಾ ಯಡ್ಡಿ ನಿಷ್ಠರಷ್ಟೇ ಅವಕಾಶ ಪಡೆಯುವಂತೆ ನೋಡಿಕೊಂಡಿದ್ದಾರೆ.

ಈ ಆಂತರಿಕ ಬಲಾಬಲ ಪರೀಕ್ಷೆಗಳಲ್ಲೆಲ್ಲಾ ಯಡ್ಡಿಯ ಸೇನಾಪತಿಯಂತೆ ವರ್ತಿಸಿದ್ದ ಶೋಭಾ ಈಗ ಮಂತ್ರಿಯಾಗಲು ಬಯಸಿದ್ದಾರೆ. ಯಡ್ಡಿ ಆ ಬಯಕೆಯನ್ನು ಈಡೇರಿಸಲು ಹೊರಟಿದ್ದಾರೆ. ಪಾಪ, ರಾಜ್ಯ ಬಿಜೆಪಿಯ ಅಗ್ರಗಣ್ಯ ನಾಯಕರಾದ ಯಡಿಯೂರಪ್ಪನವರಿಗೀಗ ತಮ್ಮ ಪರಮಾಪ್ತೆ ಶೋಭಾ ಕರಂದ್ಲಾಜೆ ಮಂತ್ರಿಯಾಗಿ ತಮ್ಮ ಜೊತೆ ಜೊತೆಯಲ್ಲಿ ಸಂಪುಟದಲ್ಲಿರಬೇಕೆಂಬ ಒಂದೇ ಒಂದು ಆಸೆ ಬಿಟ್ಟರೆ ಬೇರೇನೂ ಗುರಿ ಇದ್ದಂತಿಲ್ಲ. ಪಾರ್ಟಿ ಶಾಸಕರು, ಕಾರ್ಯಕರ್ತರು ಕೊನೆಗೆ ಜನ ಏನೆಂದುಕೊಳ್ಳುತ್ತಾರೆಂಬ ನೆದರೆ ಯಡ್ಡಿಗಿಲ್ಲವೆಂದರೆ ಯಾರೇನು ಮಾಡಲು ಸಾಧ್ಯ ಬಿಡಿ.

-ವರದಿಗಾರ

ಸೊಗಡು ಶಿವಣ್ಣ, ರಾಜೇಂದ್ರ ವರ್ಮಗೆ ಛಾನ್ಸ್

ಬಿಜೆಪಿಗಳ ಪಾಲಿನ 'ಮೋಹಿನಿ' ಶೋಭಾ ಹಾಗೂ ಭಸ್ಮಾಸುರ ಯಡ್ಡಿಯೂರಪ್ಪನವರಿಂದ ಪಾರ್ಟಿಯನ್ನು ಉಳಿಸಲೇ ಬೇಕೆಂದು ಹಠ ತೊಟ್ಟಿರುವ ಅನಂತ್ ನಾಯಕತ್ವದ ಭಿನ್ನಮತೀಯರು ಸಂಪುಟ ವಿಸ್ತರಣೆಗೆ ಈಗ ತಮ್ಮದೊಂದು ಪ್ರಪೋಸಲ್ ಮುಂದಿಟ್ಟಿದ್ದಾರೆ. ಬಿಜೆಪಿಯೊಳಗಿನ ಖಚಿತ ಮೂಲಗಳ ಪ್ರಕಾರ ತುಮಕೂರಿನ ಲಿಂಗಾಯತ ಶಾಸಕ ಸೊಗಡು ಶಿವಣ್ಣ ಹಾಗೂ ಬೀದರ್ ಮೀಸಲು ಕ್ಷೇತ್ರದ ರಾಜೇಂದ್ರ ವರ್ಮ ಈ ಬಾರಿಯ ಸಂಪುಟ ವಿಸ್ತರಣೆಯಲ್ಲಿ ಅವಕಾಶ ಪಡೆಯಲಿದ್ದಾರೆ.



ಸೊಗಡು ಶಿವಣ್ಣ

ಇವರಿಬ್ಬರೂ ಬಿಜೆಪಿಯ ಸೀನಿಯರ್ ಶಾಸಕರುಗಳಾಗಿದ್ದು ಸರ್ಕಾರ ರಚನೆಯಾದಾಗಲೇ ಸಚಿವರಾಗಲು ಯತ್ನಿಸಿ ವಿಫಲರಾಗಿದ್ದವರು. ದಲಿತ ಕೋಟಾದಲ್ಲಿ ಆನೇಕಲ್ ನಾರಾಯಣಸ್ವಾಮಿ ಹಾಗೂ ಮೂಡಿಗೆರೆಯ ಕುಮಾರಸ್ವಾಮಿ ಆಕಾಂಕ್ಷಿಗಳಾಗಿದ್ದರೂ ಸಹ ಇವರಿಬ್ಬರ ಬಗ್ಗೆ ಯಡ್ಡಿಗೆ ಸಮಾಧಾನವಿಲ್ಲ. ಯಾಕೆಂದರೆ ನಾರಾಯಣಸ್ವಾಮಿ ಅನಂತ್ ಬೆಂಬಲಿಗರು ಹಾಗೂ ಕುಮಾರಸ್ವಾಮಿ ಪೂರ್ತಿ ಚೆಡ್ಡಿಯಲ್ಲ ಎಂಬ ಅಪನಂಬಿಕೆಯ ಕಾರಣಕ್ಕೆ.

ಯಡ್ಡಿ-ಶೋಭಾ ಜೋಡಿಯು ಪಾರ್ಟಿಯನ್ನೇ ಹೈಜಾಕ್ ಮಾಡಲು ಬಿಡಕೂಡದೆಂದೂ ಬಿಜೆಪಿ ಹೈಕಮಾಂಡ್ ಕೂಡ ಕಠಿಣ ನಿಲುವನ್ನು ತಳೆಯುವ ಸಾಧ್ಯತೆ ಇರುವುದರಿಂದ ಅನಂತ್ ಬಣ ಸೂಚಿಸಿರುವಂತೆ ಅಂತಿಮವಾಗಿ ಶಿವಣ್ಣ ಹಾಗೂ ವರ್ಮಾ ಸಚಿವರಾಗಬಹುದು. ಇದು ಯಡ್ಡಿಗೂ ಗೊತ್ತಾಗಿ ಅವರೀಗ ಹೊಸ ವರತ್ತೊಂದನ್ನು ಹಾಕಿದ್ದಾರಂತೆ. ಇನ್ನೊಂಭತ್ತು ತಿಂಗಳ ನಂತರ ಯಡ್ಡಿ ಹೇಗೂ ಮುಖ್ಯಮಂತ್ರಿಯಾಗುತ್ತಾರಲ್ಲ, ಕನಿಷ್ಠ ಆಗಲಾದರೂ ಶೋಭಾರಿಗೆ ಸಚಿವ ಸ್ಥಾನ ನೀಡುವ ಒಪ್ಪಂದಕ್ಕೆ ಈಗ ಬರಲಾಗಿದೆ. ಆದರೆ ಅಲ್ಲಿಯವರೆಗೂ ಶೋಭಾ ಖಾಲಿ ಕೈಲಿ ಕುಳಿತು ಕಾಯಬೇಕಿಲ್ಲ. ಈಗ ಸಚಿವ ಸ್ಥಾನ ಸಿಗದಿದ್ದರೂ ಕನಿಷ್ಠ ಯಾವುದಾದರೂ ಪೊಗದಸ್ತಾದ ನಿಗಮ-ಮಂಡಳಿಗಾದರೂ ಶೋಭಾರನ್ನು ಅಧ್ಯಕ್ಷೆಯನ್ನಾಗಿ ಮಾಡಲೇಬೇಕೆಂದು ಯಡ್ಡಿ ಹಠ ಹಿಡಿದಿದ್ದಾರೆ.

ತನ್ನನ್ನು ನಂಬಿ ಬಂದವರ ಕೈಬಿಡದೆ ಒಳ್ಳೇ ಸ್ಥಾನ ಮಾನ ಕೊಡಿಸಬೇಕೆಂಬ ಯಡಿಯೂರಪ್ಪನವರಂತಹ ರಾಜಕಾರಣಿಗಳು ನಿಜಕ್ಕೂ ಅಪರೂಪ ಅಲ್ಲವಾ?

...ಹಾಕಿದ್ದಾರೆ. ಅನಂತು ಕೇಸಿನಲ್ಲಿ ಪೊಲೀಸ್‌ರು ...ಲೇ ಚಾರ್ಜ್‌ಶೀಟ್ ಹಾಕಿದ್ದಾರಲ್ಲದೆ, ಆರೋಪಿ ...ಾದ ಅಮಾಯಕರು ಜೈಲಲ್ಲಿ ಕೊಳೆಯುತ್ತಿದ್ದಾರೆ. ...ಾ ತಮ್ಮ ತನಿಖೆಗೆ ರಫೀಕ್ ಬೇಕೆಂದು ಹೇಳಿದ್ದಾರೆ. ...ನವರಿ 15ರ ತನಕ ಪೊಲೀಸ್ ಕಸ್ಟಡಿಗೆ ...ನನ್ನು ಒಪ್ಪಿಸಲಾಗಿತ್ತು, ಅದಕ್ಕೆ ಎರಡು ದಿನಕ್ಕೆ ...ಚಿತವಾಗಿಯೇ ತಮ್ಮ ತನಿಖೆಯನ್ನು ತುಂಬಾ ...'ಯಿಂದ ಮುಗಿಸಿದ ಪೊಲೀಸರು ಪೊಳಲಿ ...ು ಕೊಲೆಯಾದ ಒಂದು ವರ್ಷದ ಬಳಿಕ ...ು ಹತ್ಯೆಗೆ ಬಳಸಿದ್ದ ತಲವಾರನ್ನು ಪೊದೆಯೊಂದ ...ವಶಪಡಿಸಿಕೊಂಡಿದ್ದಾರೆ. ಆಮೇಲೆಯೇ ಪೊಲೀ... ರಫೀಕ್‌ನನ್ನು ನ್ಯಾಯಾಲಯಕ್ಕೆ ಮತ್ತೆ ಒಪ್ಪಿಸಿದ್ದಾರೆ. ... ದೃಷ್ಟಿಯಿಂದ ನ್ಯಾಯಾಲಯ ರಫೀಕ್‌ನನ್ನು ...ದು ಜೈಲಿಗೆ ತಳ್ಳುವಂತೆ ಆದೇಶಿಸಿದೆ.

'ಎಸ್ಕೇಪ್' ಆದ ರಫೀಕ್!

...ಳೆದ ಶುಕ್ರವಾರ ಹದಿಮೂರನೆ ತಾರೀಖಿನಂದು ...ಾಣೆಯ ಪೊಲೀಸ್ ಜೀಪಿನಲ್ಲಿ, ಎದುರುಗಡೆ ... ಸುಧಾಕರ ಮತ್ತು ಹಿಂದುಗಡೆ ಮೂವರು ... ಕೂತುಗೊಂಡು, ರಫೀಕನ ಕೈಗೆ ಕೋಳ ... ಲೀಡಿಂಗ್ ಚೈನು ತೊಡಿಸಿ ಮೈಸೂರಿಗೆ ... ಬೆಳಸಿದ್ದಾರೆ. ರಾತ್ರಿ 10.35ರ ಹೊತ್ತಿಗೆ ...ಿಂದ 18 ಕಿ.ಮೀ. ದೂರದ ಕಾಡು ಪ್ರದೇಶದಲ್ಲಿ ... ಎದುರುಗೊಂಡಿದ್ದು, ಆಗ ಜೀಪು ... ಡ್ರೈವರ್ ವಾಹನವನ್ನು ನಿಧಾನಿಸಿದ್ದು, ಅದೇ ... ಕೋವಿ ರಫೀಕ್ ತನ್ನ ಪಕ್ಕದಲ್ಲಿದ್ದ ಪಿ.ಸಿ. ...ರಿಗೆ ಗುದ್ದಿದ್ದು, ಆಮೇಲೆ ಜೀಪಿನಿಂದ ... ಕಾಡಿನಲ್ಲಿ ಪರಾರಿಯಾದದ್ದು, ಪೊಲೀಸರು ಹೇಳಿತ್ತಿರುವ 'ವಿವರಗಳು'.

ಇದು ಇಲ್ಲಿಗೇ ಮುಗಿಯುವುದಿಲ್ಲ, ಕತೆ ಮುಂದುವರೆದು, ಅದೇ ಹೊತ್ತಿಗೆ ಮಡಿಕೇರಿಯ ಪೊಲೀಸರು ಜೀಪಲ್ಲಿ ಪ್ರತ್ಯಕ್ಷವಾದದ್ದು, ಎಲ್ಲರೂ ಸೇರಿ ಬೆನ್ನಟ್ಟಿದರೂ ರಫೀಕ್ ತಪ್ಪಿಸಿಕೊಂಡಿದ್ದು, ಈ 'ಪರಾರಿ' ವಿಷಯ ಹಿರಿಯ ಅಧಿಕಾರಿಗಳಿಗೂ ತಕ್ಷಣವೇ ಗೊತ್ತಾಗಿ ಮಂಗಳೂರು ಮತ್ತು ಮಡಿಕೇರಿಯ ಪೊಲೀಸ್ ಅಧಿಕಾರಿಗಳೆಲ್ಲಾ ಜಮೆಯಾದದ್ದು, ಮುನ್ನೂರರಷ್ಟು ಪೊಲೀಸರು ಕಾಡಲ್ಲಿ ಸುತ್ತುವರಿದು ಶೂಟಿಂಗ್ ಮಾಡಿದ್ದು, ಎಲ್ಲಾ ಕಡೆ ನಾಕಾಬಂದಿ ಹಾಕಿದ್ದರೂ ರಫೀಕ್ 'ಮಂಗಮಾಯ' ಆದದ್ದು..... ಇದು ಪೊಲೀಸರು ಹೆಣೆದಿರುವ ಕತೆ..... ಅಲ್ಲಲ್ಲ, ಕಾದಂಬರಿ!

ಎನ್‌ಕೌಂಟರ್ ಹಿಂದೆ ಚಂದಮಾಮ ಕತೆ!

ಎಲ್ಲಾ ತನಿಖೆ ಮುಗಿದು ಜೈಲು ಸೇರುವ ಹೊತ್ತಲ್ಲಿ ರಫೀಕ್ ಪರಾರಿಯಾಗಲು ಯತ್ನಿಸಿ ತನ್ನ ಸಾವನ್ನು ತಾನೇ ಆಹ್ವಾನಿಸಿಕೊಂಡದ್ದು ಹೌದೇ ಆದಲ್ಲಿ ಅದನ್ನು 'ವಿನಾಶ ಕಾಲೇ ವಿಪರೀತ ಬುದ್ಧಿ' ಎನ್ನದೇ ವಿಧಿಯಿಲ್ಲ! ಅದಿರಲಿ, ರಫೀಕ್ ಓಡಿ ತಪ್ಪಿಸಿಕೊಳ್ಳುವ ಸ್ಥಿತಿಯಲ್ಲಿದ್ದನೇ? ರಫೀಕ್‌ನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಾಗ ಪೊಲೀಸರು ಆತನನ್ನು ಹಿಡಿದುಕೊಂಡೇ ಬರುತ್ತಿದ್ದದ್ದು, ಆತ ನಡೆಯಲೂ ಅಶಕ್ತನಾದದ್ದನ್ನು ಕಂಡವರಿದ್ದಾರೆ. ಇಲ್ಲಿ ಇನ್ನೊಂದು ವಿಚಾರ: ಪೊಲೀಸರು ರಫೀಕ್‌ನಂತಹ ಎಲಿಮೆಂಟ್‌ಗಳನ್ನು ಒಂದೂರಿನಿಂದ ಇನ್ನೊಂದು ಊರಿಗೆ ಸಾಗಿಸುವಾಗ ಆತನ ಕೈಕೋಳವನ್ನು ವಾಹನಕ್ಕೆ ಬಂಧಿಸಿರುತ್ತಾರೆ. ಹಾಗಿದ್ದಾಗ, ಆತ ವಾಹನದಿಂದ ಎಸ್ಕೇಪ್ ಆಗಿದ್ದು ಹೇಗೆ?

ಒಂದು ವೇಳೆ ಆತ ತಪ್ಪಿಸಿಕೊಂಡು ಓಡಿದ್ದೇಯಾದರೆ



ರಫೀಕ್ ಎನ್‌ಕೌಂಟರ್ ಆಗುವ ಮುನ್ನ ಬಳಸಿದ ಬೈಕ್

ಆತನ ಕೈಕೋಳ, ಲೀಡಿಂಗ್ ಚೈನ್ ಸಮೇತ ಕಾಡಲ್ಲಿ ಮರೆಯಾಗಿದ್ದು ಹೇಗೆ? ಪೊಲೀಸರ ಶೂಟಿಂಗ್, ನಾಕಾಬಂದಿಯ ನಡುವೆ ತಲೆ ತಪ್ಪಿಸಿಕೊಂಡು ಉಡುಪಿ ತನಕ ಬಂದಿದ್ದು ಹೇಗೆ? ಈ ಪ್ರಶ್ನೆಗಳ ಮುಂದೆ ಪೊಲೀಸರದ್ದು ಒಂದು ಚಂದಮಾಮ ಕತೆ ಎಂಬುದು ಸ್ಪಷ್ಟವಾಗುತ್ತದೆ. ಇದೆಲ್ಲ ಆದನಂತರ, ರಫೀಕ್ ಮಡಿಕೇರಿ-ದೇವಕೊಲ್ಲಿಯ ಸುತ್ತಮುತ್ತ ಪ್ರತ್ಯಕ್ಷವಾಗಬಹುದು ಎಂದು ಮಾಧ್ಯಮದವರು ಊಹಿಸಿದ್ದರೆ, ಅವರೆಲ್ಲ ನಿರೀಕ್ಷೆ ಸುಳ್ಳಾಗಿ ಉಡುಪಿ ಹತ್ತಿರ ಪೊಲೀಸರಿಗೆ 'ಕಾಣಿಸಿಕೊಂಡ' ರಫೀಕ್ ಅಲ್ಲೇ ಎನ್‌ಕೌಂಟರ್ ಆಗಿ ಹೆಣವಾಗಿದ್ದಾನೆ!

"14.1.2007 ರಂದು ಬೆಳಿಗ್ಗೆ ಮುಂಬಯಿಗೆ ಪರಾರಿಯಾಗಲು ರಫೀಕ್ ಉಡುಪಿಯ ರೈಲ್ವೇ ಸ್ಟೇಷನ್‌ಗೆ ಬರುತ್ತಾನೆ ಎಂಬ ಖಚಿತ ವರ್ತಮಾನದ ಮೇರೆಗೆ ನಾವು ಹೊಂಚು ಹಾಕಿದ್ದೆವು. ಸುಮಾರು 5.40 ರ ಹೊತ್ತಿಗೆ ಯಮಹಾ ಬೈಕಿನ ಹಿಂಬದಿ ಸವಾರನಾಗಿ ಬಂದ ರಫೀಕ್ ಬೈಕ್ ಇಳಿದು ಗೋದಾಮು ರಸ್ತೆಯಲ್ಲಿ ಇಳಿಯುತ್ತಿದ್ದಂತೆಯೇ ಇಬ್ಬರು ಇನ್ಸ್‌ಪೆಕ್ಟರ್‌ಗಳು ಆತನನ್ನು ಹಿಡಿಯಲು ಯತ್ನಿಸಿದರು. ಪರಾರಿಯಾಗಲು ಯತ್ನಿಸಿದ ರಫೀಕ್ 70 ಮೀಟರ್ ದೂರ ಓಡಿ ತನ್ನ ನಾಡಪಿಸ್ತೂಲ್‌ನಿಂದ ಎರಡು ರೌಂಡ್ ಗುಂಡು ಹೊಡೆದ. ತಕ್ಷಣ ಎಚ್ಚೆತ್ತುಕೊಂಡ ಇನ್ಸ್‌ಪೆಕ್ಟರ್ ವೆಂಕಟೇಶ್ ಪ್ರಸನ್ನ ಮತ್ತು ಗಂಗೀರೆಡ್ಡಿ ಅವರು ತಲಾ ಐದು ರೌಂಡ್ ಗುಂಡು ಹಾರಿಸಿದರು. ರಫೀಕ್ ಸ್ಥಳದಲ್ಲೇ ಕುಸಿದುಬಿದ್ದು ಸತ್ತ; ಇದಕ್ಕೂ ಮೊದಲು ರಫೀಕ್ ಮಂಗಳೂರಿನ ಪೊಲೀಸ್ ಮಾಹಿತಿದಾರನೊಬ್ಬನಿಗೆ ಫೋನ್ ಮಾಡಿ ಬೆದರಿಕೆ ಹಾಕಿದ್ದ. ಆ ಮೊಬೈಲ್ ನಂಬರ್ ಅನ್ನು ಟ್ರೇಸ್ ಮಾಡಿ, ರಫೀಕ್ ಮಣಿಪಾಲ ಪರಿಸರದಲ್ಲಿರುವುದು ಪತ್ತೆಹಚ್ಚಲಾಯಿತು" ಎಂದೆಲ್ಲಾ ಇವತ್ತು ಪೊಲೀಸರು ರಸವತ್ತಾದ ಹೇಳಿಕೆ ನೀಡುತ್ತಿದ್ದಾರೆ.

ಆದರೆ ಇದೆಲ್ಲಾ ನಂಬುವವರಿಗೆ ಬಿಟ್ಟ ವಿಚಾರ

ಇಂತಹ ನಟೋರಿಯಸ್ ರೌಡಿಯ ಕಾಲಿಗೆ ಕೋಳ ತೊಡಿಸದೇ ತೆರೆದ ಜೀಪಲ್ಲಿ ಬೆರಳೆಣಿಕೆಯ ಪೊಲೀಸರ ಜತೆ ಕಳುಹಿಸಿದ್ದು ಒಂದು ಬೇಜವಾಬ್ದಾರಿಯಾದರೆ, ಹಾಗೆ ತಪ್ಪಿಸಿಕೊಂಡ ರಫೀಕ್ ಪೊಲೀಸರ ಸರ್ಪಗಾವಲನ್ನು ಬೇಧಿಸಿ, ಮೊಬೈಲ್ ಫೋನ್ ಹೊಂದಿ ಯಮಹಾ ಬೈಕ್‌ನಲ್ಲಿ ಉಡುಪಿಗೆ ಬರುತ್ತಾನೆಂದರೆ ಅದು ಆತನ ಚಮತ್ಕಾರವಾಗಿರಬೇಕು. ಇಲ್ಲ ಪೊಲೀಸರಿಗೆ ಕತೆಯನ್ನು ಹೇಗೆ ಬರೆಯಬೇಕು ಎಂಬುದರ [illegible] ಬಗ್ಗೆ ತರಬೇತಿ ನೀಡಬೇಕು!

ರಿವೇಂಜ್ ಕಿಲ್ಲಿಂಗ್ಸ್

ರಾ. ಸೋಮನಾಥ್

ಅರುಣನ ಶಿಕಾರಿ

ಯುದ್ಧೋನ್ಮಾದಕ್ಕೆ ಬಿದ್ದ ತಮ್ಮಯ್ಯನ ಗ್ಯಾಂಗ್ ಸೂರಿಯನ್ನೇ ಮುಗಿಸಿಬಿಡಲು ನಿರ್ಧರಿಸಿತು. ಹದಿನೈದಕ್ಕೂ ಹೆಚ್ಚು ಮಂದಿಯಿದ್ದ ಹಂತಕರ ತಂಡ ತನ್ನತ್ತ ನುಗ್ಗಿದ್ದೇ ತಡ ಸೂರಿ ಇನ್ನಾವುದೋ ಬಾಗಿಲು ಜಿಗಿದು ಪರಾರಿಯಾದ. ಜೊತೆಗಿದ್ದ ಅರುಣ ಓಡುತ್ತಾ ಇನ್ನಾವುದೋ ಸಂಧಿ ಹೊಕ್ಕವನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದಂತೆ ದೊಡ್ಡದೊಂದು ಗೋಡೆಗೆ ಎದುರಾಗಿ ಹಂತಕರ ಕೈಗೇ ಸಿಕ್ಕಿಬಿದ್ದ. ಸರಿಸುಮಾರು ಹದಿನೈದು ಮಚ್ಚಿನೇಟುಗಳಿಗೆ ಸಿಲುಕಿ ಕ್ಷಣಾರ್ಧದಲ್ಲೇ ಆತನ ಪ್ರಾಣ ಹೋಗಿತ್ತು. ತಲೆ ಸೀಳಿ ಹೋಗಿತ್ತು.

ತರುಣ ತನಗೆ ತಮ್ಮಯ್ಯನ ಗ್ಯಾಂಗ್ ಇಂಥದೊಂದು [illegible] ಕೈಗೊಳ್ಳುತ್ತದೆಯೆಂಬ ನಿರೀಕ್ಷೆ ತಾನೇ ಯಾರಿಗಿತ್ತು?

ಅಷ್ಟಕ್ಕೂ ಹರಿ ಕೊಲೆಯಾದ ಸುದ್ದಿ ಕೇಳಿದ ಆತನ ಹಡೆದತಾಯಿ ಕನಿಷ್ಠ ಆತನ ಹೆಣ ಕೂಡ ಮುಟ್ಟಲಿಲ್ಲ. ಅವನು ನಮ್ಮ ಮಗನೇ ಅಲ್ಲ ಎಂದುಬಿಟ್ಟರು. ಕೊನೆಗೆ ವಿಧಿಯಿಲ್ಲದೇ ತಮ್ಮಯ್ಯನ ತಾಯಿ ಜಯಮ್ಮನೆ ಹರಿ ತನ್ನ ಸಾಕು ಮಗ, ಅವನ ಹೆಣ ನನಗೆ ಕೊಟ್ಟು ಬಿಡಿ ಎಂದು ಬರೆದುಕೊಟ್ಟು ಪೊಲೀಸರಿಂದ ಹೆಣ ಪಡೆದು, ತನ್ನ ಮನೆ ಮುಂದಿಟ್ಟೇ ಅಂತಿಮ ವಿಧಿ ಮುಗಿಸ ಬೇಕಾಯಿತು. ಮಗ ತಮ್ಮಯ್ಯನಿಗಾಗಿ ಪ್ರಾಣ ಕೊಟ್ಟವನಿಗಾಗಿ ತಾಯಿಯೊಬ್ಬಳು ಇಷ್ಟೂ ಮಾಡದಿದ್ದರೆ ಹೇಗೆ? ಯಾರದೋ ಮಗ ಹರಿಯ ಹೆಣವನ್ನು ತನ್ನ ಮನೆಯ ಮುಂದಿಟ್ಟು ಅವನೇ ತನ್ನ ಮಗನೆಂದು ಜಯಮ್ಮ ಹೇಗೆ ಶವಸಂಸ್ಕಾರ ಕೈಗೊಂಡಳೋ? ಇದಾಗಿ ಎಷ್ಟೋ ವರ್ಷಗಳ ನಂತರ ಅದೇ ಜಾಗದಲ್ಲಿ, ಅದೇ ರೀತಿ ತನ್ನದೇ ಮಗನ ಹೆಣ ಮಲಗಿರುತ್ತದೆ ಎಂಬುದು ಆಕೆಗೆಲ್ಲಿ ಗೊತ್ತಿತ್ತು?

ತಿಮ್ಮೇನಹಳ್ಳಿಯ ಗೊಲ್ಲರ ಕತೆಯಲ್ಲಿ ಬಹುಶಃ ತಮ್ಮಯ್ಯನ ತಾಯಿ ಜಯಮ್ಮನಂಥ ಮತ್ತೊಂದು ಪಾತ್ರ ಇರಲಿಕ್ಕಿಲ್ಲ!

ಅದು ಗ್ಯಾಂಗ್‌ವಾರ್ ಒಂದರ ಅನಿವಾರ್ಯವೋ, ಜಿದ್ದಾಜಿದ್ದಿಯೋ ಅಥವಾ ರಕ್ಷಣಾತ್ಮಕ ಮನಸ್ಥಿತಿಯೋ?

ಹುಮ್ಮಸ್ಸಿಗೆ ಬಿದ್ದ ತಮ್ಮಯ್ಯ ಕಾಮಾಕ್ಷಿಪಾಳ್ಯದ ಮಚ್ಚ ತಿಮ್ಮೇನಹಳ್ಳಿಯ ಶ್ರೀಕಂಠ, ಪರಮೇಶ, ಮಾರೇನಹಳ್ಳಿಯ ಟೀಸಿ ರಾಜ, ಹಂಡೆ ಕುಮಾರ, ಕಲಗಚ್ಚು ಸೀನ ಮುಂತಾದವರನ್ನು ರೆಡಿ ಮಾಡಿದ್ದೇ ಅವರ ಮೂಲಕ ನೂರಕ್ಕೂ ಹೆಚ್ಚು ಮಂದಿ ಹುಡುಗರನ್ನು ಒಟ್ಟು ಮಾಡಿದ. ಅವರೆಲ್ಲರನ್ನೂ 1996 ರ ಏಪ್ರಿಲ್ 20 ರ ರಾತ್ರಿ ತಿಮ್ಮೇನಹಳ್ಳಿಗೆ ನುಗ್ಗಿಸಿಬಿಟ್ಟ. ಅವತ್ತು ಗೋವಿಂದ ಮನೆಗೆ ಬಂದಿದ್ದಾನೆಂಬ ಖಚಿತ ಮಾಹಿತಿ ತಮ್ಮಯ್ಯನಿಗಿತ್ತು. ಒಬ್ಬ ಗೋವಿಂದನನ್ನು ಮುಗಿಸಿಬಿಟ್ಟರೆ ಇನ್ನು ತಿಮ್ಮೇನಹಳ್ಳಿ ಸರಿಹೋಗುತ್ತದೆಯೆಂಬ ಲೆಕ್ಕ ಹಾಕಿಯೇ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡಿದ್ದ. ಐವತ್ತಕ್ಕೂ ಹೆಚ್ಚು ಲಾಂಗ್‌ಗಳು, ಪೆಟ್ರೋಲ್ ಬಾಂಬ್, ಖಾರದ ಪುಡಿ, ಹಾಕಿ ಸ್ಟಿಕ್ ಹಿಡಿದ ತಮ್ಮಯ್ಯನ ಹುಡುಗರು ಮೊದಲು ದಾಳಿ ಮಾಡಿದ್ದೇ ಗೋವಿಂದನ ಮನೆಗೆ.




ಕೊಲೆಯಾದ ಅರುಣ

ಆ ಹೊತ್ತಿಗಾಗಲೇ ಗೋವಿಂದ ಜಾಗ ಖಾಲಿ ಮಾಡಿದ್ದ. ಗೋವಿಂದ ಅಕ್ಕಪಕ್ಕದಲ್ಲೆಲ್ಲೋ ಬಚ್ಚಿಟ್ಟುಕೊಂಡಿದ್ದಾನೆಂದು ಆತನ ಸಂಬಂಧಿಕರ, ಪರಿಚಿತರ, ಅಕ್ಕಪಕ್ಕದ ಸಂಧಿ ಹೀಗೆ ಯಾವುದನ್ನೂ ಬಿಡದೆ ತಮ್ಮಯ್ಯನ ಪಡೆ ಚಿಂದಿಯೆಬ್ಬಿಸಿತು. ದಾಳಿಗೂ ಮುನ್ನ ಇಡೀ ಏರಿಯಾದ ವಿದ್ಯುತ್ ಸಂಪರ್ಕವನ್ನೇ ತಮ್ಮಯ್ಯನ ಗ್ಯಾಂಗ್ ಕಿತ್ತು ಹಾಕಿತ್ತು. ಯಾವ ಉದ್ದೇಶವಿಟ್ಟು ಇಡೀ ಏರಿಯಾ ಅನ್ನು ತಮ್ಮಯ್ಯನ ಗ್ಯಾಂಗ್ ಕತ್ತಲು ಮಾಡಿತ್ತೋ ಅದೇ ಗೋವಿಂದನಿಗೆ ಲಾಭವಾಗಿ ಪರಿಣಮಿಸಿತ್ತು. ಕತ್ತಲೆಯಲ್ಲಿ ಯಾವುದೋ ಕಾಂಪೌಂಡ್ ಜಿಗಿದು ಗೋವಿಂದ ಓಡಿಬಿಟ್ಟ. ಹತಾಶೆಗೆ ಬಿದ್ದು ತಮ್ಮಯ್ಯನ ಪಡೆ ಸಿಕ್ಕಸಿಕ್ಕ ಮನೆಗಳ ಮೇಲೆಲ್ಲ ದಾಳಿಯಿಟ್ಟು ಚಿಂದಿಯೆಬ್ಬಿಸಿದ್ದು, ವಾಪಸ್ಸಾಗುವಾಗ ವಿಜಯನಗರದ ಸಿಕ್ಕಸಿಕ್ಕ ಅಂಗಡಿಗಳ ಮೇಲೆಲ್ಲ ದಾಳಿ ಮಾಡಿದ್ದು ಬಹುಶಃ ಬೆಂಗಳೂರಿನ ಮಟ್ಟಿಗೆ ಇದೇ ಮೊದಲ ಘಟನೆಯಾಗಿತ್ತು. ತಮ್ಮಯ್ಯನ ಪಡೆಯ ಅಟ್ಟಹಾಸದ ವರದಿಗಳು ಮರುದಿನದ ಪತ್ರಿಕೆಗಳ ಮುಖಪುಟದಲ್ಲಿ ಅಚ್ಚಾದವು.

ಇದೊಂದೇ ಕಾರಣಕ್ಕೆ ಮರುದಿನ ಬೆಳಿಗ್ಗೆಯೇ ಪೊಲೀಸ್ ಕಮೀಷನರ್ ಕೋದಂಡರಾಮಯ್ಯ ವಿಜಯನಗರದ ಇನ್ಸ್‌ಪೆಕ್ಟರ್ ಮೈಲಾರಪ್ಪನನ್ನು ಸಸ್ಪೆಂಡ್ ಮಾಡಿಬಿಸಾಕಿದ್ದರು!

ತಮ್ಮಯ್ಯ ಮತ್ತು ಗೋವಿಂದ ಇಬ್ಬರ ಮೇಲೂ ವಿಜಯನಗರ ಪೊಲೀಸರು ರೌಡಿಶೀಟ್ ತೆರೆದರು. ಇಡೀ ತಮ್ಮಯ್ಯನ ಗ್ಯಾಂಗ್ ಜೈಲು ಪಾಲಾಯಿತು. ಜೊತೆಗೆ ಗೋವಿಂದನನ್ನೂ ಹಿಡಿದು ಜೈಲಿಗೆ ದಬ್ಬಲಾಯ್ತು. ಇಷ್ಟು ಮಾಡಿ ಬಿಟ್ಟರೆ ಎಲ್ಲಾ ಸರಿ ಹೋದಿತೆಂದೇ ಪೊಲೀಸರು ಲೆಕ್ಕ ಹಾಕಿದರು. ಆದರೆ ತಿಮ್ಮೇನಹಳ್ಳಿಯ ಆರ್ಥಿಕತೆಯೇ ಬದಲಾಗಿ ಹೋಗಿತ್ತು. ಹಿಂದಿನಂತೆ ಹೊಲದಲ್ಲಿ ಗೇದು ಉಣ್ಣಬೇಕಾದ ಪರಿಸ್ಥಿತಿ ಇಲ್ಲಿನ ಗೊಲ್ಲರಿಗಿರಲಿಲ್ಲ. ಯಾವುದೋ ಕಾಲಕ್ಕೆ ಕಟ್ಟಿದ ಮನೆಗಳಿಂದ ಕೈತುಂಬಾ ಬಾಡಿಗೆ ಬರುತ್ತಿತ್ತು. ಕುಂತು ಉಣ್ಣುವ ಅಪ್ಪ-ಅಮ್ಮಂದಿರು. ಅವರನ್ನೇ ಅನುಕರಿಸುವ ಮಕ್ಕಳಿಗೆ ಬೈಕ್ ಶೋಕಿ. ಬಹುತೇಕರು ಎಸ್ಸೆಲ್ಸಿ ಡ್ರಾಪೌಟುಗಳು. ಪಿಯುಸಿಗೆ ಬರುತ್ತಿದ್ದಂತೆ ಹುಡುಗಿಯರ ಹಿಂದೆ ಸುತ್ತುವ ಶೋಕಿ. ಮಿಕ್ಕಂತೆ ತಿಮ್ಮೇನಹಳ್ಳಿ ಸ್ಲಂ ಪಕ್ಕದ ಗ್ರೌಂಡಿನಲ್ಲಿ ಪಡ್ಡೆ ಹುಡುಗರ ಕ್ರಿಕೆಟ್ಟು. ಆ ಹೊತ್ತಿಗಾಗಲೇ ತಿಮ್ಮೇನಹಳ್ಳಿಯ ಕೆಲ ಹುಡುಗರು ಮೀಟರ್ ಬಡ್ಡಿ ದಂಧೆಗಿಳಿದು, ವಸೂಲಿಗೆಂದೇ ಸಣ್ಣಪುಟ್ಟ ಗ್ಯಾಂಗ್ ಕಟ್ಟಿಕೊಂಡಿದ್ದರು. ಇಂಥ ಗ್ಯಾಂಗುಗಳೆಲ್ಲ ಅಂತಿಮವಾಗಿ ತಮ್ಮಯ್ಯ ಅಥವಾ ಗೋವಿಂದರ ಸುಪರ್ದಿಗೊಳಪಡಲೇಬೇಕಿತ್ತು. ಮತ್ತು ತಂತಮ್ಮ ಚೆಂಬಲಿಗರ ಪಟಾಲಮ್ಮುಗಳ ಹಿತ ಕಾಯುವುದು ಎರಡೂ ಗ್ಯಾಂಗುಗಳಿಗೆ ಅನಿವಾರ್ಯವಾಗಿ ಹೋಯಿತು.

ಅಲ್ಲಿಯತನಕ ಕೇವಲ ಗೊಲ್ಲರ ದಾಯಾದಿ ಯುದ್ಧವಾಗಿದ್ದ ತಿಮ್ಮೇನಹಳ್ಳಿಯ ಗ್ಯಾಂಗ್ ವಾರ್‌ಗೂ ಬೆಂಗಳೂರು ಅಂಡರ್‌ವರ್ಲ್ಡ್‌ಗೂ ಯಾವುದೇ ಸಂಬಂಧವಿಲ್ಲದಿದ್ದರೂ ಮೊಟ್ಟಮೊದಲ ಬಾರಿಗೆ ಜೇಕೆ ಕೈಹಾಕಿದ್ದು 1997 ರಲ್ಲಿ. ಇದೇ ತಿಮ್ಮೇನಹಳ್ಳಿಯಲ್ಲಿದ್ದ ಅಯ್ಯ ಮತ್ತು ಬಿಟಿಎಸ್ ನಾಗ ಎಂಬಿಬ್ಬರು ಪಾಖಂಡಿಗಳನ್ನು ಹಿಡಿದು ಡಾನ್ ಜೇಕೆಯನ್ನು ಪರಿಚಯಿಸಿಕೊಂಡ ಗೋವಿಂದನ ಆವತ್ತಿನ ಅನಿವಾರ್ಯತೆಯೇ ಹಾಗಿತ್ತು. ತಾನೇ ಸಾಕಿಕೊಂಡಿದ್ದ ಅರುಣ ಎಂಬ ತಮಿಳರ ಹುಡುಗನನ್ನು ಮೂಡಲಪಾಳ್ಯದ ಸಂಧಿಯೊಂದರಲ್ಲಿ ಬರ್ಬರವಾಗಿ ಕೊಚ್ಚಿಕೊಂದ ತಮ್ಮಯ್ಯನ ಪಡೆಯ ವಿರುದ್ಧ ದೊಡ್ಡಮಟ್ಟದ ಪ್ರತೀಕಾರ ಹೇಳಲು ಗೋವಿಂದ ನಿರ್ಧರಿಸಿದ್ದ. ಜೇಕೆಯಂಥ ಸರ್ವಶಕ್ತ ಡಾನ್ ಒಬ್ಬನ ನೆರವಿಲ್ಲದೆ ಅದು ತನ್ನಿಂದಾಗದ ಕೆಲಸ ಎಂಬುದು ಆತನಿಗಾಗಲೇ ಮನದಟ್ಟಾಗಿ ಹೋಗಿತ್ತು.



ಕೊಲೆಯಾದ ಸೂರಿ

ಅರುಣ ಚಿಕ್ಕಂದಿನಿಂದಲೂ ಗೋವಿಂದನ ಮನೆಯಲ್ಲೇ ಉಂಡು ಆಡಿದ ಹುಡುಗ. ಅಸಲೀ ಸಂಗತಿಯೇನೆಂದರೆ ತಮ್ಮಯ್ಯನ ಶಿಷ್ಯರಿಗೆ ಅರುಣನನ್ನೇ ಮುಗಿಸಬೇಕೆಂಬ ಇರಾದೆಯಿರಲಿಲ್ಲ. ಇದ್ದದ್ದು ಸೂರಿಯ ಮೇಲೆ. ತಿಮ್ಮೇನಹಳ್ಳಿ ಸೂರಿ ಆ ಹೊತ್ತಿಗೆ ಕೇವಲ ಇಪ್ಪತ್ತರ ಪೋರ. ಗೋವಿಂದನಿಗೆ ಆತ ದೂರದ ಸಂಬಂಧಿ ಕೂಡ. ಗೋವಿಂದನ ಹಂಗಿಗೆ ಬಿದ್ದವನು ತಮ್ಮಯ್ಯನ ಪರಮಾಪ್ತನಾಗಿದ್ದ ಎಂಬ ಒಂದೇ ಕಾರಣಕ್ಕೆ ದೊಂಗ ಸೀನ ಎಂಬಾತನನ್ನು ನಡುರಸ್ತೆಯಲ್ಲಿ ಅಟಕಾಯಿಸಿಕೊಂಡು ಮಚ್ಚು ಬೀಸಿದ. ದೊಂಗ ಸೀನ ಬಚಾವಾದನಾದರೂ ಮಚ್ಚಿನೇಟಿಗೆ ಆತನ ಎಡಗೈ ಸೀಳಿ ಹೋಗಿತ್ತು. ಅವತ್ತು ಸೂರಿಯ ಜೊತೆ ಅರುಣನೂ ಇದ್ದ! ಮಸ್ತಿ ಎನ್ನುವುದು ಇದನ್ನೆ. ಯುದ್ಧೋನ್ಮಾದಕ್ಕೆ ಬಿದ್ದ ತಮ್ಮಯ್ಯನ ಗ್ಯಾಂಗ್ ಸೂರಿಯನ್ನೇ ಮುಗಿಸಿಬಿಡಲು ನಿರ್ಧರಿಸಿತು. ಸೂರಿ ಪ್ರತಿನಿತ್ಯ ಮೂಡಲಪಾಳ್ಯದ ಬ್ಯಾಂಕ್ ಕಾಲೋನಿಯ ಕ್ಯಾಸೆಟ್ ಅಂಗಡಿಯೊಂದರಲ್ಲಿ ಅಡ್ಡೆ ಹಾಕುತ್ತಾನೆ ಎಂಬ ಮಾಹಿತಿಯನ್ನೂ ಕಲೆ ಹಾಕಿತು. ಶ್ರೀಕಂಠ, ಪರಮೇಶ, ಅತ್ತಿಗುಪ್ಪೆ ಸ್ವಾಮಿ, ಹೀಗೆ ಹದಿನೈದಕ್ಕೂ ಹೆಚ್ಚು ಮಂದಿಯಿದ್ದ ಹುಡುಗರು ನುಗ್ಗಿದ್ದೇ ತಡ ಸೂರಿ ಇನ್ನಾವುದೋ ಬಾಗಿಲು ಜಿಗಿದು ಪರಾರಿಯಾದ. ಜೊತೆಗಿದ್ದ ಅರುಣ ಓಡುತ್ತಾ ಇನ್ನಾವುದೋ ಸಂಧಿ ಹೊಕ್ಕವನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದಂತೆ ದೊಡ್ಡದೊಂದು ಗೋಡೆಗೆ ಎದುರಾಗಿ ಹಂತಕರ ಕೈಗೇ ಸಿಕ್ಕಿಬಿದ್ದ. ಸರಿಸುಮಾರು ಹದಿನೈದು ಮಚ್ಚಿನೇಟುಗಳಿಗೆ ಸಿಲುಕಿ ಕ್ಷಣಾರ್ಧದಲ್ಲೇ ಆತನ ಪ್ರಾಣ ಹೋಗಿತ್ತು. ತಲೆ ಸೀಳಿ ಹೋಗಿತ್ತು. ಹೊಟ್ಟೆ ಬಗೆದು ಕರುಳು ಹೊರಬಂದಿತ್ತು. ಆ ಹೊತ್ತಿಗೆ ಗೋವಿಂದನ ಎಡಗೈ ಬಲಗೈಯಂತಿದ್ದವರೇ ಸೂರಿ ಮತ್ತು ಅರುಣ.



ಲೇಔಟ್ ಮಂಜ

ಗೋವಿಂದ ಕುದ್ದುಹೋದ. ಅರುಣನ ಹತ್ಯೆಗೆ ಆತ ತಮ್ಮಯ್ಯನನ್ನೇ ತೆಗೆದು ಬಿಡಲು ನಿರ್ಧರಿಸಿದ್ದ. ರಿವೇಂಜ್ ಗ್ಯಾಂಗ್‌ವಾರ್‌ನ ಮೂಲ ಮಂತ್ರ. ಹಾಗೊಮ್ಮೆ ರಿವೇಂಜ್ ತೀರಿಸಿಕೊಳ್ಳದೇ ಹೋದರೆ. ಆತನ ಗ್ಯಾಂಗಿನಲ್ಲಿದ್ದ ಕಬಡ್ಡಿ ನರಸಿಂಹ, ನೀರಾನೆ ಹರೀಶ, ಲಕ್ಕೀಶ, ಬಿಎನ್, ಹಂಡೆರಾಮ ಮುಂತಾದ ಹಾರ್ಡ್‌ಕೋರ್‌ಗಳಿಗೆ ತನ್ನ ಮೇಲಿದ್ದ ವಿಶ್ವಾಸವೆಲ್ಲಿ ಕುಂದಿಬಿಡುತ್ತೋ ಎಂಬ ಆತಂಕ ಬೇರೆ. ಹಾಗಂಥ ತಮ್ಮಯ್ಯನನ್ನು ಕೊಂದು ಅದನ್ನು ದಕ್ಕಿಸಿಕೊಳ್ಳಬೇಕೆಂದರೆ ಅದಕ್ಕೆ ಜೇಕೆಯಂಥ ಸರ್ವಶಕ್ತನ ಸಹಾಯ ಬೇಕೇಬೇಕು.



ಜೇಡರಹಳ್ಳಿ ಕೃಷ್ಣಪ್ಪ

ಹಾಗೆಂದು ನಿರ್ಧರಿಸಿದವನೇ ಪಾಖಂಡಿಗಳಾದ ಅಯ್ಯ ಮತ್ತು ಬಿಟಿಎಸ್ ನಾಗರನ್ನು ಹಿಡಿದು ಜೇಕೆಗೆ ಶರಣಾಗಿದ್ದ ಗೋವಿಂದ. ಒಬ್ಬ ಏರಿಯಾ ರೌಡಿ. ಮತ್ತೊಬ್ಬ ಡಾನ್. ಇಬ್ಬರ ಸಮಾಗಮಕ್ಕೂ ಸಮಾನ ಉದ್ದೇಶಗಳಿದ್ದವು. ಗೋವಿಂದನಿಗೆ ತನ್ನ ಕಡುವೈರಿ ತಮ್ಮಯ್ಯನನ್ನು ಮುಗಿಸಲು ಜೇಕೆಯ ನೆರವು ಬೇಕಿದ್ದರೆ, ಜೇಕೆಗೆ ತನ್ನ ವಿರುದ್ಧ ತಿರುಗಿಬಿದ್ದಿದ್ದ ಲೇಔಟ್ ಮಂಜನನ್ನು ಮುಗಿಸಬೇಕಿತ್ತು. ಅದನ್ನು ಪೂರೈ[...] ತಮ್ಮಯ್ಯನ ಹತ್ಯೆಗೆ ಸಾತ್ ಕೊಡುವ ಮಾ[...] ಏರ್ಪಟ್ಟಿತು.

ಅದು ಲೇಔಟ್ ಮಂಜನೆಂದರೆ ಇಡೀ ಬೆ[...] ಭೂಗತ ಲೋಕವೇ ವಿಲಕ್ಷಣ ಕುತೂ[...] ದಿಟ್ಟಿಸುತ್ತಿದ್ದ ಕಾಲ. ಮಂಜ ಇನ್ನೇನು ಜ[...] ಮುಗಿಸಿಬಿಡ್ತಾನೆ ಎಂದು ಇಡೀ ಅಂಡ[...] ಮಾತಾಡಿಕೊಳ್ಳುತ್ತಿತ್ತು. ಅಲ್ಲಿಯ ತನಕ ಮಂಜ[...] ಜೇಕೆಯ ಬಲಗೈ ಬಂಟ ಎಂದೇ ಅರ್ಥ ಬೆ[...] ಭಾವಿಸಿತ್ತು. ವೈಮನಸ್ಸು ಹುಟ್ಟಿದ್ದು ಜೇಕೆಗ[...] ತಮ್ಮ ಚಂದ್ರನಿಗೂ ಮಧ್ಯೆ. ಆದರೆ ತನ[...] ಜೊತೆ ನಿಲ್ಲುವ ಬದಲು ಮಂಜ ಚಂ[...] ವಹಿಸಿಬಿಟ್ಟ.

ಅದೊಂದು ಕ್ಷುಲ್ಲಕ ಜಗಳ. ಜೇಕೆ ಪ[...] ಲೇಔಟ್‌ನಲ್ಲಿ ಕಟ್ಟಿಸಿರುವ ಕಾಂಪ್ಲೆಕ್ಸ್‌ನಲ್ಲಿ [...] ಅಂಗಡಿ ಇಟ್ಟುಕೊಂಡಿದ್ದ ರಾಜಣ್ಣ ಯಾರಿಗೆ[...] ಕೊಡಬೇಕಿತ್ತು. ಸಾಲ ಕೊಟ್ಟವನ ಪರಿವಹಿಸಿ[...] ತನ್ನ ಜೊತೆ ಮಂಜ, ಗುಂಡ ಇತ್ಯಾದಿಗಳನ್ನು ಕ[...] ರಾಜಣ್ಣನಿಂದ ಹಣ ವಸೂಲಿ ಮಾಡಿ ಅವನ[...] ಬೀಗ ಜಡಿದು ಬಿಟ್ಟರು. ತನಗೊಂದು ಮಾ[...] ತಿಳಿಸದೇ ತನ್ನದೇ ಬಾಡಿಗೆದಾರನೊಬ್ಬನ ಅಂ[...] ಮಾಡಿಸಿದ್ದು ಕೃಷ್ಣಪ್ಪನ ಪ್ರತಿಷ್ಠೆಗೇ ಪೆಟ್ಟಾ[...] ಒಂದೇ ಕಾರಣಕ್ಕೆ ತನ್ನ ಸೋದರ ಸಂಬಂಧಿ [...] ತನ್ನ ತಂಡದಿಂದ ಜೇಕೆ ಹೊರಗೋಡಿಸಿದ್ದ[...]

ಸದರಿ ಚಂದ್ರನೊಂದಿಗೆ ಮಂಜ ಕೂ[...] ತಂಡದಿಂದ ಹೊರಬಿದ್ದ. ಇಷ್ಟಕ್ಕೇ ಮುಗಿ[...] ಜೇಕೆ ಭಾವಿಸಿದ್ದ. ಆದರೆ ಚಂದ್ರ ಮತ್ತು[...] ಸೇರಿ ಜೇಕೆಯ ಸಾಮ್ರಾಜ್ಯದಲ್ಲೇ ಮತ್ತೊಂದು[...] ಕಟ್ಟತೊಡಗಿದರು. ಸ್ವತಂತ್ರವಾ[...] ಗಿಳಿದರು. ಹತ್ತಾರು ವರ್ಷ [...] ಹುಡುಗರು ಬೇರೆಯಾದಾಗ[...] ಬೇಸರವಾಗಲಿಲ್ಲ. ಆದರೆ ತ[...] ದುಷ್ಮನ್ ನಂಜುಂಡನ ಜೊ[...] ಅವರೆಲ್ಲ ಮಸಲತ್ತು ಮಾ[...] ಎಂಬುದು ಗೊತ್ತಾದಾಗ [...] ತಲೆಕೆಡಿಸಿಕೊಂಡ. ಸಾಲದ[...] ಇನ್ನಿಬ್ಬರು ದುಷ್ಮನ್‌ಗಳಾದ [...] ಪುರದ ಸುರೇಶ್ ಗೌಡ[...] ಜನಾಗೌಡರ ಜೊತೆಗೂ ಕೈ[...] ದ್ದಾರೆ ಎಂಬುದು ಗೊತ್ತಾಗಿದ್ದೆ[...] ವ್ಯಗ್ರನಾದ. ಅದರ ಪರಿಣಾಮ[...] ಲೇಔಟ್ ಮಂಜನನ್ನು [...] ಆಗಸ್ಟ್ 29 ರಂದು ಬ[...] ನಗರದಿಂದ ನೆಲಮಂ[...] ಹೊತ್ತೊಯ್ದು ಕೈ-ಕಾಲಿನ ನ[...] ಎಸೆದಿದ್ದ.

ನೆಲಮಂಗಲದವರ್‍ಯಾರೋ [...] ಅವನನ್ನು ಹೊತ್ತು ತಂದು [...] ಮಣಿಪಾಲದ ಆಸ್ಪತ್ರೆಗೆ ಹಾ[...] ಅಲ್ಲಿ ಆತನಿಗೆ ಆಪರೇಷನ್ನಾ[...] ಒಂದು ತಿಂಗಳಿಗೆಲ್ಲ ಮಂಜ[...] ಕಾಲುಗಳಿಗೆ ಸ್ವಾಧೀನ ಬಂತ[...] ಜಿದ್ದಿಗೆ ಬಿದ್ದ ಮಂಜ ಮೊದಲಿಗಿಂತ ಬಿರು[...] ಓಡಾಡತೊಡಗಿದ. ತನ್ನ ಗ್ಯಾಂಗನ್ನು ದೊಡ[...] ಮಾಡಿಕೊಂಡ. ಕಾರಿನ ತುಂಬ ಹುಡುಗರ[...] ಹಾಕಿಕೊಂಡು ನೋಡ್ತಾ ಇರಿ. ಇಷ್ಟರಲ್ಲೇ [...] ಕೃಷ್ಣಪ್ಪನ್ನ ಮುಗಿಸ್ತೀನಿ ಎಂದು ಕಂಡಕಂಡಲ[...] ಪೋಜು ಕೊಟ್ಟ.

ಆದರೆ ಜೇಡರಹಳ್ಳಿ ಕೃಷ್ಣಪ್ಪ ಬೇರೆಯದೇ [...] ಬಂದುಬಿಟ್ಟಿದ್ದ!

(ಮುಂದುವ[...]

...ಸಾರ್ವಜನಿಕ ಗ್ರಂಥಾಲಯ ಇಲಾಖೆ ಪುಸ್ತಕ ...ಯ ವಿಷಯದಲ್ಲಿ ಸೃಷ್ಟಿ ಮಾಡಿಕೊಂಡಿದ್ದ ಎಲ್ಲಾ ...ಲಗಳನ್ನು ಇಲಾಖೆಯ ನಿರ್ದೇಶಕರಾದ ಪಿ.ವೈ. ...ದಕುಮಾರ್ ನಿವಾರಿಸಿ ಏಕಗವಾಕ್ಷಿಯಡಿಗೆ ತಂದು ...ಗಾರರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಆದರೆ ತಾವು ...ದ ಪುಸ್ತಕವನ್ನು ಅವರಿವರಿಗೆ ಕೊಟ್ಟು ಪ್ರಕಟಿಸಿರುವ ...ಗಳು ಆ ಬಗ್ಗೆ ಯಾವುದೇ ಪ್ರತಿಕ್ರಿಯೆಗೆ ಹೋಗದೆ ...ರುವುದು ಒಂದು ವಿಶೇಷ.

...ಂದೆ ಸಾಹಿತಿಗಳು ಪ್ರಾಮಾಣಿಕ ...ದ್ದರು. ಅಂತಹ ಪ್ರಾಮಾಣಿಕ ...ಗಳ ಪುಸ್ತಕವನ್ನು ಪ್ರಕಟಿಸುತ್ತಿದ್ದ ...ಶಕರು ಯಾವುದೇ ಮೋಸ ...ನೆಗಳಿಲ್ಲದೆ, ತಮ್ಮ ಬಂಡವಾಳ, ...ಟವ ಹಣ ಮತ್ತು ಲೆಕ್ಕಪತ್ರವನ್ನೆಲ್ಲಾ ...ಗಾರರಿಗೆ ತೋರಿಸುತ್ತಿದ್ದರು. ಆದರೆ ...ತರ ಹುಟ್ಟಿಕೊಂಡ ಬೇನಾಮಿ ...ಶಕರ ಹಾವಳಿಯಿಂದ ಎಲ್ಲ ವ್ಯವ ...ಸ್ಥೆ ಗಬ್ಬೆದ್ದು ಹೋಗಿ ಪುಸ್ತಕ ಬರೆದ ... ಮೂರು ಕಾಸು ದಕ್ಕದಂತಹ ಸ್ಥಿತಿ ನಿರ್ಮಾಣ ...ತ್ತು. ಕೆಲವೇ ವರ್ಷಗಳ ಹಿಂದೆ ಕಾಲಿಗೆ ಚಪ್ಪಲಿ


ರಾಜೇಂದ್ರ ಕುಮಾರ್

ಪುಸ್ತಕದ ಮುಖಪುಟ ಕೀಳು ಭಾವನೆಯನ್ನು ನೀಡುವುದು. ಇಂತಹ ಗುರುತರ ಕಾರಣಗಳನ್ನು ಮೀರಿ ಯಾವುದೇ ಪುಸ್ತಕ ಆಯ್ಕೆಯಾಗುವುದಿಲ್ಲ.

ಏಕ ಗವಾಕ್ಷಿ

ನಮ್ಮ ಸಾಹಿತಿಗಳು ಏಕಗವಾಕ್ಷಿಯಲ್ಲಿ ಬರುತ್ತೇವೆಂದು ಕೂಗುತ್ತಿದ್ದ ಮನವಿಗೆ ಓಗೊಟ್ಟಿರುವ ರಾಜೇಂದ್ರಕುಮಾರ್ ಮಾಡಿರುವ ಅನುಕೂಲದಲ್ಲಿ ಪುಸ್ತಕ ಒಂದೇ ಕಡೆ ಖರೀದಿಸಲ್ಪಡುವುದು ಮತ್ತು ಹಣದ ಬಟವಾಡೆಯೂ ಕೂಡ ಖರೀದಿ ಗವಾಕ್ಷಿಯಲ್ಲೇ ನಡೆಯುವುದು. ಈಗ ರಾಜೇಂದ್ರಕುಮಾರ್ ಕ್ರೋಢೀಕರಿಸಿರುವ ಆರು ಕೋಟಿ ತೊಂಭತ್ತೆರಡು ಲಕ್ಷದ ವಹಿವಾಟಿಗೆ ಪ್ರತಿ ಸಾಹಿತಿಯ 300/400 ಪುಸ್ತಕ ಖರೀದಿಸಲ್ಪಡುತ್ತದೆ. ಸದರಿ ಹಣ ಮುಗಿದು ಇನ್ನೂ ಪುಸ್ತಕಗಳಿದ್ದರೆ RRLF ಮತ್ತು ಬಲ್ಕ್ ಖರೀದಿಯೂ ನಡೆಯುತ್ತೆ. ಇದಲ್ಲದೆ ನಗರ ಕೇಂದ್ರ ಗ್ರಂಥಾಲಯಗಳು ಖರೀದಿ ಮಾಡುತ್ತವೆ. ಅದೆಲ್ಲಾ ಅವರ ಹಣಕಾಸಿನ ಸಾಮರ್ಥ್ಯಕ್ಕೆ ಬಿಟ್ಟ ವಿಚಾರ. ಆದರೂ ಸಾಹಿತಿಯೊಬ್ಬ ತನ್ನ ಗ್ರಂಥಗಳ ಪೈಕಿ 600 ಪ್ರತಿಯನ್ನು ಗ್ರಂಥಾಲಯಗಳಿಗೆ ದಬ್ಬಬಹುದು.

...ಲೈಬ್ರರಿ: ರಾಜೇಂದ್ರಕುಮಾರ್ ಹೊಸ ಯೋಜನೆ

...ತಿರುಗುತ್ತಿದ್ದವರೆಲ್ಲಾ ಸಾಹಿತಿಗಳನ್ನು ಕಾಡಿಬೇಡಿ, ... ಪಡೆದು ಪ್ರಕಟಿಸಿ, ಲಕ್ಷಾಂತರ ಗಳಿಸಿ ಇತ್ತ ...ತಿಗಳಿಗೂ ನಾಮ ಹಾಕಿ, ಅತ್ತ ಗ್ರಂಥಾಲಯ ...ದ ಅಧಿಕಾರಿಗಳಿಗೂ ಲಂಚದ ರುಚಿ ಹತ್ತಿಸಿ ...ನ್ನು ಹಾಳು ಮಾಡಿದ ಭೂಪರು ನಮ್ಮ ನಡುವೆ ...ಮುತ್ತಿದ್ದಾರೆ.

...ಂದು ಸೋಮಾರಿಗಳಾಗಿರುವ ಸಾಹಿತಿಗಳ ...ಲ್ಯವನ್ನು ಬಂಡವಾಳ ಮಾಡಿಕೊಂಡಿರುವ ಹಲವು ...ಶಕರು, ಹಲವು ಹೆಸರಿಟ್ಟುಕೊಂಡು ಐದಾರು ಪ್ರಕಾಶನ ...ತ್ತ ಎಷ್ಟು ಕೊಬ್ಬಿದ್ದಾರೆಂದರೆ ಸದ್ಯಕ್ಕೆ ಎಚ್ಚರಗೊಂಡ ... ಮಾತ್ರ ಅವರ ಹಾವಳಿಯನ್ನು ತಡೆಯಬಲ್ಲ. ... ಹಿಂದಿನ ಸಾಹಿತಿಗಳನೇಕರು ತಾವೇ ಪ್ರಕಾಶನ ...ತ್ತ ಎಲ್ಲರಿಗೂ ಮಾದರಿಗಳಾಗಿದ್ದಾರೆ. ಕುವೆಂಪು ...ಉದಯರವಿ ಪ್ರಕಾಶನ ಮಾಡದಿದ್ದರೆ, ಅವರಿಗೆ ...ಕಾಣಿಯೂ ಸಿಗದಂತೆ ನೋಡಿಕೊಳ್ಳುವ ಪ್ರಕಾಶಕರು ...ಕೂ ಇದ್ದರು. ಜಿ.ಪಿ. ರಾಜರತ್ನಂ ಸ್ವತಃ ತಾವೇ ...ಲ್ಲಿ ಪುಸ್ತಕ ಇಟ್ಟುಕೊಂಡು ಮಾರುತ್ತಿದ್ದರು. ಅಕ್ಷರ ...ಶನ, ಸಮಾಜ ಪುಸ್ತಕಾಲಯ, ಸಾಹಿತ್ಯ ಭಂಡಾರ, ...ಮನೋಹರ ಗ್ರಂಥಮಾಲ ಇಂತಹ ಶ್ರೇಷ್ಠ ಸಾಹಿತ್ಯ ...ಶನ ಸಂಸ್ಥೆಗಳ ಹೆಸರೇ ಮಸುಕಾಗುವಂತಹ ಪ್ರಕಾಶನ ...ಯವರ ಹಾವಳಿ ತಡೆಗಟ್ಟಬೇಕಾದರೆ, ನಮ್ಮ ...ಕರು ಒಂದಿಷ್ಟು ರಿಸ್ಕ್ ತೆಗೆದುಕೊಳ್ಳಬೇಕಾಗಿದೆ.

ಸಗಟು ಖರೀದಿ

2003-04ರಲ್ಲಿ ರಾಜ್ಯ ಕೇಂದ್ರ ಗ್ರಂಥಾಲಯ ಸಗಟು ...ದಿಗಾಗಿ 60 ಲಕ್ಷ ರೂ.ಗಳನ್ನು ವ್ಯಯಿಸಿತ್ತು. ...ತರದ ವರ್ಷದಲ್ಲಿ 90 ಲಕ್ಷ ರೂ.ಗಳ ಸಗಟು ...ದಿ ನಡೆಸಿತ್ತು. ಆದರೆ ಈ ವರ್ಷ 2006-07 ರಲ್ಲಿ ...ರುವ ಹಲವು ಮೂಲಗಳಿಂದ ರಾಜೇಂದ್ರಕುಮಾರ್ ...ವಾಗಿ ಧನ ಸಂಗ್ರಹಿಸಿ 6 ಕೋಟಿ ತೊಂಭತ್ತು ...ರೂ.ಗಳ ಪುಸ್ತಕ ಖರೀದಿಯನ್ನು ಸಗಟು ಖರೀದಿ ... ನಡೆಸಲಿದ್ದಾರೆ. ಈ ಖರೀದಿಗಾಗಿ ಪುಸ್ತಕಗಳನ್ನು ... ಸಮಿತಿ ಪರಿಶೀಲಿಸಿ ಆಯ್ಕೆ ಮಾಡಿದೆಯಾದ್ದರಿಂದ ...ನೇ ಸಾಹಿತಿ ತನಗೆ ಅನ್ಯಾಯವಾಯ್ತೆಂದು ಬೊಬ್ಬೆ ...ಹೊಡೆಯುವಂತಿಲ್ಲ.

ತಿರಸ್ಕೃತ ಕಾರಣಗಳು

...ಗುಣಾತ್ಮಕವಾಗಿ ಗಣನೀಯವಾಗಿಲ್ಲದಿರುವುದು, ...ಬಹುಹಿಂದೆ ಸಾಕಷ್ಟು ಬಾರಿ ಪ್ರಕಾಶನಗೊಂಡಿದ್ದು ...ಸದು ಸಂಸ್ಥೆ ಬದಲಿಸಿ ಆ ಸಂಸ್ಥೆಯ ಪ್ರಥಮ ಮುದ್ರಣ ... ಎಂದು ಮೂಡಿಸಿರುವುದು, ಮುದ್ರಣ ಸರಿಯಿಲ್ಲದೆ ...ವುದು, ಪುಸ್ತಕಕ್ಕೆ ಬಳಸಿದ ಕಾಗದದ ಗುಣಮಟ್ಟ ...ಕಳಪೆಯಾಗಿರುವುದು, ಮುದ್ರಣದ ಇಸವಿಯಲ್ಲಿ ತಿದ್ದುಪಡಿ ...ಮಾಡಿರುವುದು, ಪ್ರಸ್ತುತ ವರ್ಷದಲ್ಲಿ ಮುದ್ರಣ ...ವಾಗಿರುವುದು, ಮರುಮುದ್ರಣದ ಇಸವಿಯನ್ನು ...ನಮೂದಿಸದೇ ಇರುವುದು, ಮುದ್ರಿತ ಬೆಲೆ ...ತಿದ್ದುವುದು, ಬೆಲೆಯನ್ನು ತಿದ್ದಿರುವುದು. ... ಅಂಟಿಸಿರುವುದು, ಮುಖ... ...ಡಿದಿರುವುದು.

ಇನ್ನುಳಿದವನ್ನು ಗೆಳೆಯರು, ಹಿತೈಷಿಗಳು, ಮದುಮಕ್ಕಳಿಗೆ ಸಹಿ ಮಾಡಿಕೊಟ್ಟು ಪುಸ್ತಕ ಪ್ರಕಟಣೆಯ ಸಾರ್ಥಕತೆ ಕಂಡುಕೊಳ್ಳಬಹುದು.

ರಾಜೇಂದ್ರಕುಮಾರರ ಈ ಏಕಗವಾಕ್ಷಿ ಕಾರಣಕ್ಕಾಗಿಯಾದರೂ ಸಾಹಿತಿಗಳು ತಾವೇ ತಮ್ಮ ಪುಸ್ತಕ ಪ್ರಕಟಿಸುವ ತೊಂದರೆ ತೆಗೆದುಕೊಂಡರೆ ಬೇನಾಮಿ ಹೆಸರಿನ ಪ್ರಕಾಶಕರ ಹುಟ್ಟಡಗಿಸಬಹುದು.


ಹೊಸ ಲೈಬರಿಗಳು

ಸಗಟು ಖರೀದಿಗಾಗಿ 6 ಕೋಟಿ 92 ಲಕ್ಷ ರೂ.ಗಳನ್ನು ಸಂಗ್ರಹಿಸಿರುವ ರಾಜೇಂದ್ರಕುಮಾರ್‌ರ ಇನ್ನುಳಿದ ಪ್ರಾಜೆಕ್ಟುಗಳು ಗ್ರಂಥಪ್ರಿಯರ ಮೆಚ್ಚುಗೆ ಪಡೆಯಲಿವೆ. 1988 ರಲ್ಲಿ ಪ್ರಾರಂಭಗೊಳ್ಳಲು ಶುರುವಾದ ಗ್ರಾಮ ಪಂಚಾಯ್ತಿ ಗ್ರಂಥಾಲಯಗಳ ಸಂಖ್ಯೆ ಈವರೆಗೆ ಇದ್ದಿದ್ದು 3251. ಆದರೆ ಈ ವರ್ಷ ಹೊಸದಾಗಿ 2515 ಗ್ರಂಥಾಲಯಗಳು ಪ್ರಾರಂಭವಾಗುತ್ತಿವೆ. ಭಾರತದ ಯಾವುದೇ ರಾಜ್ಯದಲ್ಲಿ ಇಷ್ಟು ಪ್ರಮಾಣದ ಗ್ರಾಮೀಣ ಗ್ರಂಥಾಲಯಗಳಿಲ್ಲ ಎಂಬುದು ಅಚ್ಚರಿಯ ಸಂಗತಿ. ಇದಲ್ಲದೆ ರಾಜ್ಯದ ಎರಡು ಸಾವಿರ ಸ್ಲಂಗಳಲ್ಲಿ ಹಂತಹಂತವಾಗಿ ಗ್ರಂಥಾಲಯ ಸ್ಥಾಪಿಸುವ ಕೆಲಸಕ್ಕೆ ಚಾಲನೆ ಸಿಕ್ಕಿದೆ. ಈ ಕೆಲಸ ಸಾಕ್ಷರತೆ ಯೋಜನೆ ಯೊಂದಿಗೆ ನಡೆಯಲಿದೆ. ಪ್ರತಿ ಜಿಲ್ಲೆಗೂ ಮಕ್ಕಳ ಗ್ರಂಥಾಲ ಯಗಳು ಬರಲಿವೆ. ಕಮ್ಯುನಿಟಿ ಚಿಲ್ಡ್ರನ್ ಸೆಂಟರ್ ಹೆಸರಿನಲ್ಲಿ ತೆರೆಯುವ ಈ ಗ್ರಂಥಾಲಯಕ್ಕೆ ಪ್ರತಿ ಜಿಲ್ಲೆಗೆ 3 ಲಕ್ಷ ವ್ಯಯವಾಗಲಿದೆ. ಅದರಲ್ಲಿ ಪುಸ್ತಕ, ಕಂಪ್ಯೂಟರ್, ಆಡಿಯೋ, ಸಿಡಿ, ಕತೆ ಇವೆಲ್ಲ ಲಭ್ಯವಿರುವ ವಾತಾವರಣದಲ್ಲಿ ನಿಸರ್ಗದ ಶಬ್ದವಿರುವ ಸಂಗೀತವೂ ಇರುತ್ತದೆ. ಮುಂದಿನ ವರ್ಷದಿಂದ 175 ತಾಲ್ಲೂಕಿಗೂ ಬರುವ ಈ ಕಮ್ಯುನಿಟಿ ಚಿಲ್ಡ್ರನ್ ಸೆಂಟರ್ ಐದು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ.

ಈಗಾಗಲೇ 1 ಕೋಟಿ 75 ಲಕ್ಷ ರೂ.ಗಳಲ್ಲಿ ಶ್ರವಣಬೆಳಗೊಳದಲ್ಲಿ ಪಂಪನ ಹೆಸರಿನ ಗ್ರಂಥಾಲಯ ತಲೆ ಎತ್ತಿದೆ. ಇದಕ್ಕೆ ವ್ಯಯವಾದ ಹಣವೆಲ್ಲಾ ಮಸ್ತಕಾಭಿಷೇಕದ್ದು. ಮುಧೋಳದಲ್ಲಿ ರನ್ನನ ಹೆಸರು ಹೊತ್ತ ಗ್ರಂಥಾಲಯ ತಲೆ ಎತ್ತುತ್ತಿದ್ದು ಈ ಕಟ್ಟಡಕ್ಕೆ ಒಂದು ಕೋಟಿ ರೂ.ಗಳ ವೆಚ್ಚ ತಗುಲುತ್ತಿದೆ.

ಈ ನಾಡಿನ ಎಲ್ಲಾ ಜಿಲ್ಲೆ, ತಾಲೂಕು, ಹೋಬಳಿ ಮತ್ತು ಗ್ರಾಮ ಪಂಚಾಯ್ತಿಗಳೆಲ್ಲಾ ಗ್ರಂಥಾಲಯಗಳನ್ನು ಹೊಂದಿದಾಗ ಅವುಗಳ ಸಂಖ್ಯೆ 10 ಸಾವಿರವಾಗಬಹುದು. ಅಂದರೆ ಕನ್ನಡದ ಪತ್ರಿಕೆಗಳು 10 ಸಾವಿರ ಪ್ರಸಾರದ ಗ್ಯಾರಂಟಿ ಮೇಲೆ ಮುದ್ರಣಗೊಳ್ಳಬಹುದು. ಹಾಗೆಯೇ ಪುಸ್ತಕಗಳ ಪ್ರಕಟಣೆಯ ಸಂಖ್ಯೆಯೂ ಏರಬಹುದು. ಆ ಕಾರಣಕ್ಕೆ ನಾಡಿನ ಜವಾಬ್ದಾರಿ ಹೊತ್ತ ಸಾಹಿತಿಗಳು ಕಳ್ಳಭಟ್ಟಿ ದಂಧೆಯಂತಹ ಸುಳ್ಳು ಪ್ರಕಾಶಕರನ್ನು ಹುಟ್ಟು ಹಾಕುವುದಕ್ಕೆ ಬದಲು ಗ್ರಂಥಾಲಯ ಇಲಾಖೆಯೊಡನೆ ಜವಾಬ್ದಾರಿಯಿಂದ ವರ್ತಿಸಿದರೆ, ನಮ್ಮ ನಾಡಿನ ಗ್ರಂಥಾಲಯಗಳು ಒಳ್ಳೆಯ ಪುಸ್ತಕಗಳಿಂದ ತುಂಬಬಹುದು. ಇಲ್ಲವಾದರೆ ರದ್ದಿ ತುಂಬಿದ ಗೋಡೌನ್ ಗಳಾಗುತ್ತವೆ.

-ವರದಿಗಾರ



ಕೇಂದ್ರದ ಹಣವೆಲ್ಲ ನಂದೆಂದ ರೇವಣ್ಣ!

ಹಾಸನಕ್ಕೆ ಸಚಿವ ರೇವಣ್ಣ ಏನು ಮಾಡಿದ? ಏನೇನೂ ಇಲ್ಲ. ಆದರೂ ರೇವಣ್ಣನ ಸಾಧನೆಗಳ ಪಟ್ಟಿ ದೊಡ್ಡದೇ ಇದೆ. ಯಾಕೆಂದರೆ ಕೇಂದ್ರ ಸರ್ಕಾರದ ಯೋಜನೆಗಳೆಲ್ಲವನ್ನೂ ರಾಜ್ಯ ಸರ್ಕಾರದ ಯೋಜನೆಗಳೆಂಬಂತೆ ಬಿಂಬಿಸುವುದೇ ರೇವಣ್ಣನ ಹೊಸ ವರಸೆ!

ಈ ಹಿಂದೆ ಜಿ. ಪುಟ್ಟಸ್ವಾಮಿಗೌಡ ಕೇಂದ್ರದಿಂದ ಚನ್ನಪಟ್ಟಣ ಕೆರೆ ಅಭಿವೃದ್ಧಿಗೆಂದು ನಾಲ್ಕು ಕೋಟಿ ರೂ.ಅನುದಾನ ತಂದಿದ್ದರಲ್ಲ? ಈಗ ನೋಡಿದರೆ ರೇವಣ್ಣನ ಉಸ್ತುವಾರಿಯಲ್ಲಿ ಚನ್ನಪಟ್ಟಣ ಕೆರೆಯನ್ನು 'ಸರೋವರ' ಮಾಡುವ ಯೋಜನೆ ಮುಗಿದಿದೆ. ನೋಡಿದರೆ ಅಲ್ಯಾವ ಸರೋವರವೂ ಇಲ್ಲ. ಒಂದಿಷ್ಟು ಲಕ್ಷ ಖರ್ಚು ಮಾಡಿದ ರೇವಣ್ಣನ ಪಟಾಲಂ ನಗರಾಭಿವೃದ್ಧಿ ಇಲಾಖೆಯಿಂದಾನೂ ಹಣ ಪಡೆದು ಕೆರೆ ಅಭಿವೃದ್ಧಿ ಮಾಡಿದ್ದೇವೆ ಎಂದು ರೀಲು ಬಿಡುತ್ತಾ ಇದು ರಾಜ್ಯ ಸರ್ಕಾರದ ಯೋಜನೆ ಎಂಬಂತೆ ಮಾತಾಡುತ್ತಿದೆ.



ಡೈರಿ ಸರ್ಕಲ್ಲಿನಲ್ಲಿ ನಗರ ಬಿಟ್ಟು ಹೊರಗೆ ಸಂಧಿಸುವ ರಾಷ್ಟ್ರೀಯ ಹೆದ್ದಾರಿಗೆ ಸೇರುವ ಒಂದು ರಿಂಗ್ ರಸ್ತೆಯ ಕೆಲಸದ ಕಂಟ್ರಾಕ್ಟನ್ನು ರೇವಣ್ಣನ ಶಿಷ್ಯ ಹೊಳೆನರಸೀಪುರದ ಕಳ್ಳ ಕೃಷ್ಣ ಮಾಡಿದ್ದು, ಡೈರಿ ಸರ್ಕಲ್ಲಿನಿಂದ ಸಾಲಗಾಮೆ ರಸ್ತೆಯವರೆಗೆ ಮಾತ್ರ ಕೆಲಸವಾಗಿದೆ.

ಇಲ್ಲೇನಾದರೂ ಶಾಸಕ ತಿರುಗಾಟ ಶುರುವಾದರೆ ಮೂರೇ ತಿಂಗಳಲ್ಲಿ ಕಾಮಗಾರಿಯ ಬಂಡವಾಳ ಬಯಲಾಗಲಿದೆ. ಬೆಂಗಳೂರಿನಿಂದ ಮಂಗಳೂರಿಗೆ ಚತುಷ್ಪಥ ರಸ್ತೆ ಕಾಗದದಲ್ಲೇ ಉಳಿದಿದೆ. ಲೋಕೋಪಯೋಗಿ ಇಲಾಖೆ ಸಚಿವ ರೇವಣ್ಣ ಹಾಸನಕ್ಕೆ ಮಾಡಿದ್ದು ಸೊನ್ನೆ ಎಂಬುದಕ್ಕಿಷ್ಟೇ ಸಾಕು.

ಕೇಂದ್ರ ಸರ್ಕಾರದ ಸರ್ವ ಶಿಕ್ಷಣ ಅಭಿಯಾನ ಫಂಡ್, ರಾಜೀವ್ ವಿದ್ಯುತ್ ಯೋಜನೆ, ನಬಾರ್ಡ್ ಯೋಜನೆ, ರಾಷ್ಟ್ರೀಯ ಹೆದ್ದಾರಿ ಯೋಜನೆ... ಮುಂತಾದ ಕೇಂದ್ರದ ಯೋಜನೆಗಳೆಲ್ಲ ತಮ್ಮವೇ ಎನ್ನುತ್ತಾರೆ ರೇವಣ್ಣ. ವಿದರ್ಭ ಪ್ಯಾಕೇಜ್‌ನ 1578 ಕೋಟಿ ರೂಪಾಯಿಗಳಲ್ಲಿ 400 ಕೋಟಿ ರೂ.ಗಳನ್ನು ಸಾಲ ಬಡ್ಡಿ ಮನ್ನಾಕ್ಕೆ ಉಪಯೋಗಿಸಲಾಗಿದೆ. ರಾಜ್ಯ ಬಜೆಟ್‌ನಿಂದ ರೇವಣ್ಣ ಕಡಿದಿದ್ದು ಏನು?

ಯಗಚಿ ನಾಲೆಯ ಕಾರ್ಯ ಮುಗಿಯಲೇ ಇಲ್ಲ. 14 ಏತ ನೀರಾವರಿ ಯೋಜನೆಗಳಲ್ಲಿ ಒಂದೇ ಒಂದು ಯೋಜನೆ ಅನುಷ್ಠಾನಗೊಂಡಿಲ್ಲ. ಹೊಳೆನರಸೀಪುರದ ಹುಚ್ಚನಕೊಪ್ಪಲು ಏತ ನೀರಾವರಿ ಯೋಜನೆಯೊಂದಕ್ಕೆ ರೇವಣ್ಣನ ಕಾರ್ಯ ಸ್ಥಗಿತ.


-ಹಾ.ನಾ. ಪ್ರಸನ್ನಕುಮಾರ್

ಖೊಟ್ಟಿ ಆರ್‌ಟಿಓ ದಾಖಲೆ ಸಿಕ್ಕವರು, ಪಾರಾದವರು...

ಗುಜರಿ ಆಟೋರಿಕ್ಷಾಗಳಿಗೆ ಖೊಟ್ಟಿ ಆರ್.ಸಿ. ಬುಕ್ ರೆಡಿ ಮಾಡಿ ಮಾರುತ್ತಿದ್ದ ದೊಡ್ಡ ನೆಟ್‌ವರ್ಕೊಂದು ಪೊಲೀಸರ ಕೈಗೆ ಸಿಕ್ಕುಬಿದ್ದಿದೆ. ಆದರೆ ಜಾಲದ ರೂವಾರಿ ಶಾಸಕ ಜಬ್ಬಾರ್‌ಖಾನ್ ಹೊನ್ನಳ್ಳಿಯ ಆಶೀರ್ವಾದದಿಂದ ಹುಬ್ಬಳ್ಳಿಯಲ್ಲೇ ಅಡ್ಡಾಡಿಕೊಂಡಿದ್ದಾನೆ.



ಮಹಾರಾಷ್ಟ್ರದಲ್ಲಿ ನೊಂದಣಿಗೊಂಡ ರಿಕ್ಷಾಗಳು ಉಪಯೋಗಕ್ಕೆ ಬಾರದವು ಎಂದು ಅಲ್ಲಿನ ಪ್ರಾದೇಶಿಕ ಕಚೇರಿಯಲ್ಲಿ ಸರ್ಟಿಫಿಕೇಟ್ ಪಡೆಯುವ ದಲ್ಲಾಳಿಗಳು ಅಂತಹ ಆಟೋಗಳನ್ನು 5 ರಿಂದ 10 ಸಾವಿರಕ್ಕೆ ಖರೀದಿಸಿ ಹುಬ್ಬಳ್ಳಿಯಂತ ನಗರಗಳಿಗೆ ರವಾನಿಸುತ್ತಿದ್ದಾರೆ. ಇಲ್ಲಿ ಅವುಗಳಿಗೆ ಕರ್ನಾಟಕದ ಖೊಟ್ಟಿ ಆರ್.ಸಿ. ದಾಖಲೆಗಳನ್ನು ಸೃಷ್ಟಿಸಿ, ಹೊಸದಾಗಿ ಬಣ್ಣ ಹೊಡೆದು 20 ರಿಂದ 25 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು. ಈ ದಂಧೆಯ ರೂವಾರಿಗಳಾದ ಮುಂಬಯಿ ಮೂಲದ ಅಫ್ತಾಬ್ ಅಹ್ಮದ್ ಶೇಖ್ ಹಾಗೂ ಫರಾನ್ ಅಹ್ಮದ್ ಶೇಖ್ ಎಂಬ ಅಪ್ಪ ಮಗ, ಹುಬ್ಬಳ್ಳಿಯ ಗಣೇಶ ಪೇಟೆಯ ಬಂದರಗಿ ಓಣಿಯ ಮೆಹಬೂಬ ಸಾಬ್ ದೊರೆವಾಲೆ, ಕೇಶ್ವಾಪೂರದ ನಿಜಾಮಲಿ ಜಕಾಲೆಗಳನ್ನು ಬಂಧಿಸಿ ಜೈಲಿಗಟ್ಟಲಾಗಿದೆ. ಆದರೆ ಮಹಾ ಖದೀಮ ಅಲ್ಲಾಭಕ್ಷ ಶೇಖ್ ಶಾಸಕ ಹೊನ್ನಳ್ಳಿಯ ಬಾಲ, ಖೊಟ್ಟಿ ದಾಖಲೆಗಳ ಸೃಷ್ಟಿಸುವ RTO ಏಜೆಂಟ್ ಇಮ್ತಿಯಾಜ್ ಜಮಾದಾರನ ನೆರವಿನಿಂದ ಪೊಲೀಸರ ಜೊತೆ ಡೀಲು ಕುದುರಿಸಿ ಜೈಲಿಂದ ಹೊರಬಿದ್ದೇ ಬಿಟ್ಟಿದ್ದಾನೆ. ಹೊನ್ನಳ್ಳಿಯ ಇನ್ನೊಬ್ಬ ಹಿಂಬಾಲಕ ಹಮೀದ್ ಬೈರಾತಿಯೂ ಈ ಡೀಲಿನಲ್ಲಿ ಭಾಗಿ. ಕೇಸು ಮುಚ್ಚಲು 1 ಲಕ್ಷ 20 ಸಾವಿರ ರೂ.ಗಳ ಡೀಲಾಗಿದ್ದು, ಅಫ್ತಾಬ್ ಶೇಖ್, ಫರ್ಹಾನ್ ಶೇಖ್ 20 ಸಾವಿರ ರೂ. ಅಡ್ವಾನ್ಸ್ ಕೊಟ್ಟಿದ್ದಾರಂತೆ. ಇವರ ಸಂಬಂಧಿಕನೇ ಆದ ಅಲ್ಲಾಭಕ್ಷಶೇಖ್ ಮಾತ್ರ, ಕುತಂತ್ರದಿಂದ ಹೊರಬಂದಿದ್ದಾನೆ.



ಶೇಖ್ ಫರ್ಹಾನ್ ಮತ್ತು ಅಹ್ಮದ್ ಶೇಖ್‌ಗಳು ಸಂಬಂಧಿಗಳು. ಒಮ್ಮೆಲೇ ಶ್ರೀಮಂತನಾಗುವ ಬಯಕೆಯ ಅಲ್ಲಾಭಕ್ಷ ಮುಂಬೈವಾಲಾಗಳೊಂದಿಗೆ ಕೈಜೋಡಿಸಿದ್ದಾನೆ. ಇವರಿಗೆ ನಕಲಿ ಆರ್.ಸಿ. ಬುಕ್‌ಗಳನ್ನು ತಯ್ಯಾರಿಸಿ ಕೊಡುತ್ತಿದ್ದವನು 30 ವರ್ಷಗಳಿಂದ ಆರ್‌ಟಿಓ ಏಜಂಟನಾಗಿರುವ ಇಮ್ತಿಯಾಜ್ ಜಮಾದಾರ್. ಆಟೋಗಳಿಗೆ ನಕಲಿ ಚಾಸ್ಸಿ ನಂಬರ್, ಎಂಜಿನ್ ನಂಬರ್‌ಗಳನ್ನು ಪಂಚ್ ಮಾಡುತ್ತಿದ್ದವನು ಹಳೆಹುಬ್ಬಳ್ಳಿಯ ಮಾಬೂಬ್ ಮೇಸ್ತ್ರಿ. ಅಲ್ಲಾಭಕ್ಷ, ಇಮ್ತಿಯಾಜ್, ಮಾಬೂಬ್ ಮೇಸ್ತ್ರಿಗಳಿಗೆ ಶಾಸಕ ಹೊನ್ನಳ್ಳಿಯ ಬೆಂಬಲ ಇರುವುದರಿಂದ ಗೋಕುಲ ಠಾಣೆ ಪೊಲೀಸರು ಅವರನ್ನು ಮುಟ್ಟುತ್ತಿಲ್ಲ. ಮಾಬೂಬ್ ಮೇಸ್ತ್ರಿಯಿಂದ 5 ಸಾವಿರ ತಿಂದು ಸರ್ಕಾರಿ ಸಾಕ್ಷಿಯನ್ನಾಗಿ ಮಾಡಿದ್ದಾರೆ.

ಇದೇ ತಿಂಗಳು 6 ರಂದು ಮುಂಬೈಯಿಂದ ಬಂದಿಳಿದ ಅಫ್ತಾಬ್, ಫರಾನ್‌ಗಳು 8 ಗುಜರಿ ಆಟೋಗಳನ್ನು ತಂದಿದ್ದಾರೆ. ಅಲ್ಲಾಭಕ್ಷ ಶೇಖ್, ಮೆಹಬೂಬ್ ಸಾಬ್ ದೋರೆವಾಲೆ, ನಿಜಾಮಲಿ ಜಕಾತಿಗಳ ಮೂಲಕ ಆಟೋಗಳನ್ನು ಮಾರಿದ್ದಾರೆ. ಖರೀದಿ ಮಾಡಿದವರಿಗೆ ಪಾಸಿಂಗ್ ಮಾಡಿಸಿ ಅವರ ಹೆಸರಿಗೆ ಟ್ರಾನ್ಸ್‌ಫರ್ ಮಾಡಿಕೊಡುವುದಾಗಿ ಆರ್‌ಟಿಓ ಏಜೆಂಟ್ ಜಮಾದಾರ ಭರವಸೆಯಿತ್ತಿದ್ದಾನೆ.

MH/02x7701 ಮತ್ತು MH/03V742 ನಂಬರುಗಳ ಆರ್.ಸಿ. ಬುಕ್, ಫಿಟ್‌ನೆಸ್ ಸರ್ಟಿಫಿಕೆಟ್, ಇನ್ಶೂರೆನ್ಸ್ ಸರ್ಟಿಫಿಕೇಟ್, ಟ್ಯಾಕ್ಸ್ ಕಾರ್ಡ್, ಟ್ರಾನ್ಸ್‌ಫರ್ ಅಪ್ಲಿಕೇಷನ್‌ಗಳನ್ನೆಲ್ಲ ರೆಡಿ ಮಾಡಿ, ಇನ್ನೇನು ಮುಂಬಯಿಗೆ ಜಿಗಿಯಬೇಕು ಎನ್ನುವಷ್ಟರಲ್ಲಿ ಗೋಕುಲ ಪೊಲೀಸರ ಕೈಗೆ ಸಿಕ್ಕಿಬಿದ್ದಿವೆ.

ಹುಬ್ಬಳ್ಳಿ

ಆದರೆ ಅಲ್ಲಾಭಕ್ಷನನ್ನು ಪೊಲೀಸರು ಬಿಟ್ಟುಬಿಟ್ಟಿದ್ದಾರೆ. ಕೈಕೋಳ ತೊಡಿಸಿ ಫೋಟೋ ತೆಗೆಯುವುದನ್ನು ಬಿಟ್ಟು ಪೊಲೀಸರು ಡೀಲಿನ ಹಣ 1 ಲಕ್ಷ ಬಾಕಿ ಬಂದರೆ ಕೇಸನ್ನೇ ಮುಚ್ಚಿ ಹಾಕಲಿದ್ದಾರೆ.


ನಕಲಿ ದಾಖಲೆ ಸೃಷ್ಟಿಸುವ ಇಮ್ತಿಯಾಜ್ ಜಮಾದಾರ ಯಾರ ಸಹಿ ಬೇಕಾದರೂ ಮಾಡಬಲ್ಲ...

-ವರದಿಗಾರ

ಎಡವಟ್ಟು... ಕಂತೆಗಳು

ಸಾಲಿಮಠನ ಖೋಟಾನೋಟಿನ ದಂಧೆ

ಕರೀಂಲಾಲಾ ತೆಲಗಿ ರಾಜ್ಯದಲ್ಲಿ ಛಾಪಾ ಕಾಗದ ಹಗರಣದ ದಾಖಲೆಗಳನ್ನೇ ಸ್ಥಾಪಿಸಿದ. ಲೇಟೆಸ್ಟ್ ಸುದ್ದಿ ಏನೆಂದರೆ, ಈಗ ಹಾವೇರಿಯಲ್ಲಿ ಕಾಂಗ್ರೆಸ್ ಪಕ್ಷದ ಬಾಯಿಬಡುಕ ಮುಖಂಡ ರಾಜಶೇಖರ ಅಲಿಯಾಸ್ ರಾಜಣ್ಣ ಸಾಲಿಮಠ ಎಂಬಾತ ಜಿಲ್ಲೆಯಲ್ಲಿ ಖೋಟಾನೋಟಿನ ದಾಖಲೆಯನ್ನು ಸ್ಥಾಪಿಸಲು ಹೋಗಿ ಪೊಲೀಸರಿಗೆ ಸಿಕ್ಕಿಬಿದ್ದು ಸ್ಥಳೀಯ ಕಾಂಗ್ರೆಸ್ ಪಕ್ಷದ ನಾಯಕರಿಗೆ ಕೋಳದ ಭಯ ಹುಟ್ಟಿಸಿದ್ದಾನೆ.


ಸಿಪಿಐ ಅರವಿಂದ್

ಜಿಲ್ಲೆಯಲ್ಲಿ ಸಂಪೂರ್ಣವಾಗಿ ಕಾಂಗ್ರೆಸ್ ಪಕ್ಷ ನೆಲಕಚ್ಚಿರುವುದರಿಂದ ಕೆಲಸವಿಲ್ಲದೇ ಖಾಲಿ ಕೂತಿದ್ದ ಕಾಂಗ್ರೆಸ್ ನಾಯಕರಲ್ಲಿ ಈಗ ಈ ಸಾಲಿಮಠ ಎಂತಹ ಭಯ ಸೃಷ್ಟಿಸಿದ್ದಾನೆಂದರೆ, ಕಾಂಗ್ರೆಸ್‌ನ ಆರು ಮಾಜಿ ಶಾಸಕರು ಖೋಟಾನೋಟಿನ ಕರಿನೆರಳಿಗೆ ನಿದ್ದೆಗೆಟ್ಟು ಒದ್ದಾಡುತ್ತಿದ್ದಾರೆ. ಅದರಲ್ಲೂ ಶರಣ ತತ್ವದ, ಮಾಜಿ ಸಂಸದ ಹಾಗೂ ಜಿಲ್ಲಾ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಐ.ಜಿ. ಸನದಿಯಂತೂ ಸಾಲಿಮಠನನ್ನು ಬಚಾವು ಮಾಡಲು ಅದ್ಯಾವ ವಚನ ಹೇಳಬೇಕು ಎಂದು ಮೈಕೈ ಪರಚಿಕೊಳ್ಳುತ್ತಿದ್ದಾನೆ.

ಯಾರು ಈ ಸಾಲಿಮಠ!

ಹಾನಗಲ್ ತಾಲೂಕಿನ ಅಕ್ಕಿ ಆಲೂರ ಗ್ರಾಮದ ಪಕ್ಕಾ ಜಂಗಮ ಕುಟುಂಬದಲ್ಲಿ ಹುಟ್ಟಿದ ಸಾಲಿಮಠ ವಿಧಾನಸಭೆಯ ಮಾಜಿ ಉಪಸಭಾಪತಿ ಮನೋಹರ ತಹಶೀಲ್ದಾರರ ಖಾಸಾದೋಸ್ತ್. ಒಂದು ಕಾಲದಲ್ಲಿ 'ಮೂಗುತಿ' ವ್ಯಾಮೋಹದಿಂದಾಗಿ ಬೆಳೆದ ಈ ದೋಸ್ತಿ ಕ್ರಮೇಣ ರಾಜಕಾರಣಕ್ಕೆ ಬಂದು ಇಡೀ ಹಾನಗಲ್ ತಾಲೂಕನ್ನು ಹಾಳುಗೆಡವಿದ ಕೀರ್ತಿಗೆ ಪಾತ್ರವಾಗಿದೆ. ಹಾಲಿ ಚಿಡ್ಡಿ ಮಂತ್ರಿ ಸಿ.ಎಂ. ಉದಾಸಿಯೊಂದಿಗೆ ಖಾಯಂ ಜಗಳವಾಡಿದ ಈ 'ಸಂಗ್ಯಾ ಬಾಳ್ಯಾ' ಜೋಡಿ ಇಂದು ಖೋಟಾನೋಟಿನ ಕೇಸಿನಲ್ಲಿ ಸಿಕ್ಕಿಹಾಕಿಕೊಂಡು ಉದಾಸಿಯ ಪವರ್‌ಗೆ ಬಲಿ ಆಗಿದೆ.

ಅಧಿಕಾರದಲ್ಲಿದ್ದಾಗ ಮಾಡಿದ ದುಡ್ಡನ್ನು 'ಮೂಗುತಿ'ಗಳಿಗೆ ಚೆಲ್ಲಿ ಫುಟ್‌ಪಾತ್ ಹಂತದಲ್ಲಿದ್ದ ರಾಜಣ್ಣ ಸಾಲಿಮಠ ಖೋಟಾನೋಟು ದಂಧೆಯನ್ನು ಪ್ರವೇಶಿಸಿದ್ದೇ ಹಡಬೆ ಹಣ ಗಳಿಸುವ ಖಯಾಲಿಯಿಂದಾಗಿ. ತನ್ನ ದೋಸ್ತ್ ತಹಶೀಲ್ದಾರನ ರಾಜಕೀಯ ಪವರ್‌ನಿಂದ ಒಂದು ಕಾಲದಲ್ಲಿ ಬ್ಲಾಕ್ ಕಾಂಗ್ರೆಸ್‌ಗೆ ಅಧ್ಯಕ್ಷನಾಗಿ, ಆಶ್ರಯ ಸಮಿತಿಯ ಅಧ್ಯಕ್ಷನಾಗಿ ಹಗಲು ದರೋಡೆ ಮಾಡಿದ್ದ ಸಾಲಿಮಠ ಎಂಥವನೆಂದರೆ, ಆತ ಮೈಕ್ ಮುಂದೆ ನಿಂತರೆ ಆತನ ಬಾಯಿಂದ ಬರೀ ಕೊಳಕು ಮಾತುಗಳೇ ಹೊರಡುತ್ತಿದ್ದವು. ಇವನ ಈ ಹೊಲಸು ಮಾತಿಗೆ ರೋಸಿ ಹೋದ ಜನ ಕ್ಯಾಕರಿಸಿ ಉಗಿದು ಅಕ್ಕಿ ಆಲೂರಿನಿಂದ ಜಾಗ ಖಾಲಿ ಮಾಡಿಸಿ ಹಾನಗಲ್‌ಗೆ ದೂಡಿದ್ದರು.

ಬಯಲಿಗೆ ಬಂದ ದಂಧೆ

ಸಾಲಿಮಠನ ಖೋಟಾನೋಟಿನ ದಂಧೆಯಲ್ಲಿ ಡಾ. ವೀರಣ್ಣ ಕಳಸದನ ಪಾತ್ರವೂ ಇದೆ. ಹಾನಗಲ್ ಮಾರ್ಕೆಟನಲ್ಲಿ ಕ್ಲಿನಿಕ್ ನಡೆಸುತ್ತಿರುವ ಕಳಸದ ಎಂಬ ನಕಲಿವೈದ್ಯ ಎಂತಹವನೆಂದರೆ, ಈತ ಬಾಯಿ ತೆರೆದರೆ ಸಾಕು ಸಾರಾಯಿ ವಾಸನೆ ಹೊರಡುತ್ತದೆ. ಸಣ್ಣದೊಂದು ರೂಮಿನಲ್ಲಿ ಒಂದು ಕಾಟು, ನಾಲ್ಕು ಕತ್ತರಿ ಇಟ್ಟುಕೊಂಡು, ಗೋಡೆಗೆ ಎಂ.ಡಿ, ಎಂ.ಎಸ್ ಡಾಕ್ಟರು ಎಂಬ ಬೋರ್ಡ್ ತಗಲಿಸಿಕೊಂಡು, ಹೋಗಿಬಂದಲ್ಲೆಲ್ಲ ಪಾನ್ ಉಗುಳುತ್ತಿದ್ದ ಈ ವೈದ್ಯನೇ ಖೋಟಾನೋಟಿನ ಜಾಲದ ಕಿಂಗ್‌ಪಿನ್ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಅದು ಬಯಲಿಗೆ ಬಂದಿದ್ದು ಹೀಗೆ......

ಕಳೆದ ಡಿಸೆಂಬರ್ ತಿಂಗಳಲ್ಲಿ ಈ ನಕಲಿ ವೈದ್ಯ ಕಳಸದ, ರಾಜಣ್ಣ ಸಾಲಿಮಠನಿಗೆ ಅನಾಮತ್ತು ಮೂವತ್ತು ಸಾವಿರ ರೂಪಾಯಿಗಳ ಖೋಟಾನೋಟುಗಳನ್ನು ಹಾಫ್ ರೇಟಿಗೆ ಕೊಟ್ಟಿದ್ದಾನೆ. ಆ ಹಣವನ್ನು ಇದೇ ತಿಂಗಳ ನಾಲ್ಕನೆ ತಾರೀಖು ಸಾಲಿಮಠ ತನ್ನ ಶಿಷ್ಯ ರಾಘವೇಂದ್ರ ಮಡಿವಾಳರ ಮತ್ತು ಅಳಿಯ ಕ್ಯಾಸನೂರಿನ ಪ್ರವೀಣ ಗೋವಿನಾಳಮಠ ಎಂಬ ಇಬ್ಬರಿಗೆ ಕೊಟ್ಟು, ತಿಳವಳ್ಳಿ ಗ್ರಾಮದಲ್ಲಿ ಮಾರ್ಕೆಟಿಂಗ್ ಮಾಡಲು ಬಿಟ್ಟಿದ್ದಾನೆ. ಆದರೆ, ಈ ದಂಧೆಗೆ ಹೊಸಬರಾದ ಮಡಿವಾಳರ ಮತ್ತು ಗೋವಿನಾಳಮಠ ಸಂಶಯ ಬರುವ ರೀತಿಯಲ್ಲಿ ವರ್ತಿಸಿದ್ದರಿಂದ, ಜನ ಅವರಿಬ್ಬರನ್ನು ಆಡೂರ ಠಾಣೆಯ ಎಸ್.ಐ. ಚಿದಾನಂದರಿಗೆ ಒಪ್ಪಿಸಿದ್ದಾರೆ. ಅವರಿಬ್ಬರಿಗೆ ಠಾಣೆಯಲ್ಲಿ ಲಾಠಿ ರುಚಿ ಸಿಗುತ್ತಿದ್ದಂತೆ ಅವರು ಸಾಲಿಮಠನ ಹೆಸರನ್ನು ಹೇಳಿದ್ದಾರೆ. ಅದನ್ನು ಕೇಳಿ ಪೊಲೀಸರಿಗೇ ಅಚ್ಚರಿಯಾಗಿದೆ.

ಅಂದೇ ಸಾಲಿಮಠನನ್ನು ಬಂಧಿಸಲು ಪೊಲೀಸರು ತಯಾರಿ ನಡೆಸಿದ್ದಾರೆ. ಸಿ.ಪಿ.ಐ. ಅರವಿಂದ ಕಲಗುಜ್ಜಿ ರಾತ್ರಿ ಎಂಟು ಗಂಟೆಗೆ ಸಾಲಿಮಠನಿಗೆ ಫೋನ್ ಮಾಡಿ "ಸ್ವಲ್ಪ ಮಾತನಾಡುವುದಿದೆ. ಸ್ಟೇಶನ್ನಿಗೆ ಬಂದು ಹೋಗಿ" ಎಂದರೆ, "ಈಗ ಆಗಲ್ಲ, ನಾಳೆ, ನಾಡಿದ್ದು ಬಂದು ಹೋಗ್ತೀನಿ. ನಾ ಊರಾಗ ಇಲ್ಲ, ಬರಾಕ್ ಹೋಗಬ್ಯಾಡ್ರಿ" ಎಂದೆಲ್ಲ ಸಾಲಿಮಠ ನಖರಾ ಮಾಡಿದ್ದಾನೆ. ಆದರೂ ಪೊಲೀಸರು ನಡು ರಾತ್ರಿ ಎರಡು ಗಂಟೆಗೆ ಅವನ ಮನೆಗೆ ನುಗ್ಗಿ ಅವನನ್ನು ಹೊರಗೆಳೆದಾಗ "ಎಷ್ಟು ಬೇಕು ಹೇಳಿ ಸರಿ ಮಾಡಿಕೊಳ್ಳಿ" ಎಂದು ಸಿ.ಪಿ.ಐ ಅರವಿಂದ ಕಲಗುಜ್ಜಿಗೆ ಹೇಳುವ ಮೂಲಕ ತಾನೂ ಈ ಖೋಟಾ ದಂಧೆಯಲ್ಲಿ ಶಾಮೀಲು ಎಂಬುದನ್ನು ಹೊರಗೆಡವಿದ್ದಾನೆ. ಅಷ್ಟೇ ಅಲ್ಲ, ಆತನನ್ನು ಹತ್ತಿರದ ಹೊಂಕಣ ನಿರೀಕ್ಷಣಾ ಮಂದಿರಕ್ಕೆ ಕರೆದುಕೊಂಡು ಹೋಗಿ ಪೊಲೀಸರು ತಮ್ಮ ಆತಿಥ್ಯ ನೀಡಿದಾಗ ನಕಲಿ ವೈದ್ಯ ಕಳಸದನ ಹೆಸರು ಸೇರಿದಂತೆ, ಪ್ರಿಂಟಿಂಗು, ಮಾರ್ಕೆಟಿಂಗು ಎಂದೆಲ್ಲ ಕಕ್ಕಿದ್ದಾನೆ. ಆಗ ಮಾಜಿ ಉಪಸಭಾಪತಿ ತಹಶೀಲ್ದಾರನ ತಳಕ್ಕೇ ಬಿಸಿ ಮುಟ್ಟಿದೆ.

ಹಾವೇರಿ


ಪ್ರವೀಣ ರಾಘವೇಂದ್ರ ರಾಜಣ್ಣ

ಖೋಟಾನೋಟು ಪ್ರಿಂಟಾಗಿದ್ದು ಹಾವೇರಿಯಲ್ಲಿ

ಕಂಪ್ಯೂಟರಿನಲ್ಲಿ ಯಾವುದೇ ಪದವಿ ಇಲ್ಲದಿದ್ದರೂ ತಾನೊರ್ವ ಡಿಜಿಟಲ್ ಡಿಸೈನರ್ ಎಂದು ಕರೆದುಕೊಳ್ಳುವ ಶರಣ ಹಿರೇಮಠ ಎಂಬಾತನೇ ಈ ಖೋಟಾನೋಟುಗಳ ಜನಕ. ತನ್ನ ಬ್ಯಾಗಿನಲ್ಲಿ ಖಾಯಂ ಆಗಿ ಐವತ್ತು ಸೀಡಿಗಳನ್ನು ಇಟ್ಟುಕೊಂಡು ಸಾಫ್ಟವೇರ್ ಇನ್‌ಸ್ಟಾಲ್ ಎಂದೆಲ್ಲ ತಿರುಗುತ್ತಿದ್ದ ಹಿರೇಮಠ ಕಳೆದ ವರ್ಷದ ಅಂತ್ಯದಲ್ಲಿ ಈ ದಂಧೆಗೆ ಧುಮುಕಿದ. ಆಗ ಇವನಿಗೆ ಸಾಥ್ ಆಗಿ ನಿಂತವನು ಮಲ್ಲಿಕಾರ್ಜುನ ಗೌಡ ಅಲಿಯಾಸ್ ಅರ್ಜುನ ಗೌಡ.. ಇವರಿಬ್ಬರು ಸೇರಿ ಹಾವೇರಿಯ ಬಸವೇಶ್ವರ ನಗರದ ... ರಲ್ಲಿ ನೂರರ ಮುಖಬೆಲೆಯ ಖೋಟಾ... ತಯಾರಿಸಲಾರಂಭಿಸಿದರು. ಅಂದಹಾಗೆ, ... ನಿಗೆ ಕರೀಂಲಾಲಾನ ಚೇಲಾ ಸುಲೈಮಾನನ ... ಇತ್ತು ಎಂಬುದು ಈಗ ಬಯಲುಗೊಂ...

ಸುಮಾರು ಹತ್ತು ಲ... ಖೋಟಾನೋಟುಗಳನ್ನು ... ಇವರು ಅವನ್ನು ... ಮಾಡುವ ಜವಾಬ್ದಾರಿ... ಮಠ ಮತ್ತು ಕಳಸದನಿಗೆ ವಹಿಸಿ... ಸಾಲಿಮಠನ ಶಿಷ್ಯ ಮತ್ತು ಅಳಿಯನ ಎಡ... ಇವರ ದಂಧೆ ಹೊರಬಿದ್ದು, ಸಾಲಿ... ಎಣಿಸುವಂತಾಗಿದೆಯಲ್ಲದೆ, ಮೊನ್ನೆ ಜನವರಿ... ತಾರೀಖು ಕಳಸದ ಮತ್ತು ಮಲ್ಲಿಕಾರ್ಜು... ಪೊಲೀಸರ ಕೈಗೆ ಸಿಕ್ಕುಬಿದ್ದಿ... ಶರಣ ಹಿರೇಮಠನನ್ನು ಹಿಡಿ... ವಿಂದ ಕಲಗುಜ್ಜಿ ಹಗಲು ರಾ... ಕಾಡುತ್ತಿದ್ದಾರೆ. ಆದರೆ ಇದ... ತನಗೂ ಸಂಬಂಧವೇ ಇಲ್ಲವೆಂ... ಮಠ ಬೀದರ್‌ನಲ್ಲಿರುವ ತನ್ನ ... ಮನೆಯಲ್ಲಿ 'ವಿಶ್ರಾಂತಿ' ಪಡೆ... ಎಂಬ ಪುಕಾರುಗಳಿವೆ.

ಅದೆಲ್ಲ ಬದಿಗಿರಲಿ, ಸಾಲಿ... ಸಾಹಸದಿಂದಾಗಿ ಹಾವೇರಿಯ... ಸ್ಥಿತಿಯಂತೂ ಚಿಂತಾಜನಕವಾ... ಸೋತು ಸುಣ್ಣಗಾಗಿರುವ ಕಾಂ... ಜನ ಮಾಜಿ ಶಾಸಕರಿಗಂತೂ ಏನು ಮಾಡಬ... ತೋಚದಂತಾಗಿದೆ. ಸದಾ ಸಾಲಿಮಠನ... ಬಗಲಲ್ಲಿಟ್ಟುಕೊಂಡು ಓಡಾಡುತ್ತಿದ್ದ ತ... ಮುಂದೇನು ಎಂದು ಚಿಂತಿಸುವಂತಾಗಿದೆ. ಖೋಟಾನೋಟಿನ ದಂಧೆಯಲ್ಲಿದ್ದಾ? ಅ... ರಿಗೆ ಏನು ಹೇಳಿದಾ? ನನ್ನ ಹೆಸರನ್ನೇನಾ... ಎಂದೆಲ್ಲ ಚಡಪಡಿಸುತ್ತಿರುವ ಆತನಿಗೆ ... ಬಾರದಂತಾಗಿದೆ. ಸಧ್ಯಕ್ಕೆ ಅಧಿಕಾರವಿಲ್ಲದೆ ... ರುವ ತಹಶೀಲ್ದಾರನಿಗೆ ಆಕಸ್ಮಾತ್ ನಿದ್ದೆ ಬಂದರು... ನೋಟು ಕನಸಿನಲ್ಲೂ ಬರುತ್ತಿರುವುದಂತೂ ... ಹಾವೇರಿಯ ಜನ ನಗಾಡುತ್ತಿದ್ದಾರೆ. ಮುಂದಿನ... ಯಲ್ಲಿ ಜಿಲ್ಲಾ ಕಾಂಗ್ರೆಸ್ಸಿಗೆ ಕಾದಿರುವುದಂತು... ನೋಟಿನ ಬಿಸಿ ಎಂಬುದಂತೂ ಖಾತರಿಯ...

-ವ...

ವಿದ್ಯಾರ್ಥಿಯನ್ನು ಬಲಿ ತೆಗೆದುಕೊಂಡ ಜೀವರಾಜ್ ಸಂಬಂಧಿ

ಮೊಬೈಲ್ ಫೋನು ಪ್ರಕರಣವೊಂದು ಶೈಲಾಳ ಜೀವವನ್ನೇ ಬಲಿ ತೆಗೆದುಕೊಂಡಿದೆ. ಈ ಸಾವಿಗೆ ಹೊಣೆ ಎಂಬ ಆರೋಪ ಎದುರಿಸುತ್ತಿರುವ ಕನ್ನಡ ಉಪನ್ಯಾಸಕಿ ತಾರಾ ಶೃಂಗೇರಿ ಕ್ಷೇತ್ರದ ಶಾಸಕ ಜೀವರಾಜ್ ಸಂಬಂಧಿ ಎಂಬ ಕಾರಣಕ್ಕೆ ಇಡೀ ಪ್ರಕರಣ ರಾಜಕೀಯ ತಿರುವು ಪಡೆದುಕೊಂಡಿದೆ.

ಶೃಂಗೇರಿ

ಶೃಂಗೇರಿ ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಮೂಸೆ ಗಡಿಭಾಗದ ಕೊತಗೋಡು ಪಂಚಾಯತ್ ವ್ಯಾಪ್ತಿಯ ಶೈಲಾ ಎಂಬ ದಲಿತ ಹೆಣ್ಣು ಮಗಳು ಕಳೆದ ಡಿಸೆಂಬರ್ 15 ರಂದು ತನ್ನ ಸ್ನೇಹಿತರೊಂದಿಗೆ ಪಟ್ಟಣದ ಆಶಾ ಸ್ಟುಡಿಯೋದಲ್ಲಿ ಫೋಟೋ ತೆಗೆಸಲು ಹೋಗಿ ಸ್ಟುಡಿಯೋ ಮಾಲೀಕನ ಮೊಬೈಲ್ ಕದ್ದಿದ್ದಳು. ಒಂದೆರಡು ದಿನಗಳ ನಂತರ ಈ ವಿಷಯ ಎಲ್ಲರಿಗೂ ಗೊತ್ತಾಗಿ ಮನೆ, ಶಾಲೆ, ಸ್ನೇಹಿತರು, ಶಿಕ್ಷಕರಿಂದ ಅವಮಾನಗೊಂಡ ಶೈಲಾ ಪಕ್ಕದ ಮನೆಯ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಮೇಲ್ನೋಟಕ್ಕೆ ಇದೊಂದು ಆತ್ಮಹತ್ಯೆಯಾಗಿದ್ದರೂ ಇಡೀ ಪ್ರಕರಣದ ಹಿಂದೆ ಜಾತಿಯ ಕರಿನೆರಳಿನ ಚಿತ್ರಣವಿದೆ.

ಮೊಬೈಲ್ ಕಳೆದುಕೊಂಡ ಸ್ಟುಡಿಯೋ ಮಾಲೀಕ ಗುರು ದೂರು ದಾಖಲಿಸಿ ಹೊಸ ಸಿಮ್ ಕಾರ್ಡ್ ಪಡೆದುಕೊಂಡ. ಅತ್ತ ಕದ್ದ ಮೊಬೈಲ್‌ನಿಂದ ಸಿಮ್ ಕಾರ್ಡ್ ತೆಗೆಯಲು ಬಾರದೆ, ಶೈಲಾ ಮೊಬೈಲ್ ಉಪಯೋಗಿಸುತ್ತಿದ್ದಳು.

ಆದರೆ ಗುರು ಡೂಪ್ಲಿಕೇಟ್ ಸಿಮ್‌ಕಾರ್ಡ್ ಪಡೆದ ಮೇಲೆ ಶೈಲಾಳ ಸಿಮ್ ಉಪಯೋಗಕ್ಕೆ ಬಾರದಾಗಿದೆ. ಆಗಿದ್ದು ಇಲ್ಲೆ ಯಡವಟ್ಟು!

ಇದ್ದಕ್ಕಿದ್ದಂತೆ ಗುರುವಿನ ಡೂಪ್ಲಿಕೇಟ್ ನಂಬರಿಗೆ ಅದ್ಯಾರೋ "ಶೈಲಾ ಇದಾರ?" ಎಂದು ಕೇಳಿ ಕರೆಮಾಡಿದ್ದಾರೆ. ಅನುಮಾನಗೊಂಡ ಗುರು ಶೈಲಾ ಕಾಲೇಜಿನ ಪ್ರಾಂಶುಪಾಲೆ ಡಾ. ರಮಾಗೆ ದೂರು ನೀಡಿದ್ದಾರೆ.


ಶೈಲಾ

ಪ್ರಾಂಶುಪಾಲರು ಕಾಲೇಜಿಗೆ ಶೈಲಾಳ ತಂದೆ ಕರೆಸಿ, ವಿಚಾರ ತಿಳಿಸಿ ಶೈಲಾಳಿಂದ ಮೊಬೈಲ್ ವಶಪಡಿಸಿಕೊಂಡಿದ್ದಾರೆ. ಇಷ್ಟೇ ಆಗಿದ್ದರೆ ಮೊಬೈಲ್ ಕಳವು ಪ್ರಕರಣ ಸುಖಾಂತ್ಯ ಕಾಣುತಿತ್ತು, ಒಂದು ಜೀವ ಹೋಗುತ್ತಿರಲಿಲ್ಲ.

ಶೈಲಾ ಮೊಬೈಲ್ ಕದ್ದಿರುವುದು ಖಾತ್ರಿಯಾದ ಕೂಡಲೇ ಬುದ್ಧಿಮಾತು ಹೇಳಿ ಪ್ರಕರಣಕ್ಕೆ ತಿಲಾಂಜಲಿ ಹಾಡದೆ, ಕಾಲೇಜಿನ ಕನ್ನಡ ಉಪನ್ಯಾಸಕಿ ತಾರಾ ಶೈಲಾಳ ಸಹಪಾಠಿಯೊಬ್ಬಳನ್ನು ಶೈಲಾಳಿಗೆ ಕಪಾಳಮೋಕ್ಷ ಮಾಡುವಂತೆ ಪ್ರೇರೇಪಿಸಿದ್ದೂ ಅಲ್ಲದೇ, ಮೊಬೈಲ್ ಮಾಲೀಕ ಗುರುವಿನ ಕರೆನ್ಸಿ ಬಾಬ್ತು 400 ರೂ. ಮತ್ತು ಇತರೆ ವೆಚ್ಚ ಸೇರಿ ಒಟ್ಟು 1000 ರೂ. ನೀಡುವಂತೆ ಪತ್ರ ಬರೆದು ಅದಕ್ಕೆ ಶೈಲಾಳಿಂದ ಸಹಿ ಪಡೆದಿದ್ದಾಳೆ.


ಅದೂ ಸಾಕಾಗಲಿಲ್ಲ ಎಂಬಂತೆ ಪೋಷಕರು, ಸಹಪಾಠಿಗಳು ಉಪನ್ಯಾಸಕರ ಗುಂಪಿನ ನಡುವೆ ಶೈಲಾಳನ್ನು ನಿಲ್ಲಿಸಿ ಬಹಿರಂಗವಾಗಿ ಆಕೆಯ ದಲಿತ ಜಾತಿ ಆಧರಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಅಷ್ಟಾದರೂ ಸಮಾಧಾನವಾಗದ ತಾರಾ ಶೈಲಾಳ ಹಾಸ್ಟೆಲಿನ ವಾರ್ಡನ್ ಮೇಲೆ ಒತ್ತಡ ತಂದು ಅಂದೇ ಆಕೆಯನ್ನು ಹಾಸ್ಟೆಲ್‌ನಿಂದ ಹೊರ ಹಾಕಿಸಿ ಮಾನಸಿಕ ಹಿಂಸೆಗೆ ಶೈಲಾಳನ್ನು ದೂಡಿದಳೆಂಬುದೇ ಆಕೆಯ ಆತ್ಮಹತ್ಯೆ ನಿರ್ಧಾರಕ್ಕೆ ಮೂಲಕಾರಣವಾಗಿದೆ.

ಇಷ್ಟೆಲ್ಲಾ ಆಗಿದ್ದರೂ ತಾರಾ ತನ್ನ ಸಂಬಂಧಿ ಎಂಬ ಕಾರಣಕ್ಕೆ ಶಾಸಕ ಜೀವರಾಜ್ ಅವಳನ್ನು ಈ ಪ್ರಕರಣದಿಂದ ಬಚಾವು ಮಾಡಲು ನಡೆಸುತ್ತಿರುವ ಇನ್ನಿಲ್ಲದ ಪ್ರಯತ್ನಗಳು ಶೃಂಗೇರಿ ತುಂಬೆಲ್ಲಾ ಬಹಿರಂಗಗೊಂಡಿದೆ.

ಸುಮಾರು 15 ವರ್ಷಗಳ ಹಿಂದೆ ಇಲ್ಲಿನ ಜೆ.ಸಿ.ಬಿ.ಎಂ. ಕಾಲೇಜಿನಲ್ಲಿ ಹಂಗಾಮಿ ಕನ್ನಡ ಉಪನ್ಯಾಸಕಿಯಾಗಿದ್ದ ... ಹತ್ತಿರದ ಸಂಬಂಧಿ ವಿದ್ಯಾರ್ಥಿಯೊಬ್ಬ... ಯೊಂದಿಗೆ ಹೊಡೆದಾಟ ಆಡಿ ಅದು ... ತಿರುಗಿ ಕಾಲೇಜು ಮತ್ತು ಹಾಸ್ಟೆಲ್ ಬ... ಬಂದಾಗ, ಭಾರೀ ವಿರೋಧದ ನಡುವೆಯ... ಪ್ರಾಂಶುಪಾಲ ಕೃಷ್ಣಪ್ಪಯ್ಯ ಅವರೊಂದಿಗೆ ರಾ... ನಡೆಸಿ ಪ್ರಕರಣ ಮುಚ್ಚಿ ಹಾಕಿಸಿದ್ದಳು ಇದ...

ಸ್ಥಳೀಯಳಾದ ಸರ್ಕಾರಿ ಕೆಲಸದಲ್ಲಿರುವ ... ತಾರಾಳಿಗೆ ತಾನು ಶಾಸಕ ಜೀವರಾಜ್ ಮಾವ... ಎಂಬ ಹೆಗ್ಗಳಿಕೆ ಮತ್ತು ಒಕ್ಕಲಿಗಳಾದ್ದರಿಂದ ಈ... ತಮ್ಮ ಪ್ರಭಾವವಿದೆ ಎಂಬ ಅಹಂ ತುಂಬಿ ತು... ಈ ಕಾರಣಗಳಿಂದಾಗಿಯೇ ಆಕೆ ಆಗಾ... ವಿದ್ಯಾರ್ಥಿಗಳನ್ನು ಸಣ್ಣ ಕಾರಣ ಹಿಡಿದು... ಶಬ್ದಗಳಿಂದ ನಿಂದಿಸುವುದು, ಅವರ ಡ್ರೆಸ್... ಸಿಲ್ಲಿ ಕಾಮೆಂಟ್ ಮಾಡುವುದು ನಿರಂತರವಾ... ತ್ತಿದ್ದರೂ ಅವಳ ವಿರುದ್ಧ ಯಾವ ಕ್ರ... ತೆಗೆದುಕೊಳ್ಳದ ಹಿರಿಯ ಅಧಿಕಾರಿಗಳ... ಮೌನಕ್ಕೊಳಗಾಗಿದ್ದಾರೆ.

ಶೈಲಾಳ ಆತ್ಮಹತ್ಯೆ ಪ್ರಕರಣ ಕುರಿತಂತೆ ... ಪತ್ರಿಕೆಗಳು ಉಪನ್ಯಾಸಕಿ ತಾರಾ ನಡವಳಿಕೆ... ಪ್ರಕರಣಕ್ಕೆ ಮೂಲಕಾರಣ ಎ... ಮಾಡಿದ್ದನ್ನು ಸಹಿಸದ ತಾರಾ... ತನ್ನ ಮಡದಿಯ ತೇಜೋವ... ಡುವ ಪತ್ರಿಕೆಗಳ ವಿರುದ್ಧ ... ಮೊಕದ್ದಮೆ ಹೂಡುವುದಾ... ಬುತ್ತಿದ್ದಾನೆ. ಸ್ಥಳೀಯ 'ನಾಗೇ... ವಿರುದ್ಧ ಕಾಲೇಜಿನ ಎಬಿವಿ... ಟನೆಯ ಕೆಲ ಪುಂಡರ... ಬಿಟ್ಟಿದ್ದಾನೆ.



ತಾರಾ

ಈ ಪ್ರಕರಣದಿಂದ ಎಬಿ... ಎರಡು ಬಣಗಳಾಗಿವೆ. ದಲಿತ... ಸಮಿತಿಯ ಗೋಪಾಲ್ ಹಾಗ... ಸಾಗರ್ ಬಣದ ಕಾಯ...

ಎಷ್ಟು ಬೈದರೂ ಪ್ರಚೋದನೇನೇ ಆಗ್ತಾ ಇಲ್ವಲ್ಲ!

ಮಂಡ್ಯ-ಮೈಸೂರು

ಎಚ್.ಎಲ್.ಕೇಶವಮೂರ್ತಿ


ವಿರಾಟ ಹಿಂದೂ ಸಮಾವೇಶದ ಪ್ರಚೋದನಾಕಾರಿ ಬ್ಯಾನರ್

...ಕ್ಕೋ ಆ ಕಪ್ಪು ಹಣ. ...ಹಿಂದೂ ಸಮಾವೇಶಕ್ಕೆ ...ರಿನಂತೆ ಹರಿದು ಬಂದು ...ಯ ಹಸಿರನ್ನು ನುಂಗಿ ...ಮಯಗೊಳಿಸಿತ್ತು ...ಮುಖ್ಯ ಬೀದಿಗಳಲ್ಲೆಲ್ಲ ... ಹೋರ್ಡಿಂಗ್ಸು, ...ಗಳ ಹಾರಾಟ. ಛೆ. ...ಕಥೇನೆ ಬೇರೆ ಬಿಡಿ. ...ವನ್ನೆಲ್ಲ ಮಾಡಬೇಕಾದರೆ ...ಧಿಸಿದ ಇಲಾಖೆಯಿಂದ ...ನಗಿ ಪಡೆಯಬೇಕಂತೆ. ... ಧರ್ಮದ ಉದ್ಧಾರಕ್ಕೆ ...ಕೊಟ್ಟವರಿಗೆ ಇಂತಹ ...ನುಗಳೆಲ್ಲ ...ದ್ಧವಾಗಿ ...ರಬೇಕು. ಅದಕ್ಕೇ ...ನೂನು ಗೀನೂನು ...ವಕ್ಕೆಲ್ಲ ಅವರು ಕೆಡಿಸಿಕೊಳ್ಳಲಿಲ್ಲ, ...ಮಾಡಿದವರಿಗೆ ...ಕಡೆಯೋ, ...ಾ ಕರಂದ್ಲಾಜೆ ಕಡೆಯೋ ಕೈ ತೋರಿಸಿರಬೇಕು. ...ವೇ ಹಣ-ಅಧಿಕಾರ ಇದ್ದ ಮೇಲೆ ಅವರೆಲ್ಲ ...ನೇತರರೇ!

...ಶ ವಿಭಜನೆ ಕಾಲದಲ್ಲಿ ರೈಲ್ವೆ ಸ್ಟೇಷನ್ನುಗಳಲ್ಲಿ ...ುವ ನೀರಿನ ಅಡಕಗಳಿಗೂ 'ಹಿಂದೂ ನೀರು', ...ಂ ನೀರು' ಎಂದು ಬರೆಯಲಾಗುತ್ತಿತ್ತಂತೆ. ...ಮ್ಮೆ ದೇಶ ವಿಭಜನೆ ಆಗಲಿ ಅಂತಾನೋ ... ಕೆಲವು ಆಟೋಗಳಿಗೆ ಭಗವಾಧ್ವಜ ಹಾರಿಸಿ ... ಅವು ಇದ್ದ ಆಟೋಗಳು 'ಹಿಂದೂ ಆಟೋ'! ...ದವು 'ಅಹಿಂದೂ ಆಟೋ'! ತಾವು ...ೂಗಳು ಅಲ್ಲ, ಅಹಿಂದೂ ... ಅಲ್ಲ, ಮನುಷ್ಯರು ಅಂತ ...ದ್ದವರು ಇದರ ಹುನ್ನಾರ ...ಂದೇ. ಸಿಕ್ಕಿದ ಆಟೋಗಳಿಗೆ ಹತ್ತು... ...ು ಮಾತ್ರ ಹಿಂದೂತ್ವವಾದಿಗಳಿಗೆ ಅಸಹನೀಯ ...ಬಹುದು!

...ಂತಹವುಗಳೆಲ್ಲ ಎಲ್ಲಾ ಕಡೆಯೂ ನಡೆದಿರ...ದು ಬಿಡಿ. ಆದರೆ ಕೋಮು ಸೌಹಾರ್ದತೆಯನ್ನೇ ಉಸಿರಾಗಿಟ್ಟುಕೊಂಡಿರುವ ಮಂಡ್ಯ ಜಿಲ್ಲೆಯಲ್ಲಿ ...ಲ್ಲ ನಡೆಯಬಹುದು ಎಂಬುದಾಗಿ ಯಾರೂ ...ಸಿರಲಿಲ್ಲವೇನೋ. ಕನ್ನಡ ಧ್ವಜ ಸ್ಥಂಭದಲ್ಲಿ ...ಧ್ವಜ ಮೆರೆದಿದ್ದು; 'ಶಸ್ತ್ರ ಪೂಜೆಯಾಗಲಿಂದು ...ಪ್ರಾಣದೊಂದಿಗೆ, 'ಸ್ನೇಹಕ್ಕೆ ಬದ್ಧ ಸಮರಕ್ಕೂ ...ಎಂಬಂತಹ ಬರಹಗಳಿಂದ ರಸ್ತೆಗಳನ್ನು ಕುಲಗೆಡಿಸಿದ ...ರ್‌ಗಳ ವಿರುದ್ಧ ನಗರಸಭೆ ಆಯುಕ್ತರಿಗೆ, ಜಿಲ್ಲಾ ...ೀಸ್ ವರಿಷ್ಠಾಧಿಕಾರಿಗಳಿಗೆ ಹಾಗೂ ಜಿಲ್ಲಾಧಿಕಾರಿ ... ಕೆಲವು ಪ್ರಗತಿಪರರು ದೂರು ನೀಡಿ ಅಂತಹು...ು ತೆಗೆಸುವಂತೆ ಕೋರಿದರು. ಛೆ ಸುಮ್ಮನೆ ...ಬಾರದು. ಇವರು ಹೋದಲ್ಲೆಲ್ಲ ಆತ್ಮೀಯವಾಗಿ ...ಸಿ ಕಾನೂನುಪ್ರಕಾರ ಕ್ರಮ ತಗೊಳ್ತೀವಿ ಅಂತಾನೆ ...ಲಿ ಕೂದಲು ತೆಗೆದ ಹಾಗೆ ಹೇಳಿದರು. ಆಮೇಲೆ ...ಿಕೇನ ತಮ್ಮ 'ತಿಗದಸಿಕೆ' ಹಾಕಿಕೊಂಡದ್ದು ಬೇರೆ ...ು. ಆಶ್ವಾಸನೆ ನೀಡಿದರಲ್ಲ ಅಷ್ಟು ಸಾಕಲ್ಲವಾ!

ಇಷ್ಟೇ ಸಾಲದು ಎಂಬಂತೆ ಆಟೋಗಳಲ್ಲಿ ಪ್ರಚೋದನಾತ್ಮಕ ಘೋಷಣೆ ಕೂಗುತ್ತಾ, ಸುಳ್ಳು ವದಂತಿಗಳನ್ನು ಯಶಸ್ವಿಯಾಗಿ ಬಿತ್ತರಿಸಿದರೂ ಆಡಳಿತಾಂಗಕ್ಕೆ ಯಾಕೋ ಏನೋ ಕಿವಿ ತಮ್ಮಟೇನೆ ಒಡೆದು ಹೋಗಿತ್ತು! ಯಾವುದೂ ಅವರ ಕಿವಿಗೆ ಬೀಳುತ್ತಲೇ ಇರಲಿಲ್ಲ!

ಇವೆಲ್ಲವನ್ನೂ ಕಂಡೂ ಕಂಡೂ ಹೇಗೆ ಸುಮ್ಮನಿರುವುದು ಎಂದು ಪ್ರಗತಿಪರರು ಏಳನೇ ತಾರೀಖು ಭಾನುವಾರ ಬೆಳಿಗ್ಗೆ ಮಂಡ್ಯ ನಗರದ ಸಂಜಯ ವೃತ್ತದಲ್ಲಿ ಕಪ್ಪುಪಟ್ಟಿ ಕಟ್ಟಿಕೊಂಡು ಧರಣಿ ಸತ್ಯಾಗ್ರಹಕ್ಕೆ ಕುಳಿತರು. ಆಗ ಅವರ ಕಣ್ಣಿಗೆ ಬಿದ್ದದ್ದು ಏನು ಅಂದರೆ ವಾಹನಗಳಲ್ಲಿ ಕರೆದೊಯ್ಯುತ್ತಿದ್ದ ಏನೂ ಅರಿಯದ ಹಸುಳೆಗಳು; ಮುಗ್ಧ ಹಳ್ಳಿಯವರು; ಈ ಜಿಲ್ಲೆಯವರೇ ಅಲ್ಲದ ಹಿಂದೂತ್ವದ ಅಮಲಿನ ಹಲವರು; ಅವರ ಜೊತೆಗೆ ಮತ್ತೇರಿದ ಗೂಂಡಾಗಳಂತಹ ದಾಂಢಿಗರು! ತಮಾಷೆ ಅಂದರೆ ಬಹುತೇಕ ಪತ್ರಕರ್ತರಿಗೆ ವಿರಾಟ ಹಿಂದೂ ಸಮಾವೇಶಕ್ಕೆ ನಿರೀಕ್ಷಿಸಿದಷ್ಟು ಜನಸಂದಣಿ ಇರಲಿಲ್ಲವೆಂದು ಗೋಚರಿಸಿದರೆ, ಒಬ್ಬೊಬ್ಬ ಪತ್ರಕರ್ತರಿಗೆ ಅದು ಇಪ್ಪತ್ತೈದು ಸಾವಿರಕ್ಕೂ ಹೆಚ್ಚಾಗಿ ಕಾಣಿಸಿದ್ದು! ಇಡೀ ಪತ್ರಕರ್ತರಿಗೆ ಪ್ರಗತಿಪರರ ಸಾಂಕೇತಿಕ ಪ್ರತಿಭಟನೆಗೆ ಸುಮಾರು ಮುನ್ನೂರು ಜನರು ಸೇರಿದ್ದರೂ ಅವರ ಸಂಖ್ಯೆ ನೂರಕ್ಕೂ ಮೀರದಂತೆ ಕಂಡದ್ದು! ಇನ್ನೂ ವಿಚಿತ್ರವೆಂದರೆ 'ನಾನು ಹಿಂದೂವಾಗಿ ಹುಟ್ಟಿದ್ದೇನೆ. ಆದರೆ ಹಿಂದೂ ಆಗಿ ಸಾಯಲಾರೆ' ಎಂದ ಅಂಬೇಡ್ಕರ್ ಅವರನ್ನು ಕೊಳಕು ಹಿಂದೂತ್ವಕ್ಕೆ ಸೆಳೆದುಕೊಳ್ಳಲು ಪ್ರಯತ್ನಿಸಿದವರನ್ನು ಏನೂ ಪ್ರಶ್ನಿಸದೆ ತೆಪ್ಪಗಿದ್ದ ಜಿಲ್ಲಾಡಳಿತ ಪ್ರಗತಿಪರರು ಅದೇ ಹೇಳಿಕೆಯನ್ನು ಅಂಬೇಡ್ಕರ್ ಅವರ ಕಟೌಟ್‌ನೊಂದಿಗೆ ಹಾಕಿರುವುದನ್ನು ತೆಗೆಯಲು ಆಗ್ರಹಿಸಿದ್ದು! ಇದು ಯಾಕೆ ಅಂದರೆ ಇದನ್ನು ಯಾರೋ ಆರ್‌ಎಸ್‌ಎಸ್‌ನವ ಆಕ್ಷೇಪಿಸಿದನಂತೆ! ಅಂದರೆ ಸತ್ಯಕ್ಕೆ ಚಾಟಿ ಏಟು, ಸುಳ್ಳಿಗೆ ಮಾನ್ಯತೆ! ಇದು ಆಡಳಿತದ ವೈಖರಿ!

ಮಂಡ್ಯದಲ್ಲಿ ಹೀಗೆ ನಡೆದರೆ, ಮೈಸೂರಿನಲ್ಲಿ ನಡೆದದ್ದು ನೋಡಿ. ಕರ್ನಾಟಕದ ಸಾಂಸ್ಕೃತಿಕ ನಾಯಕರನ್ನ, ಭಾರತ ಸಾಮಾಜಿಕ ನ್ಯಾಯದ ಹರಿಕಾರರನ್ನ, ದೇವರನ್ನೇ ತಿರಸ್ಕರಿಸಿದ ಸ್ವಾತಂತ್ರ್ಯ ಹೋರಾಟಗಾರರನ್ನ ಕೊಳಕು ಹಿಂದೂತ್ವದ ಪ್ರತಿಪಾದಕರು ಎಂದು ಸಂಘ ಪರಿವಾರದವರು ಬಿಂಬಿಸುತ್ತಿರುವುದನ್ನು ವಿರೋಧಿಸಿ ಪ್ರಗತಿಪರ ಸಂಘಟನೆಗಳು ಗಾಂಧಿ ವೃತ್ತದ ಬಳಿ ಶಾಂತಿ ಸತ್ಯಾಗ್ರಹ ಹಮ್ಮಿಕೊಂಡಿದ್ದರು. ಇದೇ ಭಾನುವಾರ ಸಂಜೆ ನಾಲ್ಕರಿಂದ ಐದು ಗಂಟೆಯವರೆಗೆ ನಡೆಯಬೇಕಾಗಿದ್ದ ಸತ್ಯಾಗ್ರಹ ಅದು. ಹಿಂದೂತ್ವದ ಅಮಲು ಇದು ತಡೆಯುವಂತೆ ಒತ್ತಾಯಿಸಿರಬೇಕು: ಗಲಾಟೆ ಎಬ್ಬಿಸಲು ಕಾರಣಬೇಡವೆ?

ಭಾಗವಹಿಸಿರಲಿಲ್ಲ, ಗಾಂಧಿ ಚೌಕದ ಸುತ್ತ ಹಾರಿಸಿದ್ದ ಭಗವಾಧ್ವಜಗಳನ್ನು ತೆಗೆದು ಒಂದು ಕಡೆ ಇರಿಸಲಾಗಿತ್ತು.

ಸಾಕಲ್ಲವೆ ಇಷ್ಟು?

'ಯಾರು ಭಗವಾ ಧ್ವಜಕ್ಕೆ ಅಪಮಾನ ಮಾಡಿದವರು?' ಎಂದ ಒಬ್ಬ.

ಅಪಮಾನ ಎಲ್ಲಿ ಆಗಿತ್ತು?

ಅದಲ್ಲ, ಅವರಿಗೆ ಗಲಾಟೆ ಮಾಡಲು ನೆಪಬೇಕಿತ್ತು!

ಬೆಳಿಗ್ಗೆ ವಿರಾಟ ಹಿಂದೂ ಸಮಾವೇಶವನ್ನು ಯಶಸ್ವಿಗೊಳಿಸಿದ ಅಮಲಿನೊಂದಿಗೆ, ಅದರ ಯಶಸ್ಸಿನ ಉನ್ಮಾದದಲ್ಲಿ ಎಗ್ಗಿಲ್ಲದೆ ಸುರಿದುಕೊಂಡ ಪರಮಾತ್ಮ ಬೇರೆ ಒಳಗಿದ್ದಾನೆ! ಬಾಯಿಬಿಟ್ಟರೆ ಸಂಸ್ಕೃತ ಶಬ್ದಗಳು! ಅವರ ಗುಂಪು ದೊಡ್ಡದಾಯಿತು. ಯಥೇಚ್ಛವಾಗಿ ಎಲ್ಲರ ಬಾಯಿಂದಲೂ ಈ ಮಾತುಗಳ ಸುರಿಮಳೆ!

'ನೀವು ಸಾಬರಿಗುಟ್ಟಿದೋರ?' ಗುಂಪಿನ ಪ್ರಶ್ನೆ.

ಪಾಪ! ಅವರದ್ದೇನೂ ತಪ್ಪಿಲ್ಲ, ಅದನ್ನು ಬಿಟ್ಟು ಅವರಿಗೆ ಬೇರೆ ಗೊತ್ತಿಲ್ಲ!

'ಫೋಟೋ ಬರ್ಲಿ ಅಂತ ಬಂದು ಕುಂತಿದೀರಿ'

ಒಂದು ತಮಾಷೆ ಅಂದರೆ, ಪ್ರಗತಿಪರರು ಪ್ರಚಾರದ ಹುಚ್ಚಿನಿಂದಲೇ ಬಂದಿದ್ದರು ಅಂತ ಇಟ್ಟುಕೊಳ್ಳೋಣ. ಹಾಗೆ ಅಂದವ ಸುಮಾರು ಹದಿನೆಂಟು-ಇಪ್ಪತ್ತರ ಹರೆಯದ ಹುಡುಗ. ಕ್ಯಾಮೆರಾದವರ ಕಡೆ ಕೈ ತೋರಿ 'ನನ್ನ ಫೋಟೋ ತೆಗೀರಿ' ಅಂದ! ಯಾರೂ ಕ್ಲಿಕ್ ಅನ್ನಿಸಿದ ಹಾಗೆ ಕಾಣಲಿಲ್ಲ. ಮತ್ತೆ ಹೇಳಿದ. 'ಆಗ್ಲೆ ತೆಗೆದನಲ್ಲ' ಅಂದ ಒಬ್ಬ ಕ್ಯಾಮರಾದವ! ಆಗ ಅವನ ಜೀವಕ್ಕೆ ತೃಪ್ತಿ ಬಂದಿರಬೇಕು. ಸುಮ್ಮನಾದ.

ಪ್ರತಿಭಟನೆಗೆ ಬಂದಿದ್ದವರಲ್ಲಿ ಹಿರಿಯರನ್ನು ಮೆಟ್ಟಿಲ ಮೇಲೆ ಕೂರಿಸಿದ್ದರು. ಈ ಅಮಲುದಾರರ ಪ್ರಶ್ನೆ- 'ಯಾಕ್ರಿ ಬಂದ್ರಿ ಇಲ್ಲಿ? ಮುದುಕರಿಗೇನು ಕೆಲ್ಸ?'

ಅಂದರೆ ದೇಶವನ್ನು ಇಂತಹ ಅಮಲುದಾರ ಗೂಂಡಾಗಳಿಗೆ ಒಪ್ಪಿಸಿ ಸಭ್ಯರು ಮನೆಯಲ್ಲಿರಬೇಕು! ವೇದಾಂತ ಹೆಮ್ಮಿಗೆ ಉಸುರಿದರು- 'ಹೇಗಿದೆ ನೋಡಿ ನಮ್ಮ ಯುವ ಜನಾಂಗ! ಸ್ವಾತಂತ್ರ್ಯ ಹೋರಾಟದಲ್ಲಿ ನಾವೂ ಒಂದೇ ಮಾತರಂ, ಭಾರತ್‌ಮಾತಾಕಿ ಜೈ ಎಂದು ಕೂಗುತ್ತಿದ್ದೆವು. ಇವರೂ ಅದನ್ನೇ ಕೂಗುತ್ತಿದ್ದಾರೆ. ಆದರೆ ಎಷ್ಟೊಂದು ವ್ಯತ್ಯಾಸ!'


ಕನ್ನಡ ಬಾವುಟ ಹಾರಬೇಕಾದಲ್ಲಿ ಭಗವಾಧ್ವಜ ಮೆರೆದಾಟ!

ಯುರೇಕ! ಸಿಕ್ಕಿತು!

ಭಗವಾಧ್ವಜ!

ಎಲ್ಲಿ ಹೋಯಿತು ಆ ಧ್ವಜ? ಅಪಮಾನವಾಯಿತೆ ಅದಕ್ಕೆ?

ಏನೂ ಇಲ್ಲ, ಆ ಧ್ವಜವನ್ನು ತುಳಿದು ಅವಮಾನಗೊಳಿಸುವಂತಹ ಅಸಂಸ್ಕೃತರು ಯಾರೂ ಪ್ರತಿಭಟನೆಯಲ್ಲಿ

ಕೂಗಾಟ, ಅಶ್ಲೀಲ ಪದಗಳ ಯಥೇಚ್ಛ ಬಳಕೆ ನಡೀತಾನೆ ಇತ್ತು. ಅವರ ಬೈಗುಳ ಹೇಗಿತ್ತು ಅಂದರೆ ಜಗ್ಗೇಶ್ ಸಿನಿಮಾಗಳಲ್ಲಿ, ಯಾವುದೇ ಶಬ್ದ ಬಾರದಿದ್ದರೂ, ಆಂಗಿಕ ಅಭಿನಯದಲ್ಲೇ ತನ್ನ ಮಾತಿನ ಝುಳವನ್ನು ಹರಿಸುತ್ತಾನಲ್ಲ..... ಅದನ್ನ ಕೇಳಿ ಸುತ್ತಲಿನ ಜನ ನಾಚಿ ನೀರಾಗ್ತಾರಲ್ಲ... ಕಿವಿಗೆ ತರ್ಜನಿ ಸೇರಿಸುತ್ತಾರಲ್ಲ.... ಅದಕ್ಕಿಂತ ಹೊಲಸಾಗಿತ್ತು. ಮೈಸೂರಿನಲ್ಲಿ ಎಲೆ, ಹೂವು, ಹಣ್ಣು ಇಂತಹವುಗಳ ಚಿಲ್ಲರೆ ವ್ಯಾಪಾರ ಮಾಡುವ ಹೆಂಗಸರು ಹೇಳಿದ ಬೆಲೆಗೆ ಪದಾರ್ಥಗಳನ್ನು ಕೊಂಡುಕೊಳ್ಳಲಿ ಅಂತ, (ಚೌಕಾಶಿ ಮಾಡಿದರೆ) ಅಶ್ಲೀಲವಾಗಿ ಮಾತನಾಡುತ್ತಾರಂತೆ. ಅದೇ ತಂತ್ರವನ್ನು ಇವರೂ ಬಳಸುತ್ತಿದ್ದರೋ ಏನೋ!

ಇಷ್ಟೇ ಸಾಲದು ಎಂಬಂತೆ ಯಾರೋ ಕಿಡಿಗೇಡಿ ಒಂದೆರಡು ಸಾರಿ ಹೊರಗಿನಿಂದ ಕಲ್ಲು ಎಸೆದು ಹಿಂದೂತ್ವದ ಸೇವೆ ಮಾಡಿದ! ಇಷ್ಟೆಲ್ಲ ನಡೆಯುತ್ತಿದ್ದರೂ ಪೊಲೀಸಿನವರು ಬರಲೇ ಇಲ್ಲ ಅಂತ ಇಲ್ಲ, ಬಂದರು. 'ಸತ್ಯಾಗ್ರಹ ನಡೆಸಲು ಪರವಾನಗಿ ಪಡೆದಿದ್ದೀರೇನ್ರಿ' ಅಂತ ಪ್ರಗತಿಪರರ ಮೇಲೇ ರೇಗಾಡಿದರು. ಅದನ್ನು ತೋರಿಸಿದ ನಂತರ ಸಂಪೂರ್ಣ ರಕ್ಷಣೆ ನೀಡಿದರು. ಯಾರಿಗೆ ಅಂತೀರಿ? ಪ್ರಗತಿಪರರಿಗಲ್ಲ, ಅಮಲುದಾರ ಹಿಂದೂತ್ವವಾದಿಗಳಿಗೆ!

ಆದರೂ ಅಮಲುದಾರರಿಗೆ ನಿರಾಶೆ ಆಗಿರಬೇಕು- ಇಷ್ಟೆಲ್ಲ ಬೈದರೂ ಈ ನನ್‌ಮಕ್ಕಳು ಪ್ರಚೋದನೆಗೆ ಒಳಗಾಗಲಿಲ್ಲವಲ್ಲಾ ಅಂತ!

... ಘಟನೆ ನೋಡಿದವನಿಗೆ ಈ ... ಯಾರ ... ಇರಬೇಕು. ಯಾರ ... ಇರಬೇಕು ... ಎಂಬುದಕ್ಕೆ ... ಅಗತ್ಯ...

...ಸಕಿ ತಾರಾಳ ವಿರುದ್ಧ ನೇರ ಆರೋಪ ಮಾಡಿವೆ. ...ೀಗೆ ಪ್ರಕರಣ ದಿನ ಕಳೆದಂತೆ ನಾನಾ ತಿರುವು ...ಕೊಂಡಾಗ ತಾರಾ ತನ್ನ ಸಂಬಂಧಿ ಎಂಬ ಕಾರಣಕ್ಕೆ ...ರಾಜ್ ಆಕೆಯ ಆಸರೆಗೆ ನಿಂತಿದ್ದಾರಷ್ಟೇ ...ಂತಿಲ್ಲ, ಇಲ್ಲಿ ಜಾತಿ ಪ್ರತಿಷ್ಠೆಯಾಗಿದೆ.

...ಷ್ಟೇನು ಗುಟ್ಟಾಗಿ ಉಳಿದಿಲ್ಲದ ಶಾಸಕ ...ಾಜರ ರಾಜಕೀಯ ವರಸೆ ಇತ್ತೀಚೆಗೆ ... ಕೀಳುಮಟ್ಟಕ್ಕೆ ಇಳಿದಿದೆ ಎಂಬುದಕ್ಕೆ ...ಸಿ ಪಂಚಾಯಿತಿಯಲ್ಲಿ ಗುಮಾಸ್ತೆ ...ದ ಶಕುಂತಲಾ ಎಂಬ ಮಹಿಳೆ ಕಳೆದ ...ವರ್ಷದಿಂದ ಕಣ್ಣೀರಿಗೆ ಶರಣಾಗಿ ...ಯಕಳಾಗಿರುವುದೇ ಸ್ಪಷ್ಟ ನಿದರ್ಶನ. 2003 ರಲ್ಲಿ ಕಾಂಗ್ರೆಸ್ ಪಕ್ಷದವರು ... ಅಧ್ಯಕ್ಷರಾಗಿದ್ದಾಗ ... ಆದೇಶದಂತೆ ತಮ್ಮ ಅಧಿಕಾರ ಅವಧಿಯಲ್ಲಿ ... ಕಟ್ಟಡಗಳಿಗೆ ಅಸೆಸ್‌ಮೆಂಟ್ ಏರಿಸುವಾಗ, ... ಗ್ರಾಮದ ಅರಬ್ಬೀ ಮದ್ರಸ ಶಾಲೆಗೂ ಮತ್ತು ... ಗುರು ಪಾಠಶಾಲೆಗೂ ಅಸೆಸ್‌ಮೆಂಟ್ ಏರಿ...


ಶಕುಂತಲಾ

ನಂತರ ಕಾಂಗ್ರೆಸ್ ಅಧ್ಯಕ್ಷರ ಇಳಿಕೆಯಾಗಿ ಬಿಜೆಪಿ ಪಕ್ಷದವರು ಅಧ್ಯಕ್ಷರಾದರು. ಈ ಹಿಂದೆಯೇ ಅಸೆಸ್‌ಮೆಂಟ್ ಏರಿಸಿದಂತೆ ಗುಮಾಸ್ತೆ ಶಕುಂತಲಾ ಕಂದಾಯ ರಸೀದಿ ಹರಿದಿದ್ದಾಳೆ. ಹಾಗೆಯೇ ಹಿಂದೆಯೇ ಅಸೆಸ್‌ಮೆಂಟ್ ಏರಿಸಿದ್ದರಿಂದ ಶ್ರೀಮಠ ಗುರು ಪಾಠಶಾಲೆಗೂ ಕಂದಾಯ ರಸೀದಿ ಹರಿದಿದ್ದಾಳೆ. ಶ್ರೀಮಠಕ್ಕೆ ರಸೀದಿ ಹರಿದಿದ್ದರಿಂದ ಅಸಮಾಧಾನಗೊಂಡಿದ್ದ ಬಿಜೆಪಿಯವರು ಶಕುಂತಲಾ ಮೇಲೆ ಕತ್ತಿ ಮಸೆಯಲು ಪ್ರಾರಂಭಿಸಿದ್ದಾರೆ.

ಪಂಚಾಯ್ತಿಯಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಆರಂಭದಲ್ಲೇ ಗ್ರಾಮಸಭೆ ಮತ್ತು ವಾರ್ಡ್ ಸಭೆಯಲ್ಲಿ ಚರ್ಚೆಯಾಗದೇ 5 ಲಕ್ಷ ರೂ. ಮೌಲ್ಯದಲ್ಲಿ ಆಗಬೇಕಿದ್ದ ಕೆರೆ ಕಾಮಗಾರಿ ಎರಡು ಲಕ್ಷದಲ್ಲೇ ಮುಗಿದು ಹಗರಣ ಬಹಿರಂಗಗೊಂಡಿದ್ದನ್ನು ಮತ್ತು ಸುಮಾರು 10 ಕೆರೆಗಳನ್ನು ಪ್ರದೇಶದಲ್ಲಿ ಕಳಪೆ ಕಾಮಗಾರಿಯಾಗಿ ಘೋಷಿತ ಆದುದನ್ನು ಲೋಕಾಯುಕ್ತ ನ್ಯಾಯಮೂರ್ತಿಗಳು ಭೇಟಿ ನೀಡಿ ಪರಿಶೀಲಿಸಿದ್ದರು.

ಕೆರೆ ಹಗರಣ ಬಹಿರಂಗವಾಗಲು ಶಕುಂತಲಾ ಹೊರಗೆ ಮಾಹಿತಿ ನೀಡಿದ್ದಾಳೆಂದು ಭಾವಿಸಿದ ಭಜರಂಗಿಗಳು ಕಲ್ಕಟ್ಟೆಯ ಮದ್ರಸ ಶಾಲೆಯಲ್ಲಿ ಗುಪ್ತ ಚಟುವಟಿಕೆಗಳು ನಡೆಯುತ್ತಿದ್ದರೂ ಆ ಕಟ್ಟಡಕ್ಕೆ ಶಕುಂತಲಾ ಕಂದಾಯ ರಸೀದಿ ಹರಿದಿದ್ದಾರೆ ಎಂದು ತನಿಖೆಗೆ ಆಗ್ರಹಿಸಿದ್ದರು. ಇದಕ್ಕೆ ಶಾಸಕ ಜೀವರಾಜ್‌ರಿಂದ್ಲ ಶಿಫಾರಸ್ಸು ಮಾಡಿಸಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ಪ್ರಸ್ತಾಪಗೊಂಡು ಶಕುಂತಲಾ ನಿರ್ದೋಷಿ ಎಂದು ಸ್ಪಷ್ಟಪಡಿಸಿದ್ದೂ ಆಗಿದೆ.

ಆದರೂ ಈತನಕ ಶಕುಂತಲಾ ಕರ್ತವ್ಯಕ್ಕೆ ಹಾಜರಾಗದಂತೆ ತಡೆಯುತ್ತಿರುವ ಭಜರಂಗಿಗಳು ಶಕುಂತಲಾ ಶಾಸಕರನ್ನು ಭೇಟಿ ಮಾಡಿ ತಪ್ಪೊಪ್ಪಿಗೆ ಪತ್ರ ನೀಡಿದ ಮೇಲೆ ಕರ್ತವ್ಯಕ್ಕೆ ಹಾಜರಾಗಲು ಅವಕಾಶ ನೀಡುವಂತೆ ಸಂಬಂಧಿಸಿದ ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ.

ಜೀವರಾಜ್‌ರಂತಹ ಚಿಢ್ಢಿ ಶಾಸಕರ ಅಟ್ಟಹಾಸದಲ್ಲಿ ಶಕುಂತಲಾರಂತಹ ಮಹಿಳೆಯರಿಗೆ ಅನ್ಯಾಯವಾಗುತ್ತದೆ. ಶೈಲಾಳಂತಹ ದಲಿತ ಹುಡುಗಿಯರು ಆತ್ಮಹತ್ಯೆಗೆ ಶರಣಾಗುತ್ತಾರೆ. ಚಿಢ್ಢಿಗಳ ಇಂತಹ ಬುದ್ಧಿಯನ್ನು ಬಲ್ಲ ಶೃಂಗೇರಿಯ ಜನ ಜೀವರಾಜನಿಗೆ ಗೇಟ್‌ಪಾಸ್ ಕೊಡಬೇಕಿದೆ.

-ವರದಿಗಾರ

ಕುಂದಾಪುರ : ಮರುಕಳಿಸಿದ ಹಿಂದುತ್ವದ ಹಿಂಸೆ

ಗೋವುಗಳಿಗೆ ಸಿಗುವ ಗೌರವ ಮನುಷ್ಯರಿಗೆ ಯಾಕಿಲ್ಲ?

ಗೋಹತ್ಯೆ ಒ
ಅಪರಾಧವೇ ಆ
ಜಾನುವಾರುಗಳನ್ನು ಸಾಕಿದ
ತಮ್ಮ ಕೊಟ್ಟಿಗೆಗಳಲ್ಲಿ
ಮುದಿ ಜಾನುವಾರುಗ
ಏನು ಮಾಡಬೇ
ಉಳುಮೆಯ ಎ
ಕೋಣಗಳನ್ನು, ಹಾಲಿಗೆ
ಸಾಕುವ ಜರ್ಸಿ ಮುಂ
ದುಬಾರಿ ರಾಸುಗಳನ್ನು ಅ
ಸಾಯುವವರ
ಕೊಟ್ಟಿಗೆಯಲ್ಲಿಟ್ಟುಕೊ
ಸಾಕಬೇಕೇ? ಬಡ ರೈ
ಅವುಗಳ ಹೊಟ್ಟೆಗೆ ಎಲ್ಲಿ
ತರುತ

ಜಿ. ರಾಜಶೇಖರ್
ಕೆ. ಫಣಿರಾಜ್

ತೋಳ್ಬಲ ಮತ್ತು ಧರ್ಮದ ಮುಖವಾಡಗಳ ಜೊತೆ ಪತ್ರಿಕೆಗಳ ಪ್ರಚಾರವೂ ಸಿಕ್ಕರೆ, ಹಸಿ ಸುಳ್ಳಿನ ಮೇಲೆ ನಿಂತಿರುವ ಒಂದು ಫ್ಯಾಸಿಸ್ಟ್ ಚಳವಳಿಯಲ್ಲೂ ಜನಸಾಮಾನ್ಯರು ಹಿಂಡುಹಿಂಡಾಗಿ ಭಾಗವಹಿಸುವಂತೆ ಮಾಡಬಹುದು. ಈ ಮಾತಿಗೆ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳ ಗೋಹತ್ಯಾ ನಿಷೇಧ ಚಳವಳಿಯೇ ಒಂದು ನಿದರ್ಶನ. ಆಹಾರಕ್ಕಾಗಿ ಜಾನುವಾರುಗಳನ್ನು ಕಡಿಯುವುದು ಕಾನೂನಿನ ಉಲ್ಲಂಘನೆ ಮಾತ್ರವಲ್ಲ; ಒಂದು ಪಾಪಕೃತ್ಯವೂ ಹೌದು ಎಂಬುದನ್ನು ಹಿಂದೂತ್ವದ ಚಳವಳಿ ಗೃಹೀತವಾಗಿಟ್ಟುಕೊಂಡಿದೆ. ಕರಾವಳಿಯ ಪತ್ರಿಕೆಗಳು ಈಗ ಗೋಹತ್ಯೆಯ ಘಟನೆಗಳನ್ನು ಅದೇ ಪ್ರಕಾರ ವರದಿ ಮಾಡುತ್ತಿವೆ. ಕರ್ನಾಟಕದ ಗೋಹತ್ಯಾ ನಿಷೇಧ ಕಾಯ್ದೆ ಈ ಕುರಿತು ಏನು ಹೇಳುತ್ತದೆ ಎಂಬುದು ಹಾಗಿರಲಿ, ಜನರ ಗುಂಪುಗಳು ಹೆದ್ದಾರಿಗಳಲ್ಲಿ ವಾಹನಗಳನ್ನು ತಡೆಗಟ್ಟುವುದು ಮತ್ತು ಜಾನುವಾರು ಕಳ್ಳಸಾಗಾಣಿಕೆಯ ಆಪಾದನೆ ಹೊರಿಸಿ ಹಲ್ಲೆ ಮಾಡುವುದು ನಾಗರಿಕ ಸಮಾಜದಲ್ಲಿ ಸಲ್ಲದು ಎಂಬ ಅರಿವು ಕೂಡಾ ಈ ಪತ್ರಿಕೆಗಳಿಗೆ ಇಲ್ಲ.

ಜಾನುವಾರುಗಳನ್ನು ಸಾಕುವವರಲ್ಲಿ ಹೆಚ್ಚಿನವರು ಹಿಂದೂಗಳು; ನಿರುಪಯೋಗಿ ಜಾನುವಾರುಗಳನ್ನು ಮಾರುವವರೂ ಅವರೇ. ಜಾನುವಾರು ದಲ್ಲಾಳಿಗಳಲ್ಲೂ- ಪೈರಿನವರು ಎಂದು ಅವರನ್ನು ಇಲ್ಲಿ ಕರೆಯುತ್ತಾರೆ- ಹೆಚ್ಚಿನವರು ಹಿಂದೂಗಳೇ. ಆದರೆ ಈ ಸತ್ಯವನ್ನು ಹಿಂದೂತ್ವವಾದಿಗಳು ಗುರುತಿಸುವುದಿಲ್ಲ; ಗೋಹತ್ಯಾ ನಿಷೇಧಕ್ಕೆ ಒತ್ತಾಯಿಸುವ ಮಠಾಧೀಶರುಗಳಿಗೂ ಇದರ ಪರಿವೇ ಇಲ್ಲ. ಗೋಹತ್ಯೆ ಒಂದು ಅಪರಾಧವೇ ಆದರೆ ಜಾನುವಾರುಗಳನ್ನು ಸಾಕಿದವರು ತಮ್ಮ ಕೊಟ್ಟಿಗೆಗಳಲ್ಲಿರುವ ಮುದಿ ಜಾನುವಾರುಗಳನ್ನು ಏನು ಮಾಡಬೇಕು? ಉಳುಮೆಯ ಎತ್ತು, ಕೋಣಗಳನ್ನು, ಹಾಲಿಗೆಂದು ಸಾಕುವ ಜರ್ಸಿ ಮುಂತಾದ ದುಬಾರಿ ರಾಸುಗಳನ್ನು ಅವು ಸಾಯುವವರೆಗೂ ಕೊಟ್ಟಿಗೆಯಲ್ಲಿಟ್ಟುಕೊಂಡು ಸಾಕಬೇಕೇ? ಬಡ ರೈತರು ಅವುಗಳ ಹೊಟ್ಟೆಗೆ ಎಲ್ಲಿಂದ ತರುತ್ತಾರೆ? ಇವು ಸರಳ ಪ್ರಶ್ನೆಗಳು.

ಆದರೆ ಗೋಹತ್ಯೆ ಇಷ್ಟು ದೊಡ್ಡ ವಿವಾದವಾಗಿ ಬೆಳೆದುನಿಂತಿರುವ ಉಡುಪಿ, ದ.ಕ. ಜಿಲ್ಲೆಗಳಲ್ಲಿ ಮಾಧ್ಯಮಗಳು, ಮಠಾಧೀಶರು ಮತ್ತು ರಾಜಕೀಯ ನಾಯಕರುಗಳೆಲ್ಲರೂ ವಿಷಯಕ್ಕೆ ಸಂಬಂಧಿಸಿದ ಈ ಮೂಲಭೂತ ಪ್ರಶ್ನೆಗಳನ್ನೇ ಮರೆಮಾಚುತ್ತಿದ್ದಾರೆ. ಗೋಹತ್ಯೆ ಕುರಿತು ಕರಾವಳಿಯಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೆ ಮುಸ್ಲಿಮರೇ ಯಾಕೆ ಮತ್ತೆ ಮತ್ತೆ ಬಲಿಯಾಗಬೇಕು ಎಂಬುದರ ಬಗ್ಗೆ ಕೂಡ ಯಾರೂ ತಲೆಕೆಡಿಸಿಕೊಂಡಿಲ್ಲ. ಮಾದಕದ್ರವ್ಯ ನಿಷೇಧದ ಕಾನೂನಿನ ಪ್ರಕಾರ ಮಾದಕದ್ರವ್ಯಗಳನ್ನು ಸೇವಿಸುವುದು ಮಾತ್ರವಲ್ಲ ಅವುಗಳನ್ನು ಮಾರಾಟ ಮಾಡುವುದೂ ಕೂಡ ಅಪರಾಧ. ಗೋಹತ್ಯೆ ಅಪರಾಧವೆಂದಾದರೆ ಗೋವುಗಳನ್ನು ಮಾರಾಟ ಮಾಡುವುದು ಯಾಕೆ ಅಪರಾಧವಲ್ಲ? ಕರ್ನಾಟಕದ ಗೋಹತ್ಯಾ ನಿಷೇಧ ಕಾಯ್ದೆಯಲ್ಲಿ ಕೆಲವು ಷರತ್ತುಗಳಿಗೆ ಒಳಪಟ್ಟು, ಆಹಾರಕ್ಕಾಗಿ ಜಾನುವಾರುಗಳನ್ನು ಕೊಲ್ಲಲು ಅವಕಾಶವಿದೆ. ಜಾನುವಾರುಗಳನ್ನು ಕೊಲ್ಲುವವರು ಕಾಯ್ದೆಯನ್ನು ಅತಿಕ್ರಮಿಸಿದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಪೊಲೀಸರ ಕೆಲಸ. ಆದರೆ ಹಿಂದೂತ್ವವಾದಿಗಳು ಗೋಹತ್ಯೆಯನ್ನು ಕೇವಲ ಕಾನೂನಿನ ಸಮಸ್ಯೆ ಎಂದು ಭಾವಿಸುವುದಿಲ್ಲ. ಗೋಹತ್ಯಾ ನಿಷೇಧದ ಒತ್ತಾಯ, ಮುಸ್ಲಿಮರ ವಿರುದ್ಧ ಹಿಂದೂಗಳನ್ನು ಎತ್ತಿಕಟ್ಟಲು ಅವರು ಬಳಸುತ್ತಿರುವ ಒಂದು ಅಸ್ತ್ರ. ಹಿಂದೂತ್ವವಾದಿಗಳು ಪ್ರಬಲವಾಗಿರುವ ಪ್ರದೇಶಗಳಲ್ಲಿ ಮಾತ್ರ ಈ ಒತ್ತಾಯ, ಸಂಘರ್ಷಗಳು ಕಾಣಿಸಿಕೊಳ್ಳುತ್ತವೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ಹಿಂದೂಗಳೇ ಬಹುಸಂಖ್ಯಾತರು. ಆದರೆ ಬೇರೆ ಎಲ್ಲಿಯೂ ಕಾಣಿಸದಷ್ಟು ಹಿಂಸಾಚಾರ, ಕರ್ನಾಟಕದ ಕರಾವಳಿ ಮತ್ತು ಮಲೆನಾಡಿನ ಜಿಲ್ಲೆಗಳಲ್ಲಿ ಮಾತ್ರ ಈ ವಿಷಯದ ಕುರಿತು ಹೀಗೇ ನಡೆಯುತ್ತಿದ್ದರೆ ಅದಕ್ಕೆ ಹಿಂದೂತ್ವವಾದಿಗಳು ಕಾರಣವೇ ಹೊರತು ಸಾಮಾನ್ಯ ಹಿಂದೂಗಳಲ್ಲ.

ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನಲ್ಲಿ 2007ರ ಆರಂಭದಲ್ಲೇ ನಡೆದ ಎರಡು ಘಟನೆಗಳು, ಹಿಂದೂತ್ವದ ಗೋಹತ್ಯಾ ನಿಷೇಧ ಚಳವಳಿಯ ಮೂರ್ಖತನ ಮಾತ್ರವಲ್ಲ ಅದರ ಆಳದಲ್ಲಿರುವ ಒರಟುತನ ಮತ್ತು ಕ್ರೌರ್ಯವನ್ನು ಎತ್ತಿತೋರಿಸುವಂತಿದೆ. ಕುಂದಾಪುರ-ಶಿವಮೊಗ್ಗ ಹೆದ್ದಾರಿಯಲ್ಲಿ, ಕುಂದಾಪುರದಿಂದ ಸುಮಾರು 15 ಕಿ.ಮೀ. ದೂರದಲ್ಲಿರುವ ಒಂದು ಪುಟ್ಟ ಊರು ಕಂಡ್ಲೂರು. ಕಂಡ್ಲೂರು ಪಂಚಾಯತ್‌ನಲ್ಲಿ ಹಿಂದೂಗಳೇ ಬಹುಸಂಖ್ಯಾತರು. ಆದರೆ ಆ ಊರಿನ ಅಂಗಡಿ ಸಾಲನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡರೆ ಅಲ್ಲಿ ಮುಸ್ಲಿಮರ ಮನೆಗಳೇ ಜಾಸ್ತಿ. ಹಾಗಾಗ್ಗಿ ಅದಕ್ಕೆ 'ಪಾಕಿಸ್ತಾನ' ಎಂಬ ಅಡ್ಡ ಹೆಸರು ಬಿದ್ದಿದೆ.


ಕಿರಿಮಂಜೇಶ್ವರ: ಅಕ್ರಮ ಕಸಾಯಿಖಾನೆ ಪತ್ತೆ; ಮಾಂಸ ವಶ


'ಉದಯವಾಣಿ'ಯಲ್ಲಿ ಪ್ರಕಟಗೊಂಡಿರುವ ವರದಿ

ಕಂಡ್ಲೂರಿನ ಮೂವರು ಮುಸ್ಲಿಂ ತರುಣರು- ಜೆಫ್ರಿ, ಉಬೇದುಲ್ಲಾ ಮತ್ತು ಮಜರ್ ಕಳೆದ ಡಿಸೆಂಬರ್ 30, ಶನಿವಾರದಂದು ಬಕ್ರೀದ್ ಹಬ್ಬದ ಖುರ್ಬಾನಿಗೆ ಜಾನುವಾರು ಖರೀದಿಸಲು, ಸಮೀಪದ ಹಳ್ಳಿ ಸಿದ್ದಾಪುರದ ಶಂಕರ ಹೆಗ್ಡೆ ಎಂಬುವರ ಮನೆಗೆ ಹೋಗಿದ್ದರು. ಸುಮಾರು 35ರ ಹರೆಯದ ಶಂಕರ ಹೆಗ್ಡೆ ಕೃಷಿಕರು; ಜಾನುವಾರು ವ್ಯಾಪಾರ ಅವರ ಉಪವೃತ್ತಿ. ಕಂಡ್ಲೂರಿನ ಈ ತರುಣರು ಶಂಕರ ಹೆಗ್ಡೆಯವರ ಮನೆಗೆ ಹೋದಾಗ ಅವರು ಮನೆಯಲ್ಲಿ ಇರಲಿಲ್ಲ. ಹಾಗಾಗಿ ಇವರು ರಾತ್ರಿ ಅಲ್ಲಿಯೇ ಉಳಿದು, ಮಾರನೇ ದಿನ ಅವರನ್ನು ಕಂಡು ವ್ಯವಹಾರ ಕುದುರಿಸುವುದು ಎಂದು ತೀರ್ಮಾನಿಸಿದರು. ಆ ರಾತ್ರಿ ಸುಮಾರು 10 ಗಂಟೆಗೆ 30-40ರಷ್ಟು ತರುಣರಿದ್ದ ಗುಂಪು ಹೆಗ್ಡೆಯವರ ಮನೆಯಿಂದ ಈ ಮೂವರನ್ನು ಒಂದು ಕಿಲೋಮೀಟರ್ ದೂರದಲ್ಲಿದ್ದ ಒಂದು ಶಾಲೆಯ ಆವರಣಕ್ಕೆ ಎಳೆದುಕೊಂಡು ಹೋಗಿ ದೊಣ್ಣೆ ಮತ್ತು ಬೆಲ್ಟಿನಲ್ಲಿ ಥಳಿಸಿದರು; ಜಾನುವಾರು ವ್ಯಾಪಾರಕ್ಕೆಂದು ಇವರು ತಂದಿದ್ದ ಇಪ್ಪತ್ನಾಲ್ಕು ಸಾವಿರ ರೂಪಾಯಿ ನಗದನ್ನೂ ದೋಚಿದರು. ಸಿದ್ದಾಪುರದ ಈ ಗೋ ಸಂರಕ್ಷಕರು ಹೆಗ್ಡೆಯವರಿಗೂ ಹೊಡೆದಿದ್ದಾರೆ ಎಂಬುದೇ ಈ ಘಟನೆಯಲ್ಲಿ ವಿಶೇಷವಾಗಿ ಗಮನಿಸಬೇಕಾದ ಸಂಗತಿ. ಕೆಲವು ತಿಂಗಳ ಹಿಂದೆ ಉಡುಪಿ ಜಿಲ್ಲೆಯ ಕಾವಡಿ ಗ್ರಾಮದ ಪಾಟಾಳಿ ಕೃಷ್ಣಯ್ಯನನ್ನು ಭಜರಂಗಿಗಳು ಇದೇ ಕಾರಣಕ್ಕೆ ಕೊಲೆ ಮಾಡಿದ್ದರು. ಶಂಕರ ಹೆಗ್ಡೆ ಹಾಗೂ ಕೃಷ್ಣಯ್ಯ ಪಾಟಾಳಿಯಂತಹ ಜಾನುವಾರು ದಲ್ಲಾಳಿಗಳು ಕರಾವಳಿಯ ಹಳ್ಳಿಹಳ್ಳಿಗಳಲ್ಲೂ ಇದ್ದಾರೆ. ಇವರೂ ಹಿಂದೂಗಳು; ಇವರಿಗೆ ತಮ್ಮ ಕೆಲಸಕ್ಕೆ ಬಾರದ ಜಾನುವಾರುಗಳನ್ನು ಮಾರುವ ಬಡ ರೈತರೂ ಹಿಂದೂಗಳೇ. ಕರಾವಳಿಯ ಭಜರಂಗಿಗಳು ಯಾವ ಹಿಂದೂಗಳ ಬಗ್ಗೆ ಬೊಬ್ಬೆ ಹೊಡೆಯುತ್ತಿದ್ದಾರೆ?

ಪತ್ರಿಕೆಗಳು ಸೃಷ್ಟಿಸಿದ ಕಿರುಮಂಜೇಶ್ವರದ 'ಕಸಾಯಿಖಾನೆ'

ಕಿರುಮಂಜೇಶ್ವರ, ಕುಂದಾಪುರದಿಂದ ಸುಮಾರು ಇಪ್ಪತ್ತು ಕಿ.ಮೀ. ದೂರದಲ್ಲಿರುವ ಕಡಲತೀರದ ಸಣ್ಣ ಊರು. ಇದೇ ಜನವರಿ 1ರಂದು ಅಲ್ಲಿನ 9 ಮುಸ್ಲಿಮರ ಮನೆಗಳಲ್ಲಿ ಮಾಂಸಕ್ಕಾಗಿ ಜಾನುವಾರುಗಳನ್ನು ಕಡಿಯಲಾಗುತ್ತಿದೆ ಎಂಬ ಸುದ್ದಿ ಹಬ್ಬಿ ಬೆಳಿಗ್ಗೆ 10 ಗಂಟೆಯ ಸುಮಾರಿಗೆ ಆ ಮನೆಗಳ ಸುತ್ತ ಜನ ಜಮಾಯಿಸತೊಡಗಿದ್ದರು. ಶಾಲೆಗೆ ಹೋಗುವ ಪ್ರಾಯದ ಸಣ್ಣ ಮಕ್ಕಳಿಂದ ಹಿಡಿದು ನಡುಪಯಸ್ಸಿನವರವರೆಗೆ ಎಲ್ಲಾ ಪ್ರಾಯದವರೂ ಆ ಗುಂಪಿನಲ್ಲಿದ್ದರು. ಹತ್ತಿರತ್ತಿರ ಒಂದು ಸಾವಿರದಷ್ಟಿದ್ದ ಈ ಗುಂಪಿನಲ್ಲಿ ಹೆಚ್ಚು ಬಿಲ್ಲವ, ಮೊಗವೀರ, ಗಾಣಿಗ, ಬಡಗಿ, ಭಂಡಾರಿ (ಕ್ಷೌರಿಕ) ಮುಂತಾದ ಈ ಪ್ರದೇಶದ ತೀರಾ ಕೆಳಜಾತಿಯವರು; ಬ್ರಾಹ್ಮಣ ಮತ್ತಿತರ ಮೇಲ್ಜಾತಿಯವರು ಬೆರಳೆಣಿಕೆಯಷ್ಟು ಮಾತ್ರ ಇದ್ದರು.

ಈ ಜನರ ಗುಂಪು, ಮುಸ್ಲಿಮರನ್ನು, ಇಸ್ಲಾಂ ಧರ್ಮವನ್ನು ಅತ್ಯಂತ ಅಶ್ಲೀಲವಾಗಿ ಬೈಯುತ್ತಾ ಮುಸ್ಲಿಮರ ಮನೆಬಾಗಿಲುಗಳನ್ನು ಒತ್ತಾಯದಿಂದ ತೆರೆಸಿ ಅಲ್ಲಿ ಏನು ನಡೆದಿದೆ ಎಂಬ ತಪಾಸಣೆ ನಡೆಸಿದೆ. ಮುಸಲ್ಮಾನರಿಗೆ ಬಕ್ರೀದ್ ಮೂರು ದಿನಗಳ ಹಬ್ಬವಾಗಿದ್ದು, ಕಿರುಮಂಜೇಶ್ವರದ ಒಂಭತ್ತು ಮನೆಯವರು ಈ ವರ್ಷ ಬಕ್ರೀದ್‌ನ ಎರಡನೇ ದಿನ ಅಂದರೆ, ಜನವರಿ 1ರಂದು ಹಬ್ಬದ ಖುರ್ಬಾನಿಗೆ ತಯ್ಯಾರಿ ನಡೆಸಿದ್ದರು. ಈ ಒಂಬತ್ತು ಮನೆಯವರಲ್ಲಿ ಮೂರು ಮನೆಗಳಲ್ಲಿ ಆವತ್ತು ಜಾನುವಾರುಗಳನ್ನು ಕಡಿದಿರುವುದೂ ಹೌದು. ಇದು ಒಂದು ಅಪರಾಧ ಎಂದೇ ಇಟ್ಟುಕೊಂಡರೂ ನೂರಾರು ಹಿಂದೂಗಳು -ಚಿಳ್ಳೆಪಿಳ್ಳೆಗಳು ಸಹ- ಈ ಮುಸ್ಲಿಮರ ಮನೆಯೆದುರು ಗುಂಪು ಸೇರಿ, ಮನೆಯಲ್ಲಿದ್ದವರಿಗೆ, ಅವರ ಹಿರಿಯರಿಗೆ ಮತ್ತು ದೇವರಿಗೆ ವಾಚಾಮಗೋಚರವಾಗಿ ಬೈಯುತ್ತಾ, ಗುಂಪುತನಿಖೆ ಮಾಡುವಂತಹ ವಿಷಯವೇ ಇದು? ಕಿರುಮಂಜೇಶ್ವರದ ಮುಸ್ಲಿಮರು ತಮ್ಮ ಹಬ್ಬದ ದಿನ, ತಮ್ಮ ಮನೆ ಅಂಗಳದಲ್ಲೇ ತಮ್ಮದೇ ಆಸುಪಾಸಿನ ಜನರ ಮೂದಲಿಕೆಯಿಂದ ಅವಮಾನಿತರಾದರು ನಿಜ. ಆದರೆ ಈ ಗುಂಪಿನವರು ಹಿಂದೂಗಳ ಮಾನ ಉಳಿಸಿದರಾ?


ಜೆಫ್ರಿ ಉಬೇದುಲ್ಲಾ ಮಜರ್

ನಿರಪರಾಧಿಗಳನ್ನು, ಅಸಹಾಯಕರನ್ನು, ಹಿಂಸಿಸುವವರು ಎಷ್ಟು ಮಾನವಂತರು?

ಕಿರುಮಂಜೇಶ್ವರದಲ್ಲಿ ಆ ದಿನ ಉದ್ರಿಕ್ತ ಹಿಂದೂಗಳ ಗುಂಪು ಮುಸ್ಲಿಮರ ಮನೆ ಆವರಣದಲ್ಲಿ ತಮ್ಮ ದಾಂಧಲೆ ನಡೆಸುತ್ತಿದ್ದಾಗ, ಸ್ಥಳದಲ್ಲಿ ಒಂದು ವ್ಯಾನ್ ಭರ್ತಿ ಪೊಲೀಸರಿದ್ದರು. ಸಂಜೆ ನಾಲ್ಕು ಗಂಟೆಯವರೆಗೆ ಈ ಪೊಲೀಸರು ಜನರನ್ನು ಬೆದರಿಸುವ ಗೋಜಿಗೇ ಹೋ
ಪೊಲೀಸರ ಕಣ್ಣೆದುರಿಗೇ ಗುಂಪಿನಲ್ಲಿದ್ದವರು ಮ
ಮನೆ, ಕಿಟಕಿ ಗಾಜುಗಳನ್ನು ಪುಡಿ ಮಾಡಿದರು
ಮನೆ ಬಾಗಿಲುಗಳನ್ನು ಒತ್ತಾಯದಲ್ಲಿ ತೆಗೆಸಿದರು;
ಮನೆಗಳ ಬಾಗಿಲನ್ನು ಜಖಂ ಕೂಡಾ ಮಾ
ಬಾಯಿಗೆ ಬಂದದ್ದೆಲ್ಲಾ ಬೈಯುವುದಂತೂ ನಡೆದೇ
ಊರಿನ ಹೆದ್ದಾರಿಯಲ್ಲಿ ಮೊದಲಿಗೆ ಸಿಗುವ ಅ
ಸಾಹೇಬರ ಮನೆಯಂಗಳದಲ್ಲಿ ಹಬ್ಬದ ಅಡು
ಅಣಿಗೊಳಿಸಲಾಗಿದ್ದ ಮಾಂಸ ಇತ್ಯಾದಿಗಳನ್ನೆಲ್ಲ
ಎಸೆದು, ಒಂದು ಮೂಲೆಯಲ್ಲಿ ಇರಿಸಿದ್ದ ಸ
ಪುಡಿ ಮತ್ತು ಟಾಯ್ಲೆಟ್ ಸ್ವಚ್ಛಗೊಳಿಸುವ
ಅವರ ಹಿತ್ತಲಿನ ಬಾವಿಗೆ ಹಾಕಿದರು; ಜೊತೆಗೆ
ಕೆಲವು ಪಾತ್ರೆ ಮತ್ತು ಸೈಕಲ್ ಅನ್ನು
ಎಸೆಯಲಾಯಿತಂತೆ. ಈ ಘಟನೆ ನಡೆದ ಐದು
ನಂತರ ನಾವು ಅಮೀರ್ ಸಾಹೇಬರ ಮನೆಗೆ
ದ್ದಾಗಲೂ ಅವರು ತಮ್ಮ ಬಾವಿಯ ನ
ಬಳಸುತ್ತಿರಲಿಲ್ಲ.

ಈ ಗುಂಪಿನ ದಾಳಿಗೆ ತುತ್ತಾದ ಇನ್ನೊಂದು
ಅಲೀ ಸಾಹೇಬರದ್ದು. ಇವರು ಕಿರು ಮಂಜೇಶ್ವರ
ಆಸುಪಾಸಿನ ಅನೇಕ ಸಂಸ್ಥೆಗಳಿಗೆ ಉದಾರವಾಗಿ ಸ
ಮಾಡಿದವರು. ಊರಿನಲ್ಲಿ ಅವರಿಗೆ ಹಲವು ಸನ್ಮಾ
ನಡೆದಿದ್ದು, ಒಮ್ಮೆ ಶಾಸಕ ಗೋಪಾಲ ಪೂಜಾರಿ
'ಎಷ್ಟು ಸಲ ನಿಮಗೆ ನಾನು ಸನ್ಮಾನ ಮಾಡು
ಎಂದು ಹಾಸ್ಯ ಮಾಡಿದ್ದರಂತೆ. ವಯೋವೃದ್ಧರ
ನಾವು ಹೋದಾಗ ಹಾಸಿಗೆಯಲ್ಲೇ ಮಲಗಿದ್ದ
ಸಾಹೇಬರೇ ನಮಗೆ ಈ ವಿಷಯ ತಿಳಿಸಿ '
ನಮ್ಮ ಮನೆಗೂ ಬಂದು ಬೇಡದ್ದನ್ನೆಲ್ಲ ಮಾ
ಎಂದು ಅತೀವ ವ್ಯಥೆಯಲ್ಲಿ ಹೇಳಿದ
ದಿನ ಗುಂಪಿನಲ್ಲಿದ್ದವರು ಅವರ ವ
ಹಿಂಬಾಗಿಲು ಮುರಿದು ಅಡುಗೆಮನೆಯಲ
ಮಾಂಸವಿದೆಯಾ ಎಂದು ತನಿಖೆ ಮಾಡಿ
ಯಾವ ಮಾಂಸವೂ ಇರಲಿಲ್ಲ- ಮನೆಯ
ಬಾಗಿಲು ತೆರೆಯುವಂತೆ ಒತ್ತಾಯಿ
ತೆರೆಯದಿದ್ದರೆ ಬಾಗಿಲು ಮುರಿಯುತ್ತೇವೆ
ಬೆದರಿಕೆ ಹಾಕಿದರು. ಮನೆಯ ಒಳಗಿ
ಸಾಹೇಬರ ಮಗಳು ಶಬಾನಾ
ಗೋಮಾಂಸ ಮಾಡಿಲ್ಲ, ಕಡಿದೂ ಇಲ್ಲ'
ಪರಿಪರಿಯಾಗಿ ಹೇಳಿದರು. ಅದಕ್ಕೆ ಪ್ರ
ಗುಂಪಿನವರು 'ನಿಮ್ಮ ಹಾಗೇ ಹಿಂದೂ
ಮನೆಯಲ್ಲಿ ಒಬ್ಬಳೇ ಇದ್ದು ಇಷ್ಟು
ಮುಸ್ಲಿಮರು ಇರುತ್ತಿದ್ದರೆ ಸುಮ್ಮನೆ ಬಿಡು
ಮೊದಲು ಬಾಗಿಲು ತೆರೆಯಿರಿ' ಎಂದು
ದ್ದಾರೆ. ಅಲಿ ಸಾಹೇಬರ ಮನೆಯಲ್ಲಿ
ಮಾಂಸದ ಅಡುಗೆಯನ್ನೇ ಮಾಡಿರದಿದ್ದರೂ
ಮಗ ಸಲೀಮನನ್ನು ಎಳೆದುಕೊಂಡು
ಆತನ ಕೈಯಲ್ಲಿ ಒಂದು ಮಾಂಸದ ತುಣ
ಫೋಟೋ ತೆಗೆಸಲಾಗಿದೆ. ಅಂಗಳದಲ್ಲಿ ನಿಲ್ಲಿಸಿದ್ದ ಸ
ಬೈಕನ್ನು 'ದನದ ಮಾಂಸದ ಸಾಗಾಣಿಕೆಗೆ ಬಳಸಲಾ
ಎಂಬ ದೂರಿನ ಮೇರೆಗೆ ಪೊಲೀಸರು ವ
ಕೊಂಡಿದ್ದಾರೆ.

ಕಿರುಮಂಜೇಶ್ವರದಲ್ಲಿ ರಾಷ್ಟ್ರೀಯ ಹೆದ್ದಾರಿಯ

...ಮಾಡಿಕೊಂಡಿರುವ ಅಬ್ದುಲ್ಲಾ ಸಾಹೇಬರು ಸ್ವತಃ ... ಹಾಲು ಮಾರುವವರು. ಅವರ ಕೊಟ್ಟಿಗೆಯಲ್ಲಿ ...ರ್ಸಿ ಮತ್ತು ಎರಡು ಕ್ರಾಸ್ ತಳಿಯ ದನಗಳಿದ್ದು, ... ಸಮೀಪದ ನಾಗೂರು ಮಿಲ್ಕ್ ಸೊಸೈಟಿಗೆ ...ಸ್ತಿ ಜೋಪಾನಾ ಹಾಲು ಮಾರುತ್ತಾರೆ. ಆದರೆ ... ಭಜರಂಗಿಗಳ ಚಿತಾವಣೆಯಿಂದ ಪೊಲೀಸರು ...ಳನ್ನು ಜೊತೆಗೆ ಎರಡು ಕರು ಮತ್ತು ಮೂರು ...ನ್ನು ವಶಪಡಿಸಿಕೊಂಡು ಬೈಂದೂರು ಸ್ಟೇಷನ್ನಿಗೆ ... ಈಗ, ಅಬ್ದುಲ್ಲಾ ಸಾಹೇಬರ ಪತ್ನಿ ಕಳೆದ ... ವರ್ಷಗಳಿಂದ ತಮಗೆ ಹಾಲು ಸಪ್ಲೈ ...ತ್ತಿದ್ದಾರೆ ಎಂದು ನಾಗೂರು ಮಿಲ್ಕ್ ಸೊಸೈಟಿ ... ಲೆಟರ್ ಕೊಟ್ಟಮೇಲೆ ಪೊಲೀಸರು ದನಕರುಗಳನ್ನು ... ಕೊಂಡೊಯ್ಯಲು ಅನುಮತಿ ಕೊಟ್ಟಿದ್ದಾರಂತೆ! ...ವರ ಮೂರು ಆಡುಗಳು ಏನಾದವು ಎಂಬುದು ಅವರಿಗೆ ಇನ್ನೂ ತಿಳಿದುಬಂದಿಲ್ಲ.

...ಲೀಸರು ಅಬ್ದುಲ್ಲಾ ಸಾಹೇಬರು ಮತ್ತು ಅವರ ...ನ್ನು ಸಹ ಗೋಹತ್ಯೆಯ ಆಪಾದನೆಯ ಮೇಲೆ ... ಒಯ್ದರು. ಅಲ್ಲಿ ಅವರಿಗೆ ಜಾಮೀನು ಕೊಡಲು ...ರನ್ನು ಸ್ಟೇಷನ್ನಿನ ಎದುರೇ ಭಜರಂಗಿಗಳು ಹೊಡೆದು ...ರಂತೆ. ಸುಮಾರು 50 ವರ್ಷದ ಅಬ್ದುಲ್ಲಾ ...ರು ದುಬೈಯಲ್ಲಿ ನೆಲೆಸಿದ್ದು, ಡ್ರೈವರ್ ವೃತ್ತಿ ...ಕೊಂಡಿದ್ದಾರೆ. ಇತ್ತೀಚೆಗೆ ಅವರು ತಮ್ಮ ಮಗಳ ...ಗೆಂದು ಊರಿಗೆ ಬಂದಿದ್ದರು. ಕಳೆದ ವರ್ಷ ...ಇನ್ನೊಬ್ಬ ಮಗಳು ಮತ್ತು ಅಳಿಯ ಆಕಸ್ಮಿಕವಾಗಿ ...ಂಡರು. ಅದೂ ಸಾಲದ್ದಕ್ಕೆ ಅವರಿಗೆ ಬಿ.ಪಿ. ...ಡಯಾಬಿಟೀಸ್ ಇದ್ದು, ಮೊನ್ನೆಯ ಘಟನೆಯಿಂದ ... ಕುಸಿದುಹೋಗಿದ್ದಾರೆ. "ಹಬ್ಬಕ್ಕೆಂದು ಆ ದಿನ ... ನಮ್ಮ ಹೊಸ ಬೀಗರು ಬಂದಿದ್ದರು. ಅವರ ...ೇ ಇದೆಲ್ಲಾ ನಡೆದುಹೋಯಿತು" ಎಂದು ನಮಗೆ ...ಾಗ ಅವರಿಗೆ ಅಳುವೇ ಬರುವಂತಿತ್ತು. ಅವತ್ತು ... ಮನೆಯಂಗಳದಲ್ಲಿ ನೆರೆದಿದ್ದವರೆಲ್ಲಾ ಕಿರು...ಶ್ವರದ ಆಸುಪಾಸಿನವರೇ– ಮರವಂತೆ, ನಾವುಂದ, ...ದ, ಶಿರೂರು, ಬೈಂದೂರು ಮುಂತಾದ ಊರಿ...

...ಬ್ದುಲ್ಲ, ಅವರ ಬೈಗುಳವನ್ನು ವರ್ಣಿಸುತ್ತಾ "ನಮಗೆ, ...ಧರ್ಮಕ್ಕೆ ಏನೆಲ್ಲಾ ಅಂದರು ಎಂದು ಹೇಳಲು ...ಬಾಯೇ ಬರುವುದಿಲ್ಲ. ನಾವು ಅವತ್ತು ಕೋಣ ...ದ್ದು ಹೌದು; ಇಲ್ಲ ಎಂದು ಹೇಳುವುದಿಲ್ಲ. ನಮ್ಮ ...ಯ ಪ್ರಕಾರ ಒಂದು ಕುರಿ ಕಡಿದರೆ ಒಬ್ಬನ ಹರಕೆ ...ರ ಹಾಗೆ; ಒಂದು ಎತ್ತು ಯಾ ಕೋಣ ಕಡಿದರೆ ... ಜನರ ಹರಕೆ ತೀರಿಸಿದ ಹಾಗೆ. ಆದರೆ ...ಂಜೇಶ್ವರದಲ್ಲಿ ನಾವು ಯಾರೂ ಮಾಂಸದ ...ರ ಮಾಡುವವರಲ್ಲ. ಹಬ್ಬದ ಮೂರು ದಿನ ... ಗೋಮಾಂಸದ ವಿಷಯದಲ್ಲಿ ರಿಯಾಯಿತಿ ಇದೆ ... ಭಾವಿಸಿದ್ದೆವು. ಆದರೆ ನೋಡಿ, ನಮ್ಮ ಹಬ್ಬದ ...ಮ್ಮ ಆಸುಪಾಸಿನವರೇ ನಮ್ಮ ಹೊಟ್ಟೆ ಉರಿಸಿದರು. ... ಕಿರುಮಂಜೇಶ್ವರದಲ್ಲಿ ಮುಸ್ಲಿಮರಲ್ಲಿ ಯಾರೂ ... ತೊಟ್ಟು ನೀರೂ ಕೂಡ ಬಾಯಿಗೆ ಹಾಕಿಕೊಳ್ಳಲಿಲ್ಲ" ... ಹೇಳಿದರು.

...ತಿ ಅಥವಾ ದೀಪಾವಳಿ ಹಬ್ಬದ ದಿನ ಮುಸ್ಲಿಮರು ...ಗಳ ಮನೆ ಅಂಗಳಗಳಿಗೆ ನುಗ್ಗಿ ಬಾಯಿಗೆ ...ನ್ನು ಬೈದರೆ ಹಿಂದೂಗಳಿಗೆ ಹೇಗೆ ಅನ್ನಿಸುತ್ತದೆ? ... ಈ ಬಗೆಯ ಯುಕ್ತಾಯುಕ್ತ ವಿವೇಚನೆಯನ್ನೇ ...ಯ ಈ ಮುಂದುವರಿದ ಜಿಲ್ಲೆಗಳಲ್ಲಿ ಹಿಂದೂತ್ವ ...ಡಿಸಿದೆ. ಅದಕ್ಕೆ ಸರಿಯಾಗಿ ಕಿರುಮಂಜೇಶ್ವರದ ...ನುನ್ನು ವರದಿ ಮಾಡಿದ ಯಾವ ಪತ್ರಿಕೆಯೂ– ...ಪ್ರಭ ಒಂದನ್ನು ಹೊರತುಪಡಿಸಿ– ಅಲ್ಲಿನ ...ಮರು, ಅವತ್ತು ಹಬ್ಬದ ತಯಾರಿ ನಡೆಸಿದ್ದರು ... ಸತ್ಯವನ್ನು ತಿಳಿಸಿಲ್ಲ. ಯಾವ ವರದಿಗಾರನಿಗೂ, ...ರಿನ ಮುಸಲ್ಮಾನರನ್ನು ನಡೆದ ಘಟನೆಗಳ ಬಗ್ಗೆ ... ಮಾತು ಕೇಳಬೇಕು ಎಂದು ಹೊಳೆದಿಲ್ಲ. 'ಅಕ್ರಮ ...ಖಾನೆ', 'ಗೋಮಾಂಸ ಘಟಕ', 'ಗೋಮಾಂಸ ...' – ಇವು ನಡೆದ ಘಟನೆ ಬಗ್ಗೆ ಪ್ರಜಾವಾಣಿ ... ವಿಜಯ ಕರ್ನಾಟಕಗಳು ತಮ್ಮ ವರದಿಯಲ್ಲಿ ...ಿದ ಸುದಿಗಟ್ಟುಗಳು. ಉದಯವಾಣಿಯಂತೂ ... ಒಂದು ಹೆಜ್ಜೆ ಮುಂದೆ ಹೋಗಿ ಅಬ್ದುಲ್ಲಾ ...ರ ಕೊಟ್ಟಿಗೆಯೇ ಕಸಾಯಿಖಾನೆಯಾಗಿದ್ದು ಅಲ್ಲಿ ...ದನಗಳನ್ನು ವಧೆ ಮಾಡಲಾಗುತ್ತಿತ್ತು ಎಂದು ...ಿದೆ. ಅಬ್ದುಲ್ಲಾ ಸಾಹೇಬರು ತಮ್ಮ ಹಿತ್ತಲಿನಲ್ಲಿದ್ದ ...ಗೆಯನ್ನೂ ಅದರೊಟ್ಟಿಗೇ ಇದ್ದ ಗೊಬ್ಬರದ ...ಯನ್ನೂ ನಮಗೆ ತೋರಿಸಿದರು. ಅವರ ದನಗಳು ...ಸ್ಕೆ ಹಾಕಿದ ಸಗಣಿಯಿಂದ ಅದು ತುಂಬಿತ್ತು ...ಲ್ಲಾ ಸಾಹೇಬರ ದನಗಳು ಸಹ ತಿನ್ನುವುದು ಹುಲ್ಲನ್ನೇ. ... ಕರಾವಳಿಯ ಪತ್ರಕರ್ತರು ಹೊಟ್ಟೆಗೆ ಏನು ...ರೆ?

ರಾಮ ಸೀತೆಗೇನಾಗಬೇಕು?

ಡಾ. ಪ್ರೊ. ಲಂಕೆ ರಾಮಮೂರ್ತಿಯವರ 5 ಸೀತಾಯಣ



ರಾಮನ ತಾಟಸ್ಥ್ಯ, ಸುಮ್ಮಾನ ರಾಮನು ಬಿಲ್ಲೆತ್ತಿ ಗೆದ್ದ ವೀರ್ಯಶುಲ್ಕಳನ್ನು ಒಲ್ಲೆನೆನ್ನುವುದರಿಂದ ಹಿಡಿದು ರಾವಣನನ್ನು ಕೊಂದು ವಿಮೋಚಿತಳಾದ ಸೀತೆಯನ್ನು ಒಲ್ಲೆನೆನ್ನುವವರೆಗೂ ಒಂದೇ ಸಮನಾದ, ಸಮಸ್ಥಿತಿಯ ಗುಣ ವೈಶಿಷ್ಟ್ಯ. ಸೀತೆಯ ಸೊಂಟಕ್ಕೆ ಕೈಹಾಕಿದ ವಿರಾಧನನ್ನು ನೋಡುತ್ತಾ, ತಾತ್ವಿಕ ಚಿಂತನೆಯ ಸುಮ್ಮಾನದಲ್ಲಿ 'ಅನಾಥ'–ಈ ಮಾತನ್ನು ಲಕ್ಷ್ಮಣ ರಾಮನಿಗೆ ಹೇಳುತ್ತಾನೆ –ಸೀತೆಯಲ್ಲಿ ನಿಂತ ರಾಮ, ಸೀತಾಪಹರಣದ ನಂತರ ಮತ್ತೊಂದು ಜಿಂಕೆಯನ್ನು ಕೊಂದು ಮಾಂಸ ಸಂಚಯನ ಮಾಡುವ ಸುಮ್ಮಾನ ತಾಟಸ್ಥ್ಯದಲ್ಲಿ ನಿಲ್ಲುತ್ತಾನೆ. ಕೊನೆಯಲ್ಲಿ ರಾವಣನನ್ನು ಕೊಂದ ಮೇಲೆ ಸೀತೆಯತ್ತ ಧಾವಿಸದೆ, ರಾವಣನ ಶವಸಂಸ್ಕಾರ ಮಾಡಿ, ವಿಭೀಷಣನ ಪಟ್ಟಾಭಿಷೇಕ ಮಾಡಿದ ನಂತರ, ಸೀತೆಗೆ ಹನುಮಂತನಿಂದ ತನ್ನ ವಿಜಯ ವಾರ್ತೆಯನ್ನು ಕಳುಹಿಸಿ, ಹನುಮಂತನು 'ಶ್ರೀರಾಮ ಯಾರಿಗೋಸ್ಕರ ಈ ಮಹೋದ್ಯೋಗದಲ್ಲಿ ತೊಡಗಿದೆಯೋ, ಯಾರಿಗೋಸ್ಕರ ನಮ್ಮ ಕಾರ್ಯಗಳೆಲ್ಲವೂ ಫಲಿಸಿದವೋ ಆ ದೇವಿಯನ್ನು ನೀನು ನೋಡಬೇಕು' (ಯು.ಉ. 117, 1-2) ಎಂದ ಮೇಲೆ, ವಿಭೀಷಣನನ್ನು ಕಳುಹಿಸಿ, ಸೀತೆಗೆ ಅಭ್ಯಂಗಸ್ನಾನ ಮಾಡಿಸಿ, ಶುದ್ಧಗೊಳಿಸಿ, ಅವಳನ್ನು ಎಲ್ಲರ ಮಧ್ಯ ದೊಂಬಿಗದ್ದಲದಲ್ಲಿ, ಯುದ್ಧ ಭೂಮಿಯಲ್ಲಿ, 'ಇಂತಹ ಪರಿಸ್ಥಿತಿಗಳಲ್ಲಿ ಮಹಿಳೆಯರು ಪರಪುರುಷರಿಗೆ ಕಾಣಿಸಿಕೊಂಡರೆ ತಪ್ಪಿಲ್ಲ (ಅದೇ 27)ವೆಂದು, ಲಕ್ಷ್ಮಣ ಸುಗ್ರೀವರು 'ವ್ಯಥೆಪಡು'ತ್ತಿರುವಂತೆಯೇ, ಸೀತೆಯನ್ನು ಸಾರ್ವಜನಿಕ ಪ್ರೇಕ್ಷೆಗೊಡ್ಡಿ, ಅವಳು ಲಜ್ಜೆಯಿಂದ ತನ್ನ ಗಾತ್ರಗಳಲ್ಲಿ ಅಡಗಿ ಹೋಗುವಳೋ ಎಂಬಂತೆ ನಾಚುತ್ತ–ನೆರೆದಿದ್ದ ಜನರೆದುರಿಗೆ ನಾಚುತ್ತಾ ಸೆರಗಿನಿಂದ ಮುಖವನ್ನು ಮರೆಸಿಕೊಂಡು ಪತಿಯ ಸಮೀಪಕ್ಕೆ ಬಂದು, 'ಆರ್ಯಪುತ್ರ' ಎಂದು ಹೇಳಿ ಅಳತೊಡ(ಅದೇ 23-24)ಗಲು, ಇರುವ ಅವಳನ್ನು 'ಪರುಷವಾಕ್ಯ'ಗಳಿಂದ 'ನಿಂದಿಸಿ,' ಸಾರ್ವಜನಿಕರೆದುರು ಅವಮಾನಿಸಿ, ನಿರಾಕರಿಸಿ, ಉಪೇಕ್ಷೆಯ ಪರಮಸುಮ್ಮಾನದಲ್ಲಿ ನಿಲ್ಲುತ್ತಾನೆ.

ಈ ಅಮಾನುಷತೆಯ ಪರಮಾವಧಿಯವರೆಗೆ ಯಾರು ರಾಮಾಯಣವನ್ನು ಆಮೂಲಾಗ್ರವಾಗಿ ಓದಿದ್ದಾರೋ ಅವರು ಜನಸಾಮಾನ್ಯರಲ್ಲಿ ಇಂದಿಗೂ ಜೀವಂತವಾಗಿ ಪ್ರಚಲಿತವಾಗಿರುವ 'ರಾತ್ರಿಯೆಲ್ಲಾ ರಾಮಾಯಣ ಕೇಳಿ ರಾಮ ಸೀತೆಗೇನಾಗಬೇಕು?' ಎನ್ನುವ ಪ್ರಶ್ನೆಯನ್ನು ತಮಗೇ ಕೇಳಿಕೊಳ್ಳದಿರಲಾರರು. ನಿಜಕ್ಕೂ ರಾಮ ಸೀತೆಗೇನಾಗಬೇಕು? ಎಂಬ ಪ್ರಶ್ನೆ ರಾಮಾಯಣದಷ್ಟೇ ದೈತ್ಯವಾಗಿ ಎದ್ದು ನಿಲ್ಲುತ್ತದೆ. ರಾಮ ಸೀತೆಗೆ ಗಂಡನೇ? ಅವನು ಅವಳ ಕೈಹಿಡಿದನೇ? ಸೀತೆಯನ್ನು ಗೆದ್ದೊಡನೆಯೇ 'ಕೈಬಿಟ್ಟ' ರಾಮ, ರಾಮಾಯಣದುದ್ದಕ್ಕೂ ಹಂತಹಂತವಾಗಿ ಕೈಬಿಡುತ್ತಲೇ ಅಂತ್ಯದಲ್ಲಿ ಅವಳನ್ನು ಸಂಪೂರ್ಣವಾಗಿ ಕೈಬಿಟ್ಟು ಬೆಂಕಿಗೆ ಹಾಕುತ್ತಾನೆ.... ರಾಮನ ಸೂಚನೆಯ ಮೇರೆಗೆ ಲಕ್ಷ್ಮಣ ಚಿತೆ ಏರ್ಪಡಿಸಿ ಸೀತೆಯನ್ನು ಬೆಂಕಿಗೆ ಸಜ್ಜು ಮಾಡುತ್ತಾನೆ. ಅಷ್ಟೇ ಅಲ್ಲ, ಆ ಬೆಂಕಿಯಲ್ಲಿ ಬಿದ್ದು ಎದ್ದು ಬಂದು ಪರಿಶುದ್ಧ ಎಂದು ಅಗ್ನಿಸಾಕ್ಷಿಯಾಗಿ ಸಾಬೀತು ಮಾಡಿದ ಸೀತೆಯನ್ನು ಮತ್ತೊಮ್ಮೆ ಪರಿಪೂರ್ಣವಾಗಿ ಕೈಬಿಟ್ಟು ಕಾಡಿಗಟ್ಟುತ್ತಾನೆ, ಶ್ರೀರಾಮ.

ಇನ್ನು ರಾಮಾಯಣದ ಉದ್ದಗಲಗಳಲ್ಲಿ, ಎಲ್ಲಿ ರಾಮ ಸೀತೆಯ ಗಂಡ ಎಲ್ಲಿ ರಾಮ ಸೀತೆಯ ಕೈಹಿಡಿದಿದ್ದಾನೆ? ಯಾವ ಬಿಲ್ಲನ್ನೆತ್ತಿ, ಹೆದೆಯೇರಿಸಿ ಶರಸಂಧಾನ ಮಾಡಬೇಕಾಗಿತ್ತೋ ಆ ಬಿಲ್ಲು ಸಿಡಿದು ಇಬ್ಭಾಗವಾಗಿ ಮುರಿದುಬಿದ್ದು ರಾಮನ ಪುಂಸತ್ವದ ಭಗ್ನತೆಯನ್ನು ಸಾಂಕೇತಿಕವಾಗಿ ಸಾರಿದ ಮೇಲೆ ಯಾವ ರಾಮನನ್ನು ಕುರಿತು ಸೀತೆ 'ಪುರುಷರೂಪದ ಸ್ತ್ರೀ'ಯೆಂದು 'ತನ್ನ ಹೆಂಡತಿಯನ್ನು ಇತರರಿಗೆ ಕೊಡುವ ಶೈಲೂಷ'ನೆಂದು ಮೂದಲಿಸಿದ ಮೇಲೆ ಯಾವ ರಾಮನಿಗೆ ಅಯೋಧ್ಯೆಯಲ್ಲಿ, ವನವಾಸದಲ್ಲಿ, ಮತ್ತೆ ಅಯೋಧ್ಯೆಯಲ್ಲಿ ಮಕ್ಕಳಾಗದೆ, ಕಾಡಿನಲ್ಲಿ ಹುಟ್ಟಿದ ಪ್ರಕೃತಿಯ ಹೆಸರಿನ (ಲವ–ಕೂದಲು, ಕುಶ–ಹುಲ್ಲು) ಪ್ರಕೃತಿ ಮಕ್ಕಳ ದತ್ತಿ ಅವನಿಗೆ ಸಿಕ್ಕಮೇಲೆ; ಯಾವ ರಾಮನು ಸೀತೆಯನ್ನು ಅನಾಯಾಸವಾಗಿ ತನ್ನ ರಾಜ್ಯದೊಂದಿಗೆ ಭರತನಿಗೆ ಕೊಡಲು ತಯಾರಾದ ಮೇಲೆ, ಸುಗ್ರೀವನಿಗೂ ಲಕ್ಷ್ಮಣನಿಗೂ 'ಸೀತೆಯಿಂದ ನನಗೇನಾಗಬೇಕಾಗಿದೆ'ಯೆಂದು ಪದೇಪದೇ ಅವಳನ್ನು ನಿರಾಕರಿಸುತ್ತಾ ಅವರಿಬ್ಬರನ್ನು ಸೀತೆಗಿಂತಲೂ ಮೇಲಾಗಿ ಪ್ರೀತ್ಯಾದರಿಸುತ್ತಿದ್ದ ಮೇಲೆ; ಯಾವ ರಾಮನು ಸೀತೆಯನ್ನು ಪರಿತ್ಯಜಿಸಿ ಅವಳು ಲಕ್ಷ್ಮಣನನ್ನಾಗಲಿ, ಭರತನನ್ನಾಗಲೀ ಕೂಡಲು ಅಥವಾ ವಿಭೀಷಣ, ಸುಗ್ರೀವರನ್ನು ಸೇರಲು ಕೈಹಿಡಿದ ಗಂಡನಾದ ತಾನೇ ಸೂಚಿಸಿದ ಮೇಲೆ; ಯಾವ ರಾಮನು ಲಕ್ಷ್ಮಣ, ಭರತರನ್ನು ಮಾತಾಡಲೂ ಬಿಡದೆ, ಆಗ್ರಹದಿಂದ, ಅಗ್ನಿಯಿಂದ ಶುದ್ಧಳೆಂದು ಹೊರಬಂದ ಸೀತೆಯನ್ನು ಕಾಡಿಗಟ್ಟಿದ ಮೇಲೆ; ಅಂತ್ಯದಲ್ಲಿ ಯಾವ ರಾಮನು ಮತ್ತೆ ಸೀತೆಯನ್ನು ವಾಲ್ಮೀಕಿಯ ಆಶ್ರಮದಲ್ಲಿ ಕಂಡು, ಅವಳು ಪುನಃ ತನ್ನ ಶುದ್ಧತೆಯ ಬಗ್ಗೆ ಶಪಥ ಮಾಡಬೇಕೆಂದಾಗ, ಸೀತೆ, ವಾಲ್ಮೀಕಿಯ ಮತ್ತು ತನ್ನ ಪ್ರಮಾಣವಚನಗಳಿಂದ ಪರಿಶುದ್ಧಳೆನಿಸಿಕೊಂಡು, ಭೂಗರ್ಭವನ್ನು ಹೊಕ್ಕು ರಾಮನನ್ನು ತನ್ನ ಇಚ್ಛೆಯ ಸ್ವಾತಂತ್ರ್ಯದಲ್ಲಿ ಅಗಲಿ, ತನ್ನ ವಿವಾಹವಿಚ್ಛೇದನವನ್ನು ರುಜುವಾತು ಪಡಿಸಿಕೊಂಡ ಮೇಲೆ–ಆ ರಾಮನು ಸೀತೆಗೆ, ಜೀವನದ ನಿಜದಲ್ಲಿ ಬಾಳಿನ ಸಾಕ್ಷ್ಯದಲ್ಲಿ ಏನಾಗಬೇಕು? ರಾತ್ರಿಯೆಲ್ಲಾ ರಾಮಾಯಣ ಕೇಳಿದವನೇ, ಕಿವಿಗೊಟ್ಟ ಪ್ರಾಮಾಣಿಕನೇ ರಾಮಾಯಣದ ಬಗ್ಗೆ ಈ ಮೂಲಭೂತವಾದ ಒಂದೇ ಪ್ರಾಮಾಣಿಕ ಪ್ರಶ್ನೆಯನ್ನು ಕೇಳಬಲ್ಲ.

> ಯಾರು ರಾಮಾಯಣವನ್ನು ಆಮೂಲಾಗ್ರವಾಗಿ ಓದಿದ್ದಾರೋ ಅವರು ಜನಸಾಮಾನ್ಯರಲ್ಲಿ ಇಂದಿಗೂ ಜೀವಂತವಾಗಿ ಪ್ರಚಲಿತವಾಗಿರುವ 'ರಾತ್ರಿಯೆಲ್ಲಾ ರಾಮಾಯಣ ಕೇಳಿ ರಾಮ ಸೀತೆಗೇನಾಗಬೇಕು?' ಎನ್ನುವ ಪ್ರಶ್ನೆಯನ್ನು ತಮಗೇ ಕೇಳಿಕೊಳ್ಳದಿರಲಾರರು. ನಿಜಕ್ಕೂ ರಾಮ ಸೀತೆಗೇನಾಗಬೇಕು?

ರಾಮಾಯಣದ ವಿಮರ್ಶಕರಲ್ಲನೇಕರು ರಾಮನನ್ನು ಮಾನವನೆಂತಲೇ ಸಾರುತ್ತಾ ವಿಮರ್ಶೆ ಮಾಡಿದವರು. ಅವರೆಲ್ಲರೂ ರಾಮನು ಸೀತೆಯನ್ನು ಅಗ್ನಿಪರೀಕ್ಷೆಗೆ ಗುರಿ ಮಾಡುವುದನ್ನು ಅತಿಮುಖ್ಯವಾಗಿ ಪ್ರಶ್ನಿಸುತ್ತಾ ಅದಕ್ಕೆ ಉತ್ತರವನ್ನು, ರಾಮನ ವರ್ತನೆಯು ಒಟ್ಟಾರೆಯಲ್ಲಿ ಸಮರ್ಥನೀಯವೆಂಬಂತೆ, ಸಾಕಷ್ಟು ಪ್ರಯಾಸದಿಂದಲೇ ಸಾಬೀತು ಮಾಡಿದವರು.

ಆಗಾಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ನಿಯಮಿತವಾಗುತ್ತಿರುವ ಮಾಸ್ತಿಯವರ ಆದಿಕವಿ ವಾಲ್ಮೀಕಿ ಹೀಗೆನ್ನುತ್ತದೆ:

'ರಾಮನು ಸೀತೆಗೆ ಹೇಳಿದ ಮಾತು ಆಗ್ಗೆ ಅಪ್ರಿಯವಾದರೂ ಒಟ್ಟಿಗೆ ಹಿತವಾದದ್ದೆಂದೇ ಕಾಣುತ್ತದೆ. ಪತಿ ಸತಿಯ ಮೈಯನ್ನು ರಕ್ಷಿಸಬೇಕು, ಅವಳ ಹೆಸರನ್ನೂ ರಕ್ಷಿಸಬೇಕು..... ಈ ಸಂದರ್ಭದಲ್ಲಿ ಲೋಕದ ಕಠಿಣವಾದ ಮಾತನ್ನು ಕಿವಿಗೆ ಹಾಕಿ ರಾಮನು ಸೀತೆಗೆ ಪ್ರಿಯನಾದ ಸುಖಗಂತೆ ನಡೆದುಕೊಂಡನು. ರಾಮನ ನಡತೆ ಸರಿಯೆಂದು ಹೇಳುವ ಈ ವಾದವು ಕಣ್ಣನ್ನು ಬಹುಶಃ ಮುಚ್ಚುವ ವಾಕ್ಚಾತುರ್ಯವೆಂದು ಕಾಣಬಹುದು. ಅವರಿಗೆ ನಾವು ಹೇಳುವುದಿಷ್ಟೆ: ಆ ಜನರನ್ನು ಊಹಿಸಿ, ಆ ಸಂದರ್ಭವನ್ನು ಊಹಿಸಿ, ಆ ಸತಿಗೆ ಒಳ್ಳೆಯದಾಗುವಂತೆ ಇನ್ನೇನು ಮಾಡಬಹುದಾಗಿತ್ತೆಂದು ಯೋಚಿಸಿ, ಆಮೇಲೆ ರಾಮನಲ್ಲಿ ಕುಂದನ್ನು ಎಣಿಸುವಿರಂತೆ. 'ಲೋಕ ಏನೆಂದರೆ ಏನು? ಸತ್ಯವಂತರೆಂದು ನಮ್ಮ ಮನಸ್ಸಿಗೆ ಸ್ಥಿರವಾಗಿದ್ದರೆ ಸಾಲದೆ?' ಎನ್ನುವ ಒಂದು ಮಾತನ್ನು ಮಾತ್ರ ನಾವು ಇಲ್ಲಿ ಹೇಳುವುದು ಬೇಡ. ನಮ್ಮ ಸುಖಕ್ಕಾಗಿ ಒಂದು ಕೆಲಸವನ್ನು ಮಾಡುತ್ತಾ ಲೋಕವೇನೆಂದರೆ ಏನು ಎನ್ನುವುದು ದೊಡ್ಡವರ ದಾರಿಯಲ್ಲ' (116-7).

ವಿ. ಸೀತಾರಾಮಯ್ಯನವರ ಸಾಹಿತ್ಯ ಅಕಾಡೆಮಿಯ ಪ್ರಕಟಣೆ ವಾಲ್ಮೀಕಿ ರಾಮಾಯಣ ಹೀಗೆ ಅಭಿಪ್ರಾಯ ಪಡುತ್ತದೆ:

"ಅನೇಕ ಲೇಖಕರು ಅವನನ್ನು (ರಾಮನನ್ನ) 'ನಿಷ್ಠುರ', 'ಕಠೋರಯಶಃ' ಎಂದು ಕರೆದಿದ್ದಾರೆ..."

"(ರಾಮನ) ಆ ಶೀಲ ಗಡುಸಾಗಿರಬಲ್ಲುದು, ನಿಜವಾಗಿಯೂ ಗಂಭೀರ (76).

ಇನ್ನು ನಾವು ನವ್ಯಕ್ಕೆ ಬಂದರೆ ಅಡಿಗರು ರಾಮನ ವರ್ತನೆಯನ್ನು ಹೀಗೆ ಕಾಣುತ್ತಾರೆ.

ಮಣ್ಣನಣುಗಿಯ ಸೆಳವಿನಲ್ಲಿ ಲಂಕೆಗೆ ಬೆಂಕಿ,
ಸುಟ್ಟಲ್ಲದೇ ಮುಟ್ಟನೆಂಬ ಉಢಾಫೆ
(ಶ್ರೀರಾಮನವಮಿಯ ದಿವಸ)

ಅದಕ್ಕೆ, ಅನಂತಮೂರ್ತಿಯವರ ಪ್ರತಿಕ್ರಿಯೆ ರುಜುವಾತುನಲ್ಲಿ ಹೀಗಿದೆ: ನೋಡಿ, ರಾಮನಿಗೆ ಗೊತ್ತಿದೆ, ಸೀತೆ ಪವಿತ್ರಳು ಅಂತ, ಆದ್ದರಿಂದ ಅವನು ಸುಟ್ಟು ಬರದಿದ್ದರೆ ನಾನು ಮುಟ್ಟುವುದಿಲ್ಲ ಅನ್ನುವುದರ 'ಉಡಾಫೆ.' ಜೊತೆಗೆ ರಾಮನು ಸಮಾಜಕ್ಕೆ ಬದ್ಧನಾದ ರಾಜನಾದರಿಂದ, ಎಲ್ಲಾ ಸ್ತರಗಳಲ್ಲೂ ನೈತಿಕವಾಗಿ ಫಲಿಸಬೇಕಾದ ಮನುಷ್ಯನಾಗಿರುವುದರಿಂದ ಸಾಮಾಜಿಕನಾಗಿ ಒಪ್ಪಿಸಿಕೊಳ್ಳುವುದಕ್ಕಾಗಿ, ಈ 'ಉಡಾಫೆ'. (ರುಜುವಾತು 4: 81, 458)

ಈ ಎಲ್ಲ ಪ್ರತಿಕ್ರಿಯೆಗಳಲ್ಲಿ ಒಂದು ಏಕತೆಯಿದೆ: ಒಕ್ಕೊರಲಿನಲ್ಲಿ ರಾಮನ ಸಮರ್ಥನೆ. ಎಲ್ಲರೂ ಸಮಾಜ, ಲೋಕ, ಪ್ರಜೆ– ಡಿ.ವಿ. ಗುಂಡಪ್ಪ ಭಗವಾನ ಅವರ 'ಡೆಮಾಕ್ರಸಿ' ಎನ್ನುತ್ತಾರೆ–ಈ ಪದಗಳನ್ನು ಅಥವಾ ಆ ಪದಗಳ ಇಂಗಿತಾರ್ಥವನ್ನು 'ಸೂಚಿಸಿದ್ದಾರೆ'. ಈ ಎಲ್ಲರ ಪ್ರತಿಕ್ರಿಯೆಗಳ ಏಕತೆಯಲ್ಲಿರುವ ಇನ್ನೊಂದು ಸಮಾನ ಏಕತೆಯೆಂದರೆ–ಅಪ್ರಾಮಾಣಿಕತೆ: ಪ್ರತಿಕ್ರಿಯೆಗಳನ್ನು ಪಾಠದ, ಟೆಕ್ಸ್ಟಿನ ಸಾಕ್ಷ್ಯದಲ್ಲಿ ಪದಗಳ ಸಮಕ್ಷಮದಲ್ಲಿ ನಿಲ್ಲಿಸದಿರುವುದು. ಇಲ್ಲಿ ಇವರುಗಳ ಅಭಿಪ್ರಾಯಗಳಿವೆ; ಅನಿಸಿಕೆಗಳಿವೆ: ವಿಮರ್ಶೆ ಇಲ್ಲ; 'ಓದು' ಇಲ್ಲ.

ರಾಮಾಯಣದ ಓದಿನಲ್ಲಿ ರಾಮನ ಈ ಸಂದರ್ಭದ ಸೀತೆಯ ಬಗೆಗಿನ ಉಪೇಕ್ಷೆ ಮೊದಲಿನದಲ್ಲ; ಹಂತಹಂತವಾಗಿ ರಾಮಾಯಣದ ಪ್ರಸಂಗಗಳನ್ನು ಬೆಳೆಯುತ್ತಾ ಬಂದಿರುವ ಉಪೇಕ್ಷೆಯ ಪರಾಕಾಷ್ಠತೆ ಮಾತ್ರ ಈ ಅಗ್ನಿ ಪ್ರವೇಶ ಸಂದರ್ಭದಲ್ಲಿದೆ. ಈ ಉಪೇಕ್ಷೆ ಮತ್ತೊಮ್ಮೆ ಸೀತಾ ಪರಿತ್ಯಾಗದಲ್ಲಿ, ಸೀತೆಯನ್ನು, ಅವಳ ಅಗ್ನಿಪರೀಕ್ಷೆಯಾದ ಮೇಲೆ, ರಾಮನು ಕಾಡಿಗಟ್ಟುವಲ್ಲಿ ಕಂಡುಬರುತ್ತದೆ. ಇಲ್ಲಿ ರಾಮನ ವರ್ತನೆ ಇನ್ನಷ್ಟು ಪ್ರಾಮಾಣಿಕವಾಗಿ ಹೊರಬೀಳುತ್ತದೆ. ಅವನೆನ್ನುತ್ತಾನೆ: ತಮ್ಮಂದಿರೇ, ಪುರುಷ ಶ್ರೇಷ್ಠರೇ, ನಾನು ಅಪವಾದ ಭಯಕ್ಕಾಗಿ ಪ್ರಾಣವನ್ನಾದರೂ ತೊರೆದೇನು, ನಿಮ್ಮನಾದರೂ ತ್ಯಜಿಸಿಯೇನು, ಜಾನಕಿಯನ್ನು ತ್ಯಜಿಸದಿರಬಲ್ಲನೆ? (ಉ 45, 14-15 ಒತ್ತು ನನ್ನದು). ಈ ಮಾತನ್ನು ಹೇಳಿದ ರಾಮನಿಗೆ ಗೊತ್ತು, ಅಗ್ನಿಪರೀಕ್ಷೆಯಿಂದ ಪರಿಶುದ್ಧಳೆನಿಸಿಕೊಂಡ ಸೀತೆಯನ್ನು ಹೇಗೆ ತ್ಯಜಿಸಬಲ್ಲೆಯೆಂದು ತಮ್ಮಂದಿರು ಕೇಳಿಯೇ ಕೇಳುತ್ತಾರೆಂದು. ಆದರೆ ಅದಕ್ಕೆ ರಾಮನಲ್ಲಿ ಉತ್ತರವಿಲ್ಲ, ಇರಲಿಕ್ಕೆ ಸಾಧ್ಯವಿಲ್ಲದ್ದರಿಂದ ರಾಮ ತಮ್ಮಂದಿರ ಬಾಯಿಯನ್ನು ಬಲವಂತವಾಗಿ ಮುಚ್ಚಿಬಿಡುತ್ತಾನೆ:



'ಸೌಮಿತ್ರಿ, ನೀನು ಹೋಗಬೇಕು. ಈ ವಿಷಯದಲ್ಲಿ ಮತ್ತೆ ವಿಚಾರ ಬೇಡ. ಇದಕ್ಕೆ ಅಡ್ಡ ಬಂದರೆ, ನನಗೆ ಮಹತ್ತರವಾದ ಅಸಮಾಧಾನ ಉಂಟು. ನನ್ನ ತೋಳಿನ ಆಣೆಯಾಗಿ, ನಿಮಗೆ ಹೇಳುತ್ತೇನೆ–ಮಾತಿನ ನಡುವೆ ನನ್ನನ್ನು ಒಪ್ಪಿಸುವುದಕ್ಕಾಗಿ ಪ್ರತಿಯಾಗಿ ನುಡಿದರೆ, ನನ್ನ ಇಷ್ಟವನ್ನು ಘಾತಿಸಿದ್ದರಿಂದ ಹಗೆಗಳೆಂದೇ ತಿಳಿಯುತ್ತೇನೆ! ನೀವು ನನ್ನ ಆಜ್ಞೆಗೆ ಒಳಪಟ್ಟವರಾದರೆ ನನ್ನ ಮಾತಿಗೆ ಮನ್ನಣೆ ಕೊಡಬೇಕು.'

(ಉ. 45, 20-22, ಒತ್ತು ನನ್ನದು)

(ಮುಂದುವರೆಯುತ್ತದೆ...)

ದೇವರ ದರ್ಶನಕ್ಕೆ ಪಾಪದ ದಿನವೂ ಉಂಟಾ!

ಕೇಸ್ ಫಿಟ್ ಮಾಡ್ತೀನಿ

ಸಬ್‌ಇನ್ಸ್‌ಪೆಕ್ಟರ್ ಮಹಾಶಯರು ಚಿಂತಾಕ್ರಾಂತ ಆಗಿದ್ದರು. ಆಗಲು ಬಲವಾದ ಕಾರಣವೂ ಇತ್ತು ಎನ್ನಿ. ತಮ್ಮ ದೇಹದಾರ್ಢ್ಯ ಇಲಾಖೆಗಾಗಿಯೇ ಮಾಡಿಸಿದ್ದೇನೊ ಅನ್ನುವಷ್ಟು ನಿಖರವಾಗಿತ್ತು. ತಾನು ತಾಳಿ ಕಟ್ಟಿದ ಹೆಂಡತಿ ಮೇಡ್ ಫಾರ್ ಈಚ್ ಅದರ್ ಅಂತಾರಲ್ಲ ಅಂತಹ ಅಂಗಸೌಷ್ಠವ ಪಡೆದಿದ್ದಳು. ಆದರೆ ಹಾಳಾದ ಮಗ, ಬಯಸಿ ಬಯಸಿ ಪಡೆದ ಮಗರಾಯ, ಅವನು ಮಾತ್ರ ಹಂಚಿಕಡ್ಡಿ! ಬೇಕುಬೇಕಾದ್ದನ್ನೆಲ್ಲ ತಿನ್ನಿಸಿದರೂ, ಕುಡಿಸಿದರೂ ಉರುಬಿದರೆ ಸಾಕು ಉರುಳಿ ಹೋಗುವಂತೆಯೇ ಇದ್ದ! ತಮ್ಮ ವಂಶೋದ್ಧಾರಕನ ದೇಹಸ್ಥಿತಿ ಸಾಹೇಬರನ್ನು ಚಿಂತಾಸಾಗರದಲ್ಲಿ ಮುಳುಗಿಸಿತ್ತು. ಸಾಹೇಬರ ಅಂತರಾಳವನ್ನು ಅರಿತಿದ್ದ ಅನುಭವಿ ಪೇದೆ ಕೈ ಹೊಸಕುತ್ತ ಅವರ ಮುಂದೆ ನಿಂತ. 'ಸಾ ನಾನೊಂದು ಮಾತೇಳ್ಲೇನಸಾ' ಅಂದ. ಸಾಹೇಬರು ಹೇಳು ಅನ್ನುವಂತೆ ಮುಖ ಮಾಡಿದರು. 'ನಿಮ್ಮ ಮಗಂಗೆ ಉಡದ ಮಾಂಸ ತಿನ್ನಿಸಿ ಬಿಡಿ ಸಾ' ಅಂದ.

ಮಾಂಸಕ್ಕೆ ಮನೆಯಲ್ಲೇನೂ ಬರ ಇರಲಿಲ್ಲ. ಹೆಚ್ಚುಕಡಿಮೆ ಮಾಂಸದ ನೈವೇದ್ಯವೇ ದಿನಾ ನಡೀತಿತ್ತು. ಉಡದ ಮಾಂಸ ಮಾತ್ರ ಮಾಡಿದ್ದು ನೆನಪಿರಲಿಲ್ಲ. ಎಂತೆಂತಹ ಮಾಂಸಗಳಿಗೂ ಜಗ್ಗದ ದೇಹ ಈ ಮಾಂಸಕ್ಕೆ ಮಣಿಯುವುದೆ ಎಂಬ ಸಂಶಯ ಕಾಡಿತು. ಅದನ್ನೇ ಪೇದೆ ಮುಂದೆ ತೋಡಿಕೊಂಡರು. 'ಉಡ ಅಂದರೆ ಏನು ಅಂತ ತಿಳ್ದಿದ್ದೀರಸಾ. ಇವತ್ತು ಮಗಿಗೆ ಉಡದ ಮಾಂಸ ತಿನ್ನಿಸಿ, ಅದರ ಮಣಿಕಟ್ಟಿಗೆ ಒಂದು ದಾರ ಕಟ್ಟಿನೋಡಿ. ಬೆಳಕು ಹರಿಯುವ ಹೊತ್ತಿಗೆ ಆ ದಾರ ಫಟ್ ಅಂತ ಕಿತ್ತೋಗಿರ್ತದೆ' ಎಂದು ಉಡದ ಮಾಂಸದ ಚಮತ್ಕಾರದ ಬಗ್ಗೆ ಅನುಭವಿ ಪೇದೆ ಬಾಯಿನೀರು ಬರುವಂತೆ ವರ್ಣಿಸಿದ. ಅವನ ಮಾತನ್ನು ನಂಬಿಯೋ ಅಥವಾ ಎಂತೆಂತಹದ್ದನ್ನೊ ಮಾಡಿದ್ದೀನಿ ಇದೂ ನಡೆದುಹೋಗಲಿ ಎಂದೋ, ಸಾಹೇಬರು ಅದಕ್ಕೆ ಸಮ್ಮತಿಸಿದರು.

ಆದರೆ ಉಡದ ಮಾಂಸ ದೊರಕುವುದು ಎಲ್ಲಿ; ಅದನ್ನು ಇತರೆ ಮಾಂಸಗಳಂತೆ ಅಂಗಡಿಗಳಲ್ಲಿ ಮಾರುವುದಿಲ್ಲವಲ್ಲ ಎಂಬ ಸಂಶಯಕ್ಕೂ ಅನುಭವಿಯೇ ಪರಿಹಾರ ನೀಡಿದ. ಅದಕ್ಕೆ ಯಾಕೆ ಸಾ ಯೋಚ್ನೆ. ಈ ಹಕ್ಕಿಪಿಕ್ಕಿಯವರಿಗೆ ಹೇಳಿದರೆ ತಂದುಕೊಡ್ತಾರೆ' ಅಂದ. ಇದಕ್ಕೆ ತಾನೇ ಮುಂದು ನಿಂತು ಹಕ್ಕಿಪಿಕ್ಕಿಯವರೊಬ್ಬನನ್ನು ಠಾಣೆಗೆ ಕರೆತಂದು ಸಾಹೇಬರ ಮುಂದೆ ನಿಲ್ಲಿಸಿದ. 'ಸಾಹೇಬರಿಗೆ ಒಂದು ಉಡಬೇಕಾಗಿದೆ. ನಾಳೆ ಸಂಜೆ ಹೊತ್ತಿಗೆ ತಂದು ಕೊಡಬೇಕು' ಅಂದ. 'ಈಗೆಲ್ಲಿ ಹಿಡಿಯಾನ ಸಾ ಅವ' ಅಂತ ಆತ ಗೋಗರೆಯುವ ಮುಖ ಮಾಡಿದ. 'ಅದೆಲ್ಲ ನನಗೆ ಗೊತ್ತಿಲ್ಲ. ನಾಳೆ ಸಂಜೆ ಹೊತ್ತಿಗೆ ತರಬೇಕು. ಇಲ್ಲ ಅಂದರೆ ಯಾವ್ದಾರ ಕೇಸಲ್ಲಿ ಫಿಟ್ ಮಾಡಿ ಜೈಲಲಿ ಕೊಳೆಯೋ ಹಂಗೆ ಮಾಡ್ತೀನಿ' ಅಂದ ಅನುಭವಿ ಪೇದೆ.

ಹಕ್ಕಿಪಿಕ್ಕಿಯವನು ಉಡ ತಂದುಕೊಟ್ಟನೋ, ಅದರ ಮಾಂಸ ತಿಂದು ಸಾಹೇಬರ ಮಗನ ಕೈಗೆ ಕಟ್ಟಿದ್ದ ದಾರ ಫಟ್ ಅಂತ ಕಿತ್ತು ಹೋಯಿತೋ ಅಥವಾ ಕೇಸ್ ಫಿಟ್ ಮಾಡಿಸಿಕೊಂಡು ಜೈಲಿಗೇ ಹೋದನೋ ಗೊತ್ತಿಲ್ಲ.

ಇದನ್ನು ಯಾಕೆ ಹೇಳಬೇಕಾಯಿತು ಅಂದರೆ ಕೆಳಹಂತದಲ್ಲಿ ನಡೆಯುವ ಇಂತಹ ಬೇಜಾನು ಕೇಸುಗಳು ಜನರ ಅರಿವಿಗೇ ಬಾರದಂತೆ ನಡೆದುಹೋಗುತ್ತಿರುವ ಹಾಗೆಯೇ ಮೇಲುಸ್ತರದಲ್ಲೂ ನಡೆಯುತ್ತವೆ. 'ಉಡದ ಬಾಡಿನ' ಕೇಸು ಹೊರಬಂದಂತೆ ಒಂದೊಂದು ಹೊರಬರುತ್ತವೆ ಅನ್ನುವುದರಲ್ಲಿ ಬೆಂಗಳೂರಿನ ಬಾಣಸವಾಡಿ ಪೊಲೀಸ್ ಸ್ಟೇಷನ್ ಕೇಸೂ ಒಂದಾಗಿರಬಹುದೆ ಅಂತ. ಈ ಠಾಣೆ ಹೇಗಿದೆ ಅಂತೀರಿ, ಪಾಷ್ ಬಂಗಲೆ ಇದ್ದ ಹಾಗೆ ಇದೆ. ಇಂತಹ ಅಚ್ಚುಕಟ್ಟಾದ ಠಾಣೆ ಇದ್ದರೆ ಸಭ್ಯರಿಗೂ ಒಂದೆರಡು ದಿವಸ ಅಲ್ಲಿ ವಾಸಿಸಬೇಕು ಅನ್ನುವ ಆಸೆ ಮುಕುರಬಹುದು. ಅದು ಹಾಗಿರಲಿ. ಈ ಬಂಗಲೆಯ ಕಾರಣಕರ್ತರು ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್ ಅಂತೆ. ಇತ್ತೀಚೆಗೆ ಅದರ ಉದ್ಘಾಟನೆಯೂ ನಡೆಯಿತಂತೆ. ಸಾಕ್ಷಾತ್ ಮುಖ್ಯಮಂತ್ರಿಗಳೇ ತಮ್ಮ ಅಮೃತಹಸ್ತದಿಂದ ಇದನ್ನು ಮಾಡಿದರೂ ಇಲಾಖೆಗೆ ಈ ಠಾಣೆಯ ಇರವೇ ಗೊತ್ತಿಲ್ಲವಂತೆ!

ಸರ್ಕಾರದ ಹಣ ಒಂದು ಕಾಸೂ ಇದಕ್ಕೇ ಅಂತ ಬಿಡುಗಡೆ ಆಗಿಲ್ಲವಂತೆ. ಆ ಸರ್ಕಲ್ ಸಾಹೇಬರು ಸರ್ಕಾರದ ತರಹ ಜಾದೂನು ಕಲಿತಿಲ್ಲವಂತೆ. ದಾನಿಗಳ ಸಹಾಯದಿಂದ ಈ ಅದ್ಭುತ ಕಟ್ಟಡ ನಿರ್ಮಿಸಿದ್ದಾರಂತೆ! ಆದರೆ ಸಮಸ್ಯೆ ಏನು ಅಂದರೆ, ಈ ಮಹಾಶಯರು ಸರ್ಕಾರದ ಪರವಾನಗಿ ಇಲ್ಲದೆ ಕಟ್ಟಡ ನಿರ್ಮಿಸಿದ್ದು ಹಾಳಾಗಲಿ, ಈ ದಾನಿಗಳು ಯಾರು ಎಂಬುದರ ಪಟ್ಟಿ ಇದ್ದರೂ ಅವರು ಮಾಡಿದ ಸಹಾಯ ಎಷ್ಟು ಎಂಬುದು ತಿಳಿದುಬಂದಿಲ್ಲವಂತೆ! ಒಂದು ಅನುಮಾನ ಏನು ಅಂದರೆ ಮರ್ಯಾದೆಯಿಂದ ಸಂಪಾದನೆ ಮಾಡಿದವರ ಹತ್ತಿರ ಇಂತಹವಕ್ಕೆಲ್ಲ ಉದಾರವಾಗಿ ದಾನ ನೀಡುವಷ್ಟು ಹಣ ಇರುವುದಿಲ್ಲ. ಆದ್ದರಿಂದ ಕೇಸಲ್ಲಿ ಫಿಟ್ ಮಾಡ್ತೀನಿ ಅಂತಾನೋ ಏನೋ ಸಾಹೇಬರು ಬೆದರಿಸಬೇಕು. ಪೊಲೀಸಿನವರು ಕೇಳಿದಾಗ, ಅವರು ಊಹಿಸಿದ್ದಕ್ಕಿಂತ ಹೆಚ್ಚು ಹಣ ನೀಡಿದರೆ ಅವರ ಕೃಪಾಕಟಾಕ್ಷ ತಮ್ಮ ಮೇಲೆ ಸದಾ ಇರುತ್ತೆ, ದಂಧೆಗಳು ಸುಗಮವಾಗಿ ನೆರವೇರುತ್ತೆ ಅನ್ನುವ ಆಶಾಭಾವನೆಯಿಂದಲೋ; ಯಾವತ್ತಿದ್ದರೂ ಅದು ತಮ್ಮ ಗೆಸ್ಟ್‌ಹೌಸ್ ತಾನೆ ಅಚ್ಚುಕಟ್ಟಾಗೇ ಇರಲಿ ಎಂಬ ಉದಾರಭಾವನೆಯಿಂದಲೋ ಇಂತಹವರೆಲ್ಲ ಧಾರಾಳವಾಗಿ ಧನಸಹಾಯ ಮಾಡಿರಬೇಕು ಅನ್ನಿಸುತ್ತೆ ಅಲ್ವಾ.

ರಾಂಗ್ ಸೈಡ್

ಜಮೀರ್ ಅಹಮದ್ ಖಾನ್ ಸಾಹೇಬರು ಅದ್ಭುತ ವಾಹನ ಚಾಲಕರು. ಹೆವಿಡ್ಯೂಟಿ, ಲೈಟ್ ಡ್ಯೂಟಿ ಎಲ್ಲದರಲ್ಲೂ ನಿಸ್ಸೀಮ ಅನ್ನಿಸಿಕೊಂಡಿದ್ದರು. ರೂರಲ್ ಅರ್ಬನ್ ಎರಡೂ ಕಡೆ ಡ್ರೈವ್ ಮಾಡಿ ಕುಮಾರಣ್ಣನಿಂದ ಕೆನ್ನೆ ಮೇಲೆ ಮುತ್ತು ಕೊಡಿಸಿಕೊಂಡಿದ್ದರು. ಎಷ್ಟೊಂದು ಪಸಂದಾಗಿ ಗೋವಾಕ್ಕೆ, ರಾಜ್ಯಪಾಲರ ಮನೆಗೆ ಬಸ್ಸು ಓಡಿಸಿದರು ಅಂತೀರಿ, ನೋಡೋಕೆ ಎರಡು ಕಣ್ಣು ಸಾಲದಾಗಿತ್ತು, ಬಸ್ಸು ರಾಂಗ್ ಸೈಡಲ್ಲಿ ಹೋದರೂ ಒಳಗಿದ್ದವರಿಗೆ ರೈಟ್ ಸೈಡಲ್ಲೇ ಹೋದ ಹಾಗೆ ಕಾಣಿಸುತ್ತಿತ್ತು!

ಇಂತಹ ಜಮೀರ್ ಸಾಹೇಬರು ಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದೂ ಅಲ್ಲಾಹ್, ತಾಯಿ, ಕುಮಾರಣ್ಣ ಹೆಸರಿನಲ್ಲೇ. ಆಗಲೂ ಅದು ಸಂಬಂಧಿಸಿದವರಿಗೆ ರಾಂಗು ಅನ್ನಿಸಲಿಲ್ಲ, ರೈಟು ಅಂತಾನೆ ಅನ್ನಿಸಿತ್ತು. ಮದುವೆಯಾದ ಹೊಸದರಲ್ಲಿ ಗಂಡನಿಗೆ ಹೆಂಡತಿ ಮಾಡಿದ್ದೆಲ್ಲ ವೈನು, ಹೆಂಡತಿಗೆ ಗಂಡ ಮಾಡಿದ್ದೆಲ್ಲ ಫೈನು ಅನ್ನಿಸಲ್ಲವೆ ಹಾಗೆ ಅನ್ನಿಸುತ್ತಿತ್ತಂತೆ ಅವರಿಗೂನು. ಸ್ವಲ್ಪ ದಿವಸ ಕಳೆದ ಮೇಲೆ ಮೊಸರಿನಲ್ಲೂ ಕಲ್ಲು ಕಾಣೊ ದಾಂಪತ್ಯ ಜೀವನದಂತೆಯೇ ಇಲ್ಲಿಯೂ ಆಗಿರಬೇಕು. ಮುಖ್ಯಮಂತ್ರಿ ಕುಮಾರಸ್ವಾಮಿಯ ಹೆಸರಿನ ಪ್ರಭಾವವೋ ಏನೋ. ಮುನಿಸಿಕೊಂಡ ಹೆಂಡತಿ ತರಹ



ಜಮೀರ್ ಸಾಹೇಬರು 'ತಗೋ ರಾಜೀನಾಮೆ' ಅಂದರಂತೆ. ಅವರು 'ತತ್ತಾ' ಅಂತ ಸ್ವೀಕರಿಸಿಯೇ ಬಿಟ್ಟರಂತೆ!

ಒಂದು ಅನುಮಾನ. ಚುನಾವಣೆಗಳು ಹತ್ತಿರ ಬರುತ್ತಿವೆ; ಉತ್ತರ ಪ್ರದೇಶದಲ್ಲಿ, ಅಲ್ಲಿನ ನೋಯಿಡಾದಲ್ಲಿ ಹತ್ತಾರು ಮಕ್ಕಳ ಬರ್ಬರ ಹತ್ಯೆ ನಡೆದಿದೆ. ಮಾಯಾ ಅಂದರೆ ಲಕ್ಷ್ಮಿ. ನಾನೇ ಲಕ್ಷ್ಮಿ ನನಗೇ ಮತ ನೀಡಿ ಎಂದಿದ್ದ ಮಾಯಾವತಿ ಅಲ್ಲಿಗೆ ಹೋಗಿ ನೊಂದವರ ಕಷ್ಟ ಸುಖ ವಿಚಾರಿಸಿ ಸಾಂತ್ವನ ಹೇಳಿದ್ದಾರೆ. ಚುನಾವಣೆ ಸಮಯದಲ್ಲಿ ಇಂತಹ ಅವಕಾಶವನ್ನು ಯಾವ ರಾಜಕಾರಣಿಯೂ ಕಳೆದುಕೊಳ್ಳಲು ಬಯಸುವುದಿಲ್ಲ ವಾದರೂ ಅಲ್ಲಿನ ಮುಖ್ಯಮಂತ್ರಿ ಮುಲಾಯಂಸಿಂಗ್ ಯಾದವ್ ಅವರು ನೋಯಿಡಾ ಕಡೆ ತಲೆ ಹಾಕಿಯೂ ಮಲಗುತ್ತಿಲ್ಲವಂತೆ. ಯಾಕೆ ಅಂತ ವಿಚಾರಿಸಲಾಗಿ, ಮುಖ್ಯಮಂತ್ರಿಯಾಗಿದ್ದ ಕಲ್ಯಾಣಸಿಂಗ್ ನೋಯಿಡಾಕ್ಕೆ

ಹೋದರು. ಏನಾಯಿತು? ಮುಖ್ಯಮಂ...
ಕಳೆದುಕೊಂಡರು. ಅದೇರೀತಿ ಮುಖ್ಯಮು...
ಮಾಯಾವತಿ ನೋಯಿಡಾ ದರ್ಶನ ಮ...
ಬಂದು ಪದವಿ ಕಳೆದುಕೊಂಡರು. ತಾ...
ಮುಖ್ಯಮಂತ್ರಿ. ನೋಯಿಡಾಕ್ಕೆ ಹೋದರೆ...
ಮಂತ್ರಿ ಪದವಿ ಹೋಗುತ್ತದೆ ಎಂಬ ದಿಗಿಲ...
ಪ್ರದೇಶದ ನೋಯಿಡಾ ಮುಖ್ಯಮಂತ್ರಿಗಳಿಗೆ...
ಚಾಮರಾಜನಗರ ಇದ್ದಂತೆ! ಅನಿಷ್ಟ! ಇ...
ಗೋಲನ್ನೇ ನಮ್ಮ ಮಂತ್ರಿಮಂಡಲಕ್ಕೂ ಅ...
ದಾದರೆ... ಜಮೀರ್ ಅಹಮದ್ ಖಾ...
ಕುಮಾರಸ್ವಾಮಿ ಹೆಸರಿನಲ್ಲಿ ಪ್ರಮಾಣವಚ...
ದ್ದರು. ಆ ವಿಕೆಟ್ ಉರುಳಿ ಬಿತ್ತು. ಇನ್ನೂ...
ಮಂತ್ರಿಗಳು ಅನ್ನಿಸಿಕೊಂಡೋರು ಇದೇರೀತಿ...
ವಚನ ಸ್ವೀಕರಿಸಿದರಲ್ಲಾ... ಅವರು ವಿಕೆಟ್...
ವಿಕೆಟ್ ನಂಬರ್ 3... ವಿಕೆಟ್ ನಂ. 4. ಹಿ...
ಹೋಗ್ತಾವಾ ಅಂತ. ಅಂದರೆ ಕುಮಾರಸ್ವಾಮಿ...
ಅಶುಭಾನಾ! ಛೇ ಬಿಡ್ರಿ.

ಡಿಸಿಂ–ಸಿಎಂ=ಡಿ

ರಾಜಕಾರಣಿಗಳ ಬಾಯಲ್ಲಿ ಅದೇ...
ಯಡಿಯೂರಪ್ಪ ಸಿಎಂ ಆಗ್ತಾರೆ; ಯಡಿಯೂ...
ಆಗಲ್ಲ ಅನ್ನುವ ಮಾತು. ಸಿಎಂ ಲಿಸ್ಟ್‌ನಿಂದ...
ಯಡಿಯೂರಪ್ಪನ್ನ ಪರ್ಮನೆಂಟ್ ಆಗಿ ಡಿಲೀ...
ಅಂತ ಸಿದ್ಧರಾಮಯ್ಯ ಅಂತಹವರು ಹೇಳ್ತಾ...
ರಾಜಕಾರಣಿಗಳು ಹಾಳಾಗಲಿ, ರಾಜಕೀಯ ...
ಏನಂತಾರೆ ನೋಡೋಣ ಅಂದರೆ ಅಲ್ಲೂ ಇ...
ದೇವೇಗೌಡರ ರಾಜಕೀಯ ಕುತಂತ್ರಗಳನ್ನು...
ಮಾಡಿಕೊಂಡಿದ್ದೇ ಸರಿ ಆದರೆ ಯಡಿ...
ಮುಖ್ಯಮಂತ್ರಿಯಾಗುವುದು ಪ್ರಪಂಚದ ...
ಅದ್ಭುತ!

ಸಂಘ ಪರಿವಾರದ ಪರಿ ಒಂದು ರೀ...
ಯಡಿಯೂರಪ್ಪ ಸಿಎಂ ಆದರೆಷ್ಟು ಬಿಟ್ಟರೆಷ್ಟು...
ಚಪ್ರಾಸಿ ಆಗಿರಲಿ. ನಮ್ಮ ಪರವಾಗಿ ಒಂದಿ...
ಅಧಿಕಾರದಲ್ಲಿದ್ದು ನಾವು ಮಾಡುವ ದಂಧೆ...
ಬೆಂಬಲ ನೀಡದಿದ್ದರೆ ಬೇಡ, ಕುಮಾರಸ್ವಾಮಿ...
ಕಂಡರೂ ಕಾಣದಂತೆ ಇದ್ದರೆ ಸರಿ. ಕರ್ನಾಟಕ...
ರಂಗ (KDA) ಅನ್ನೋದು ಕೇಡಿ ಅಲೈಯ...
ಅನ್ನುವವರು ಅಂದುಕೊಳ್ಳಲಿ ಎಂಬುದ...
ಆಲೋಚನೆ. ಅದಕ್ಕೇ ತಮ್ಮೆಲ್ಲ ಆತ್ಮಗೌ...
ಜೆಡಿಎಸ್‌ಗೆ ಒತ್ತೆ ಇಟ್ಟು ಅವರು...
ಅಂದರೆ 'ಬಾ' ಅಂದರು ಅಂತಾ...
ಇದಾರೆ.

ಈಗ ನಿಜಕ್ಕೂ ಸಂಕಟ ಅನುಭವಿಸುತ್ತಿ...
ಅನಂತಕುಮಾರ್ ಅಂಡ್ ಕಂಪನಿ ಅಂತೆ. ...
ಯಡಿಯೂರಪ್ಪ ಮುಖ್ಯಮಂತ್ರಿ ಆಗಲ್ಲ, ಯಡಿ...
ಮುಖ್ಯಮಂತ್ರಿ ಆಗಲ್ಲ ಅಂತ ಹೇಳ್ತಾ ಇ...
ಕೇಳಿಕೇಳಿ ರೋಷದಿಂದ ಸಿಡಿದೆದ್ದ ದೇವೇ...
ಒಂದು ವೇಳೆ ಇವರ ಮಾತನ್ನೆಲ್ಲ ಸುಳ್ಳು ...
ಅಂತ ಶಪಥ ಮಾಡಿ ಕೊಟ್ಟ ವ...
ನಡೆದುಕೊಂಡೇ ಬಿಟ್ರೆ, ಯಡ್ಡಿಯನ್ನು ಮುಖ...
ಮಾಡೇ ಬಿಟ್ಟರೆ ಏನು ಗತಿ ಅನ್ನೋದ...
ನೋವಂತೆ!

ವೈಕುಂಠ ಏಕಾದಶಿ!

ದೇವಸ್ಥಾನಗಳಿಗೆ ನೂಕುನುಗ್ಗಲು.

ದಿಢೀರನೆ ದೈವಭಕ್ತಿ ಮೂಡಲು ಏನು ...

ಅವತ್ತು ವೈಕುಂಠ ಏಕಾದಶಿ! ದೇವರ ...
ಪುಣ್ಯ ದಿನ!

ಅಲ್ಲ, ದೇವರ ದರ್ಶನಕ್ಕೆ ಪಾಪದ ...
ಉಂಟಾ?

ದೈವನಿಂದಕರ ಪ್ರಶ್ನೆ ಇದು.

ಅವತ್ತು 'ವೈಕುಂಠ ದ್ವಾರ'ದಲ್ಲಿ ಪ್ರವೇ...
ನೇರ ಶ್ರೀಮನ್ನಾರಾಯಣನಪಾದಕಮಲಗಳ ...
ಬೀಳುವುದು ಖಂಡಿತ! ಪಾಪಗಳಿಗೆ ಪರಿಹಾ...
ವೈಕುಂಠದ್ವಾರ!

ಪಾಪಿಗಳಿಗೆ ನಿಶ್ಚಿಂತೆ. ಒಂದು ವರ್ಷ ನಿ...
ತಮ್ಮ ದಂಧೆ ಮುಂದುವರಿಸಬಹುದು. ಮತ್ತೆ ...
ಏಕಾದಶಿಯಂದು ವೈಕುಂಠ ದ್ವಾರ ಪ್ರವೇಶ...
ಪರಿಹಾರ. ಹೊಸ ವರ್ಷ ದಂಧೆಗಳಿಗೆ ...
ನವೀಕರಣ!

ಇತ್ತೀಚೆಗೆ ದೇವಸ್ಥಾನಗಳ ಸಂಖ್ಯೆ ಹೆಚ್ಚುತ್ತಿದ...
ಸಂಖ್ಯೆಯೂ ಏರುತ್ತಿದೆ.

ಇದು ಯಾವುದರ ಸಂಕೇತ?

ಪಾಪಿಗಳ ಸಂಖ್ಯೆ ಹೆಚ್ಚಳದ್ದೊ?

-ಎಚ್.ಎಲ್. ಕೇಶವಮ...

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ

ಜನವರಿ 3ರ ಲಂಕೇಶ್‌ನಲ್ಲಿ ತಮ್ಮ ವರದಿಗಾರ ರಾ.ಸೋಮನಾಥ್ ಅವರ 'ಸಂಯುಕ್ತ ಕರ್ನಾಟಕ ಮುಳುಗಿಸಿದ ಹಾರ್ನಳ್ಳಿ' ಎಂಬ ತಲೆಬರಹದ ವರದಿ ಸಮಗ್ರವಾಗಿ ಮೂಡಿಬಂದಿದೆ. ಈಶ್ವರ ದೈತೋಟ ಎಂಬ ಪಕ್ಕಾ ಚಡ್ಡಿ ಮನಸ್ಸಿನ ವ್ಯಕ್ತಿ ಸಂಕದ ಸಂಪಾದಕನಾದ ನಂತರ, ಆ ಪತ್ರಿಕೆಯ ಕಚೇರಿಯಲ್ಲಿ ನಡೆದ ಜಾತಿ ವ್ಯವಸ್ಥೆಯ ಸಂಚಿಗೆ ಸಿಲುಕಿ, ಸಿಕ್ಕ ಕೆಲಸವನ್ನು ಎರಡೇ ದಿನದಲ್ಲಿ ಬಿಟ್ಟು ಹೊರಬಂದವರಲ್ಲಿ ನಾನೂ ಒಬ್ಬ.

ನನ್ನ ಹೆಸರು ಶಿವಕುಮಾರ್ ಎಂದಿದ್ದಕ್ಕೆ, ವೀರಶೈವನೆಂದು ಕೆಲಸ ನೀಡಿದ ಸನ್ಮಾನ್ಯ ದೈತೋಟರವರು ನಾನೊಬ್ಬ ದಲಿತ ವರ್ಗದವ ಎಂದು ಗೊತ್ತಾದ ತಕ್ಷಣ 'ನಾನ್ ಬ್ರಾಹ್ಮಿನ್'ಗೆ ಇಲ್ಲಿ ಕೆಲಸವಿಲ್ಲವೆಂದು ಹೊರಕಳಿಸಿದರು. ಇಂತಹ ಘಟನೆಗಳು ಅಲ್ಲಿ ಪ್ರತಿನಿತ್ಯ ನಡೆಯುತ್ತಲೇ ಇದೆ. ಅಂತೂ ರಾ. ಸೋಮನಾಥ್ ಅವರು ಸಂಕದಲ್ಲಿ ನಡೆಯುತ್ತಿರುವ ದೈತೋಟದ ಅಪರ-ತಪರಗಳನ್ನು ಹೊರಗೆಳೆದಿದ್ದಕ್ಕೆ ಅಭಿನಂದನೆಗಳು. ನಾನ್‌ಬ್ರಾಹ್ಮಿನ್ಸ್‌ಗೆ ಕೆಲಸವಿಲ್ಲವೆಂದ ಮೇಲೆ ನಾವ್ಯಾಕೆ ಸಂಕ ಓದಬೇಕು?

-ಎಂ.ಡಿ. ಶಿವಕುಮಾರ್, ಬೆಂಗಳೂರು

73ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಶಿವಮೊಗ್ಗದಲ್ಲಿ ನಡೆದ ಸಂದರ್ಭದಲ್ಲಿ ಎರಡು ಗೋಷ್ಠಿಗಳಲ್ಲಿ ಎಬಿವಿಪಿ ಕಾರ್ಯಕರ್ತರು ಗೋಷ್ಠಿಯ ವಿಚಾರ ಮಂಡನಕಾರರ ವಿರುದ್ಧ ನಡೆಸಿದ ಕುಕೃತ್ಯವನ್ನು ನಾವು ಖಂಡಿಸುತ್ತೇವೆ.

ಕಲ್ಕುಳಿ ವಿಠಲ ಹೆಗಡೆ ಅವರು 'ಮಲೆನಾಡು ಸಮಸ್ಯೆ' ಹಾಗೂ ಪತ್ರಕರ್ತೆ ಗೌರಿ ಲಂಕೇಶ್‌ರ ಅವರು 'ಸಮೂಹ ಮಾಧ್ಯಮ ಮತ್ತು ಸಾಮಾಜಿಕ ಜವಾಬ್ದಾರಿ' ಕುರಿತು ವಿಚಾರ ಮಂಡನೆಗೆ ಆಗಮಿಸುವಾಗ ಎಬಿವಿಪಿಯ ಕಿಡಿಗೇಡಿಗಳು, ಕಾರ್ಯಕರ್ತರು ತಡೆಯೊಡ್ಡಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಸಿದರು ಹಾಗೂ ಇಡೀ ಸಮ್ಮೇಳನದ ಅಶಾಂತತೆಗೆ ಕಾರಣರಾದರು. ಸಮ್ಮೇಳನಕ್ಕೆ ಹಾಗೂ ಕರ್ನಾಟಕದ ಇತಿಹಾಸದಲ್ಲಿ ಕಪ್ಪುಚುಕ್ಕೆ ಮೂಡಿಸಿದರು. ಇದು ಅಕ್ಷಮ್ಯ ಅಪರಾಧ ವಾಗಿರುತ್ತದೆ. ಇದನ್ನು ನಾವು ಖಂಡಿಸುತ್ತಿದ್ದೇವೆ.


ಇಂತಹ ಸಮಾಜದ್ರೋಹಿ ಹಾಗೂ ಕೋಮುವಾದಿ ರಾಜಕೀಯ ಪಕ್ಷವೊಂದರ ಮುಖವಾಣಿಯಾದ ಈ ಸಂಘಟನೆಯನ್ನು ಮತ್ತು ಇದರ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯ ಹರಣ ಮಾಡುತ್ತಿರುವ ಇಂತಹ ಸಂಘಟನೆಗಳನ್ನು ತಕ್ಷಣ ನಿಷೇಧಿಸುವಂತೆ ಮಾನ್ಯ ರಾಜ್ಯಪಾಲರನ್ನು ಒತ್ತಾಯಿಸುತ್ತಿದ್ದೇವೆ.

-ಕೆ. ರಮೇಶ್, ಅಂಕೋಲಾ

ಟ್ ಮಾಸ್ಟರ್ ಹೇಳಿಕೊಟ್ಟ ರೀತಿಯಲ್ಲಿ ಫೈಟ್ ಮಾಡುತ್ತಾ ೇದೆ. ಮೊದಲ ಟೇಕ್‌ನಲ್ಲೇ ಎಲ್ಲವೂ ಓಕೆಯಾಯಿತು. ಟ್‌ನಲ್ಲಿದ್ದ ಹುಡುಗರೆಲ್ಲಾ ಚಪ್ಪಾಳೆ ತಟ್ಟಿದರು. ''ಇದೆಲ್ಲಾ ಗೆ ಸಾಧ್ಯವಾಯಿತು? ನಿಮಗೆ ನೋವಾಗಲಿಲ್ಲವೇ?'' ಎಂದು ಲ್ಲರೂ ನನ್ನನ್ನು ಕೇಳಿದರು. ಆಗ ನಾನು ಏನು ಹೇಳಿದೆ ತ್ತೇ? ''ಐ ಆಮ್ ದಿ ಐರನ್‌ಮ್ಯಾನ್ ಆಫ್ ಕನ್ನಡ ಲಂ ಇಂಡಸ್ಟ್ರಿ'' ಎಂದು ನಗುತ್ತಾ ಉತ್ತರಿಸಿದೆ.

ಐ ಆಮ್ ದಿ ಐರನ್ ಮ್ಯಾನ್ ಆಫ್ ಕನ್ನಡ ಸಿನಿಮಾ!





ಅಪ್ಪಾಜಿಯವರ ವ್ಯಾಯಾಮ ಅಭ್ಯಾಸದಿಂದಾಗಿ ನಮ್ಮ ಮನೆ ಕೆಲವೊಮ್ಮೆ ವ್ಯಾಯಾಮ ಶಾಲೆಯ ತರಹ ಕಾಣಿಸುತ್ತಿತ್ತು. ಅಪ್ಪಾಜಿ ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ಯೋಗಾಸನ ಮಾಡಿದ ನಂತರವೇ ವಾಕಿಂಗ್ ಹೋಗುತ್ತಿದ್ದರು. ಆದರೆ ನನಗಾಗಲಿ, ರಾಘುಗಾಗಲಿ ಯೋಗಾಸನದ ಬಗ್ಗೆ ಕ್ತಿಯೇನಿರಲಿಲ್ಲವಾದರೂ ಸಾಯಂಕಾಲದ ಸಮಯ ಅಪ್ಪಾಜಿ ತೆ ವ್ಯಾಯಾಮ ಮಾಡುವುದನ್ನು ನಾವು ತಪ್ಪಿಸುತ್ತಿರಲಿಲ್ಲ. ೇಹದಂಡನೆ ಮಾಡುವುದು ಯಾವಾಗಲೂ ಒಳ್ಳೆಯದು, ಗೆ ಮಾಡಿದರೆ ಮಾತ್ರ ನಮ್ಮ ದೇಹ ನಾವು ಹೇಳಿದಂತೆ ುತ್ತದೆ" ಎಂದು ಅಪ್ಪಾಜಿ ಹೇಳುತ್ತಿದ್ದರು.

ಅಪ್ಪಾಜಿಗೆ ನಮ್ಮ ತರಹ ಜಿಮ್‌ಗಳಿಗೆ ಹೋಗುವ ಬಗ್ಗೆ ಬೇಕೆಯಿರಲಿಲ್ಲ. ಹೀಗಾಗಿ ಅವರದೇ ಶೈಲಿಯಲ್ಲಿ ಗದೆಯನ್ನು ್ತಿಕೊಂಡು ತಲೆಯ ಮೇಲೆ ಗಿರಗಿರನೆ ತಿರುಗಿಸುತ್ತಾ ವ್ಯಾಯಾಮ ಾಡುತ್ತಿದ್ದರು. ಗರಡಿ ಮನೆಗಳಲ್ಲಿ ಪೈಲ್ವಾನ್‌ಗಳು ಮಾಡುವ ಸಗಳನ್ನೆಲ್ಲ ಅಪ್ಪಾಜಿ ಪ್ರಯೋಗಿಸುತ್ತಿದ್ದರು. ನಮಗೂ ಅದೇ ಹ ಮಾಡಿ ಎಂದು ಹೇಳುತ್ತಿದ್ದರು. ನಾನು ಮತ್ತು ರಾಘು ೇಕ ಬಾರಿ ಗದೆಯನ್ನು ಎತ್ತಿ ತಿರುಗಿಸುತ್ತಿದ್ದೆವು. ಅಪ್ಪಾಜಿ ವರಷ್ಟು ಸಲೀಸಾಗಿ ನಮಗೆ ಆ ವ್ಯಾಯಾಮಗಳನ್ನು ಮಾಡಲು ುತ್ತಿರಲಿಲ್ಲವಾದ್ದರಿಂದ ನಮಗದು ಬಹಳ ಪ್ರಯಾಸದ ಸವಾಗುತ್ತಿತ್ತು. ಇದೆಲ್ಲದರಿಂದಾಗಿ ಗದೆಗಿಂತ ಡಂಬಲ್ಸ್‌ಗಳೇ ುಗೆ ಹೆಚ್ಚು ಇಷ್ಟವಾಗುತ್ತಿದ್ದುದರಲ್ಲಿ ಅಚ್ಚರಿ ಇಲ್ಲ.

ಅಪ್ಪಾಜಿಯವರಂತಹ ಪರ್ಸನಾಲಿಟಿಯನ್ನು ಹೊಂದಬೇಕು ಎನ್ನುವ ಾಂಕ್ಷೆ ನಮ್ಮಲ್ಲಿ ಇದ್ದುದರಿಂದ ನಾವು ಅವರೊಂದಿಗೆ ವ್ಯಾಯಾಮವನ್ನು ್ಪದೇ ಮಾಡುತ್ತಿದ್ದೆವು. ಈ ವಿಷಯದಲ್ಲಿ ಅವರೇ ನಮಗೆ ಗಾಡ್‌ಫಾದರ್ ತ್ತು ಕೋಚ್.

ಹೀಗಿದ್ದಾಗ ಒಂದು ದಿನ ನಾನು ಗದೆಯನ್ನು ಎತ್ತಿ ತಲೆಯ ಮೇಲೆ ುಗಿಸುತ್ತಿದ್ದೆ. ಹಾಗೆ ಒಂದೇ ಕೈಯಲ್ಲಿ ಎತ್ತಿ ತಿರುಗಿಸುತ್ತಿದ್ದಾಗ ನನ್ನ ಹದ ಮೇಲಿನ ಬ್ಯಾಲೆನ್ಸ್ ತಪ್ಪಿಹೋಯಿತು. ನಾನು ಅಲ್ಲೇ ಕುಸಿದುಬಿದ್ದೆ. ಹಾಗೆ ಬಿದ್ದ ನಾನು ಜೋರಾಗಿ ಕಿರುಚಿದೆ. ಏಕೆಂದರೆ, ನನ್ನ ಎಡಗೈ ೋನ್ ಸಾಕೆಟ್ಸ್‌ನಿಂದ ಬಿಚ್ಚಿಕೊಂಡು ನೇತಾಡುತ್ತಿತ್ತು. ಅಪ್ಪಾಜಿ ಅದನ್ನು ೋಡಿ ದಿಗ್ಭ್ರಾಂತರಾದರು. ಮನೆಯ ಒಳಗಿನಿಂದ ಅಮ್ಮ ಕೂಡ ಡಿಬಂದರು. ಕೂಡಲೇ ನನ್ನನ್ನು ಆಸ್ಪತ್ರೆಗೆ ಸೇರಿಸಿದರು. ಆಲ್‌ಮೋಸ್ಟ್ ದಿನಗಳ ಕಾಲ ನಾನು ಸಂಪೂರ್ಣವಾಗಿ ಬೆಡ್‌ರೆಸ್ಟ್ ಪಡೆದು ಳ್ಳಬೇಕಾಯಿತು. ಈ ಕಾರಣದಿಂದಾಗಿ ನಾನು ನಟಿಸುತ್ತಿದ್ದ 'ಆಸೆಗೊಬ್ಬ ಸೆಗೊಬ್ಬ' ಚಿತ್ರದ ಚಿತ್ರೀಕರಣ ನಿಂತುಹೋಯಿತು.

ನನಗೆ ಸಾಧ್ಯವಾದಷ್ಟು ಬೇಗನೆ ಆ ಚಿತ್ರದ ಉಳಿದ ಭಾಗಗಳಲ್ಲಿ ಿಸಿ ಅದರ ಬಿಡುಗಡೆ ತಡವಾಗದಂತೆ ನೋಡಿಕೊಂಡೆ. 'ಆಸೆಗೊಬ್ಬ ಸೆಗೊಬ್ಬ' ಚಿತ್ರ ನಾನು ನಟಿಸಿದ ಮೊದಲ ರಿಮೇಕ್ ಚಿತ್ರ. ಇದು ಹಿಂದಿಯಲ್ಲಿ ಹಿಟ್ ಆಗಿದ್ದ ಅಮೋಲ್ ಪಾಲೇಕರ್ ನಟಿಸಿದ 'ಗೋಲ್ ಮಾಲ್' ಚಿತ್ರದ ರಿಮೇಕ್.

ಅಲ್ಲಿತನಕ ರಿಮೇಕ್ ಚಿತ್ರಗಳಲ್ಲಿ ನಟಿಸಿರದಿದ್ದ ಕಾರಣ ಇದರಲ್ಲಿ ನಟಿಸುವಾಗ ನನ್ನಲ್ಲಿ ಒಂದು ವಿಚಿತ್ರ ಆತಂಕ ಸೃಷ್ಟಿಯಾಯಿತು. ಜನ ಮೂಲ ಚಿತ್ರವನ್ನು ನೋಡಿ ನನ್ನ ನಟನೆಯನ್ನು ಹೋಲಿಸುತ್ತಾರೆ ಎಂಬ ಗುಮಾನಿ ನನ್ನನ್ನು ಕಾಡಿತು. ಕೊನೆಗೆ ಆ ಗುಮಾನಿ ಮತ್ತು ಸಂಶಯವನ್ನೇ ಸವಾಲಾಗಿ ಸ್ವೀಕರಿಸಿ ನಾನು ನಟನೆಯಲ್ಲಿ ತೊಡಗಿದೆ. ಕಾಮಿಡಿ ಮತ್ತು ಲವ್ ಎರಡೂ ಹಿತ-ಮಿತವಾಗಿ ಬೆರೆತಿದ್ದ ಆ ಚಿತ್ರದ ಕತೆ ಮತ್ತು ಡೈಲಾಗ್‌ಗಳು ಫೆಂಟಾಸ್ಟಿಕ್ ಆಗಿದ್ದವು. ಮೊದಲ ಬಾರಿಗೆ ಲೋಕೇಶ್ ಅವರ ಜೊತೆಗೆ ನನಗೆ ನಟಿಸುವ ಸದವಕಾಶ ಈ ಚಿತ್ರದ ಮುಖಾಂತರ ದೊರಕಿತ್ತು. ಎಂ.ಎಸ್. ರಾಜಶೇಖರ್-ಸುಧಾರಾಣಿ-ಶಿವರಾಜ್‌ಕುಮಾರ್ ಕಾಂಬಿನೇಷನ್‌ನ ಈ ಚಿತ್ರವೂ ಬಾಕ್ಸಾಫೀಸಿನಲ್ಲಿ ಜಯಭೇರಿ ಬಾರಿಸಿತು.

ನಿರೂಪಣೆ: ಸದಾಶಿವ ಶೆಣೈ

36



ಹ್ಯಾಟ್ರಿಕ್ ಹೀರೋನ ಹಾರ್ಟ್ ಬೀಟ್!

ವಿಶೇಷವೆಂದರೆ ಹಿಂದಿ ಚಿತ್ರ 'ಗೋಲ್ ಮಾಲ್' ತ್ರಿವೇಣಿ ಥಿಯೇಟರಿನಲ್ಲಿ ಬಿಡುಗಡೆಯಾಗಿತ್ತು, ನಮ್ಮ ಚಿತ್ರವೂ ಅದೇ ಚಿತ್ರಮಂದಿರದಲ್ಲಿ ಬಿಡುಗಡೆಯಾಗಿ, ಹಿಂದಿಯಂತೆ ಸಿಲ್ವರ್ ಜ್ಯೂಬಿಲಿ ಬಾರಿಸಿದ್ದು ನನಗೆ ಸಂತೋಷ ನೀಡಿತು.

ಈಗಾಗಲೇ ಹೇಳಿರುವಂತೆ, ಒಂದು ಕಡೆ ನನ್ನ ಅಪ್ಪಾಜಿ ನನಗೆ ಸ್ಫೂರ್ತಿ. ಇನ್ನೊಂದು ಕಡೆ ನನ್ನ ಸಹೋದರ ರಾಘು ಹ್ಯಾಟ್ರಿಕ್ ಬಾರಿಸಿ ನನ್ನನ್ನು ಹಿಂಬಾಲಿಸುತ್ತಿದ್ದ. ಆಗ ನಮ್ಮ ಮನೆಗೆ ಬರುತ್ತಿದ್ದ ನಿರ್ಮಾಪಕರು ಹೇಳುತ್ತಿದ್ದ ಮಾತುಗಳು ನನಗೆ ಇನ್ನೂ ನೆನಪಿದೆ. "ಕೆಲವು ಜಿಲ್ಲಾ ಕೇಂದ್ರಗಳಲ್ಲಿ ನಿಮ್ಮ ಮೂರು ಜನರ ಚಿತ್ರವೇ ತುಂಬಿದ ಪ್ರದರ್ಶನದಿಂದ ಓಡುತ್ತಿದೆ. ಇನ್ನು ಕೆಲವೆಡೆ ಎರಡೇ ಚಿತ್ರಮಂದಿರ ಇದ್ದಲ್ಲಿ ಒಂದನ್ನು ತೆಗೆದ ನಂತರವೇ ನಿಮ್ಮ ಮತ್ತೊಂದು ಚಿತ್ರಕ್ಕೆ ಅವಕಾಶ...." ಎಂದೆಲ್ಲ ಹೆಮ್ಮೆಯಿಂದ ಹೇಳುತ್ತಿದ್ದರು. ಆದರೆ ನಾನಾಗಲೀ, ಅಪ್ಪಾಜಿಯಾಗಲೀ ಅಥವಾ ರಾಘು ಆಗಲೀ, ನಾವೆಂದೂ ಅವುಗಳ ಬಗ್ಗೆ ತಲೆ ಕೆಡಿಸಿಕೊಂಡಿದ್ದಿಲ್ಲ. ಒಂದು ದಿನವೂ ಥಿಯೇಟರುಗಳ ಬಗ್ಗೆಯಾಗಲಿ, ಬಾಕ್ಸಾಫೀಸ್ ಗಳಿಕೆಯ ಬಗ್ಗೆಯಾಗಲೀ ನಾವು ಚರ್ಚಿಸಿದ್ದೇ ಇಲ್ಲ. ಅಂತಹ ಚರ್ಚೆಗಳನ್ನು ಅಪ್ಪಾಜಿ ಇಷ್ಟಪಡುತ್ತಿರಲಿಲ್ಲ. ನಾವು ನಿಜವಾಗಲೂ ಚರ್ಚಿಸುತ್ತಿದ್ದದ್ದು ಕಾದಂಬರಿಗಳ ಬಗ್ಗೆ, ಹೊಸ ಕತೆಗಳ ಬಗ್ಗೆ ಮತ್ತು ವ್ಯಾಯಾಮದ ಬಗ್ಗೆ. ಹೀಗಾಗಿ ಒಂದೇ ಮನೆಯಲ್ಲಿ ನಾವು ಮೂರು ಜನ ನಾಯಕನಟರಿದ್ದರೂ ನಮಗೆ ನಾವು ಪ್ರತಿಸ್ಪರ್ಧಿಗಳೆಂಬ ಭಾವನೆ ಎಂದೂ ನಮ್ಮಲ್ಲಿ ಮೂಡಲೇ ಇಲ್ಲ. ಇದೆಲ್ಲ ಸಾಧ್ಯವಾಗಿದ್ದು ಅಪ್ಪಾಜಿಯ ಮಾರ್ಗದರ್ಶನ ಮತ್ತು ಅವರ ಜೀವನದ ಬಗೆಗಿನ ದೃಷ್ಟಿಕೋನದಿಂದಾಗಿ.

ನಾನು ಮೊಟ್ಟಮೊದಲ ಬಾರಿಗೆ ಮಾಲಾಶ್ರೀ ಮತ್ತು ಶಶಿಕುಮಾರ್ ಜೊತೆ ನಟಿಸಿದ 'ಮೃತ್ಯುಂಜಯ' ಚಿತ್ರವನ್ನು ನನ್ನ ಕಸಿನ್ ದತ್ತು ನಿರ್ದೇಶಿಸಿದರು. ಸುಂದರಕೃಷ್ಣ ಅರಸ್, ಶೋಭಾ, ಉಮಾಶ್ರೀ, ಧೀರೇಂದ್ರ ಗೋಪಾಲ್ ಮೊದಲಾದ ದೊಡ್ಡ ದೊಡ್ಡ ನಟರೂ ಆ ಚಿತ್ರದಲ್ಲಿದ್ದರು. ಕೈ ಮುರಿದುಕೊಂಡು ಆಗಷ್ಟೇ ಬೆಡ್‌ರೆಸ್ಟಿನಿಂದ ಎದ್ದುಬಂದಿದ್ದ ನಾನು ಒಂದು ಫೈಟಿಂಗ್ ಸೀನ್‌ನಲ್ಲಿ ನಟಿಸಬೇಕಾಗಿತ್ತು. ಸ್ಟಂಟ್ ಮಾಸ್ಟರ್ ನನ್ನ ಬದಲಿಗೆ ಡ್ಯೂಪ್ ಬಳಸುತ್ತೇನೆ ಎಂದು ಹೇಳಿದಾಗ ನಾನು ಒಪ್ಪಲಿಲ್ಲ. ನಾನೇ ಫೈಟಿಂಗ್ ಮಾಡುತ್ತೇನೆ ಎಂದು ಹೇಳಿದೆ.

ಫೈಟ್ ಮಾಸ್ಟರ್ ಹೇಳಿಕೊಟ್ಟ ರೀತಿಯಲ್ಲಿ ಫೈಟ್ ಮಾಡುತ್ತಾ ಹೋದೆ. ಮೊದಲ ಟೇಕ್‌ನಲ್ಲೇ ಎಲ್ಲವೂ ಓಕೆಯಾಯಿತು. ಸೆಟ್‌ನಲ್ಲಿದ್ದ ಹುಡುಗರೆಲ್ಲಾ ಚಪ್ಪಾಳೆ ತಟ್ಟಿದರು. "ಇದೆಲ್ಲಾ ಹೇಗೆ ಸಾಧ್ಯವಾಯಿತು? ನಿಮಗೆ ನೋವಾಗಲಿಲ್ಲವೇ?" ಎಂದು ಎಲ್ಲರೂ ನನ್ನನ್ನು ಕೇಳಿದರು. ಆಗ ನಾನು ಏನು ಹೇಳಿದೆ ಗೊತ್ತೇ? "ಐ ಆಮ್ ದಿ ಐರನ್‌ಮ್ಯಾನ್ ಆಫ್ ಕನ್ನಡ ಫಿಲಂ ಇಂಡಸ್ಟ್ರಿ" ಎಂದು ನಗುತ್ತಾ ಉತ್ತರಿಸಿದೆ. ನನ್ನ ಈ ಜೋಕ್ ಯಾರಿಗೂ ಅರ್ಥವಾಗದಿದ್ದಾಗ "ನನ್ನ ಕೈಗೆ ಫ್ರಾಕ್ಚರ್ ಆದ ನಂತರ ಅದರೊಳಗಡೆ ಐರನ್ ರಾಡ್‌ನ್ನು ಡಾಕ್ಟರ್ ಅಳವಡಿಸಿದ್ದಾರೆ. ಹೀಗಾಗಿ ನನ್ನ ಎಡಗೈಗೆ ಈಗ ಕಬ್ಬಿಣದ ಸಲಾಕೆಯಷ್ಟು ಬಲವಿದೆ" ಎಂದು ವಿವರಿಸಿದ ನಂತರ ಎಲ್ಲರೂ ನಕ್ಕರು.

ನಾನು ಆಸ್ಪತ್ರೆ ಸೇರಿದ ನಂತರ ನನ್ನ ಶೂಟಿಂಗ್‌ನಲ್ಲಿ ಅನೇಕ ಬದಲಾವಣೆಗಳಾದವು. ಮುಖ್ಯವಾಗಿ ಶೂಟಿಂಗ್ ಜಾಗಕ್ಕೆ ನನ್ನ ಪತ್ನಿ ಗೀತಾ ಮತ್ತು ಮಗಳು ನಿರುಪಮಾ ಬರಲು ಶುರುಮಾಡಿದರು. ನಾವೆಲ್ಲ ಮನೆಯಲ್ಲಿ ಆಕೆಯನ್ನು ಮುದ್ದಿನಿಂದ ನಿಷ್ಮಲಾ ಎಂದು ಕರೆಯುತ್ತಿದ್ದೆವು. ಯಾಕೆಂದರೆ ಅವರಿಗೆ ನನ್ನ ಆರೋಗ್ಯದ ಬಗ್ಗೆ ನನಗಿಂತಲೂ ಹೆಚ್ಚು ಕಾಳಜಿ ಇತ್ತು. ಹಾಗೆ ನೋಡಿದರೆ ನಾನು 'ಶಿವಮೆಚ್ಚಿದ ಕಣ್ಣಪ್ಪ' ಚಿತ್ರದಲ್ಲಿ ನಟಿಸುತ್ತಿದ್ದಾಗ ನನ್ನ ಮಗಳಿಗೆ ಇನ್ನೂ ಐದೂವರೆ ತಿಂಗಳು. ಆಗ ಆಕೆ ಒಂದು ಮೂಲೆಯಲ್ಲಿ ತನ್ನ ಅಮ್ಮನ ತೊಡೆಯಲ್ಲಿ ಮಲಗಿ, ಕಣ್ಣು ಪಿಳಿಪಿಳಿ ಬಿಡುತ್ತಾ ತಾತ ಮತ್ತು ನನ್ನ ನಟನೆಯನ್ನು ಗಮನಿಸುತ್ತಿದ್ದ ಕ್ಷಣಗಳು ನನಗಿನ್ನೂ ನೆನಪಿದೆ. ಆಗ ತಾತ ಅವಳನ್ನು ಹೇಗೆ ಮುದ್ದಾಡುತ್ತಿದ್ದರು ಗೊತ್ತಾ? ಚಿತ್ರ ಜೀವನ ಮತ್ತು ನಿಜಜೀವನ ಅಲ್ಲಿಂದಾಚೆಗೆ ಚಿತ್ರೀಕರಣದಲ್ಲೇ ಒಟ್ಟೊಟ್ಟಿಗೆ ಸಾಗಲಾರಂಭಿಸಿತು.

(ಮುಂದುವರೆಯುತ್ತದೆ)

R.B.P. LANKESH, Kannada Weekly Price Rs. 10/- 24-1-2007 RNI No. KARKAN2005/14648 Regd.No.KA/BG(S)/2036/20



'ಪ್ರೀತಿ ಏಕೆ...' ಚಿತ್ರದಲ್ಲಿ ರಕ್ಷಿತಾ



'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರದಲ್ಲಿ ರಕ್ಷಿತಾ ನಟಿಸುತ್ತಾಳೆ ಎಂದು ನಿರ್ದೇಶಕ ಕಂ ನಾಯಕನಟ ಕಂ ರಕ್ಷಿತಾಳ ಭಾವೀ ಪತಿ ಪ್ರೇಮ್ ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲ, ಇದು ಆಕೆ ನಟಿಸಲಿರುವ ಕೊನೆ ಚಿತ್ರ ಎಂದೂ ಅನೌನ್ಸ್ ಮಾಡಿದ್ದಾರೆ.

ಹಾಗಾದರೆ "ಈ ಚಿತ್ರ ನಿಮ್ಮಿಬ್ಬರ ಪ್ರೀತಿಯ ಕತೆಯೇ?" ಎಂದು ಕೇಳಿದರೆ ಪ್ರೇಮ್ ಸುಮ್‌ಸುಮ್ನೆ ನಗುತ್ತಾರೆ; "ಅವೆಲ್ಲವನ್ನೂ ನೀವು ಚಿತ್ರ ನೋಡಿದ ಮೇಲೆ ಹೇಗೆ ಬೇಕಾದರೂ ವ್ಯಾಖ್ಯಾನಿಸಿಕೊಳ್ಳಬಹುದು" ಎಂದು ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡುತ್ತಾರೆ.

"ಮಲ್ಲಿಕಾ ಶೆರಾವತ್ ಜೊತೆ ಪ್ರೇಕ್ಷಕರು ನಿಮ್ಮನ್ನು ಹೋಲಿಸಿದರೆ ನಿಮಗೆ ಏನನ್ನಿಸುತ್ತದೆ?" ಎಂದು ರಕ್ಷಿತಾಳನ್ನು ಕೇಳಿದರೆ ಆಕೆ ಏನನ್ನೂ ಹೇಳದೇ ಮೌನ ವಹಿಸುತ್ತಾಳೆ. "ನಿರ್ದೇಶಕರು ಏನೂ ಹೇಳಬಾರದೆಂದು ಹೇಳಿದ್ದಾರೆ" ಎಂದಷ್ಟೇ ಸದ್ಯಕ್ಕೆ ಅವಳ ಬಾಯಿಂದ ಬರುವ ಉತ್ತರ.

ಅಂದಹಾಗೆ ಕನ್ನಡ ಚಿತ್ರರಂಗದಲ್ಲಿ ಬಹುತೇಕ ತಾರಾ ಪತ್ನಿಯರು ಚಿತ್ರಗಳಲ್ಲಿ ನಟಿಸುವಾಗ ತಮ್ಮ ಪತಿಯ ಪ್ರೇಮದ ಸೆಳೆತಕ್ಕೆ ಸಿಲುಕಿ ಮದುವೆಯಾದವರು. ಆದರೆ ರಕ್ಷಿತಾ ಮತ್ತು ಪ್ರೇಮ್ ಲವ್ ಸ್ಟೋರಿ ವಿಭಿನ್ನವಾದದ್ದು. ಇವರಿಬ್ಬರು ಪ್ರೀತಿಸಿದ ನಂತರ ಈಗ ಜೊತೆಯಾಗಿ ನಟಿಸುತ್ತಿದ್ದಾರೆ. ಇದರರ್ಥ, ಇವರಿಬ್ಬರ ಪಾಲಿಗೆ ಮೊದಲು ರಿಯಲ್ ಲೈಫ್ ಆನಂತರ ರೀಲ್ ಲೈಫ್!

ಬರಲಿದ್ದಾನೆ ಜೋಗಿ-2



ಕಳೆದ ವರ್ಷ ಬಾಕ್ಸಾಫೀಸಿನಲ್ಲಿ ದಾಖಲೆಗಳನ್ನು ಮುರಿದ 'ಜೋಗಿ' ಚಿತ್ರ ಈ ವರ್ಷ 'ಜೋಗಿ- ಭಾಗ 2' ರೂಪದಲ್ಲಿ ಮತ್ತೆ ತೆರೆಗೆ ಬರಲಿದೆ. ಇದರ ಕತೆಯನ್ನು ಬರೆಯುತ್ತಿರುವ ನಿರ್ದೇಶಕ ಪ್ರೇಮ್ ಎರಡನೆ ಜೋಗಿಯಲ್ಲೂ ತಾಯಿ ಸೆಂಟಿಮೆಂಟ್‌ಗೆ ಒತ್ತು ಕೊಟ್ಟು ಮತ್ತೆ ಶಿವರಾಜ್‌ಕುಮಾರ್ ಮತ್ತು ಅರುಂಧತಿ ನಾಗ್ ಅವರನ್ನೇ ಆಯ್ಕೆಮಾಡಿಕೊಂಡಿದ್ದಾರೆ.


"ಆದರೆ 'ಜೋಗಿ'ಯ ಕ್ಲೈಮ್ಯಾಕ್ಸ್‌ನಲ್ಲಿ ಸತ್ತುಹೋದ ತಾಯಿ ಪಾತ್ರದ ಅರುಂಧತಿ ನಾಗ್ ಅವರಿಗೆ ಭಾಗ-2ರಲ್ಲಿ ಹೇಗೆ ಪುನರ್ಜನ್ಮ ನೀಡುತ್ತೀರಿ?" ಎಂದು ಪ್ರೇಮ್ ರವರನ್ನು ಕೇಳಿದರೆ "ಅದೇ 'ಜೋಗಿ ಭಾಗ-2'ರ ಹೈಲೈಟ್ ಮತ್ತು ಸಸ್ಪೆನ್ಸ್" ಎನ್ನುತ್ತಾರೆ.



ಹಿಂದಿಯಲ್ಲಿ 'ಧೂಮ್-2' ಬಾಕ್ಸಾಫೀಸನ್ನು ಕೊಳ್ಳೆಹೊಡೆಯುತ್ತಿರುವ ಈ ಸಂದರ್ಭದಲ್ಲಿ ಬಹುಶಃ ಜೋಗಿ ಭಾಗ-2ರ ಕಲ್ಪನೆ ಪ್ರೇಮ್‌ಗೆ ಹೊಳೆದಿರಬಹುದೋ ಏನೋ?

ಕನ್ನಡದಲ್ಲಿ ಈತನಕ ಒಟ್ಟು ಮೂರು ಚಿತ್ರಗಳು ಎರಡನೇ ಭಾಗದ ರೂಪದಲ್ಲಿ ತೆರೆಕಂಡಿವೆ. 'ಗಂಧದ ಗುಡಿ ಭಾಗ-2', 'ಸಾಂಗ್ಲಿಯಾನಾ ಭಾಗ-2' ಮತ್ತು 'ಆಪರೇಷನ್ ಅಂತ ಭಾಗ-2'. ಈ ಮೂರರಲ್ಲಿ ಗೆದ್ದಿದ್ದು ಸಾಂಗ್ಲಿಯಾನಾ ಮಾತ್ರ. ಆದ್ದರಿಂದ ಎರಡನೆ 'ಜೋಗಿ' ಮತ್ತೆ ಬಾಕ್ಸ್ ಆಫೀಸಿನಲ್ಲಿ 'ಹೊಡಿ ಮಗ, ಹೊಡಿ ಮಗ' ಆಗುತ್ತಾನೋ ಅಥವಾ ಬರೀ 'ಬಡ್ಡಿ ಮಗ' ಆಗುತ್ತಾನೋ ಎಂಬ ಪ್ರಶ್ನೆಯಂತೂ ಇದ್ದೇ ಇದೆ.

ಸಾಯಿ ಬದಲಾಗಿದ್ದಾರಾ



ಹತ್ತು ವರ್ಷಗಳ ಹಿಂದೆ 'ಪೊಲೀಸ್ ಸ್ಟೋರಿ' ಎಂಬ ಚಿತ್ರ ಗಾಂಧಿನಗರದಲ್ಲಿ ಹೊಸ ಅಧ್ಯಾಯವನ್ನು ಸೃಷ್ಟಿಸಿತ್ತು. ಈ ಚಿತ್ರದ ಮುಖಾಂತರ ತೆಲುಗಿನ ಸಾಯಿಕುಮಾರ್ ಕನ್ನಡದಲ್ಲಿ ನಾಯಕನಟನಾಗಿ ಎಸ್ಟಾಬ್ಲಿಷ್ ಆದರು. ಅಲ್ಲಿಯತನಕ ಪರಭಾಷಾ ನಾಯಕರನ್ನು ಕನ್ನಡದ ಪ್ರೇಕ್ಷಕರು ಸ್ವೀಕರಿಸಿದ್ದೇ ಇಲ್ಲ. ಅಷ್ಟೇ ಅಲ್ಲ, ಈ ಚಿತ್ರದ ಯಶಸ್ಸಿನ ನಂತರ ಅನೇಕ ಕಳ್ಳ-ಪೊಲೀಸ್ ಚಿತ್ರಗಳು ಬಂದುಹೋದವು.

ಕಳೆದ ಹಲವು ವರ್ಷಗಳಿಂದ ಅಜ್ಞಾತವಾಸದಲ್ಲಿರುವ ಸಾಯಿಕುಮಾರ್ 'ಪೊಲೀಸ್ ಸ್ಟೋರಿ ಭಾಗ-2'ರ ಮುಖಾಂತರ ಮತ್ತೆ ಜೀವ ಪಡೆಯಲು ಯತ್ನಿಸುತ್ತಿದ್ದಾರೆ. ಇದೇ ಸಾಯಿಕುಮಾರ್, ಥ್ರಿಲ್ಲರ್ ಮ... ಮತ್ತು ಶೋಭರಾಜ್ ಈ ಭಾಗ ಎರಡರಲ್ಲೂ ಬೇಕಾದಷ್ಟು ಅರ್ಭಟಿಸಿದ್ದಾರೆ. ಆದರೆ ... ಹತ್ತು ವರ್ಷಗಳಲ್ಲಿ ತಾಂತ್ರಿಕತೆಯಿಂದ ಹಿಡಿದು ಜನರ ಅಭಿರುಚಿಯವರೆಗೂ ಸಾ... ಬದಲಾವಣೆಗಳಾಗಿವೆ. ಇಂತಹ ಸಂದರ್ಭದಲ್ಲಿ ಸಾಯಿಕುಮಾರ್ ಕೂಡ ಬದಲಾಗಿದ್ದಾ... ಎಂಬುದು ನಮ್ಮ ಪ್ರಶ್ನೆ ಅವರು ಈಗಲೂ ತೆಲುಗು-ಕನ್ನಡ ಉಚ್ಚರಿಸುತ್ತಾ, ಜೊ... ಮಾತಾಡುವುದನ್ನೇ ನಟನೆ ಎಂದುಕೊಂಡಿದ್ದಾರೋ? ಹಾಗಿದ್ದರೆ ಕನ್ನಡ ಪ್ರೇಕ್ಷಕರನ್ನು ತಿರುಪತಿ ವೆಂಕಟರಮಣನೇ ರಕ್ಷಿಸಬೇಕು!

'ರಾಜೀವ್'ನಿಂದ ಬಿಡುಗಡೆ, 'ತಾಯಿ...'ಯ ಪವಾಡ!



ಹೊಸವರುಷಕ್ಕೆ 'ಮುಂಗಾರು ಮಳೆ' ಹೊಸ ನಾಂದಿಯನ್ನೇನೋ ಹಾಡಿತ್ತು. ಆದರೆ ಎರಡನೆ ವಾರಕ್ಕೆ ರವಿ ಶ್ರೀವತ್ಸ ಮತ್ತು ಎಸ್. ನಾರಾಯಣ್ ಎಂಬ ಇಬ್ಬರು ತಲೆಹರಟೆ ನಿರ್ದೇಶಕರು ಅಪಸ್ವರ ಸೃಷ್ಟಿಸಿದ್ದಾರೆ. ಈ ವಾರ ಬಿಡುಗಡೆಯಾದ ಶ್ರೀವತ್ಸ ನಿರ್ದೇಶನದ 'ರಾಜೀವ್' ಎಂಬ ಚಿತ್ರ ಅದೆಷ್ಟು ಕೆಟ್ಟದಾಗಿದೆ ಎಂದರೆ ವಿರಾಮಕ್ಕೆ ಬಾಗಿಲು ತೆರೆದದ್ದನ್ನೇ ಬಿಡುಗಡೆ ಎಂದು ಭಾವಿಸಿದ ಪ್ರೇಕ್ಷಕರು ಚಿತ್ರಮಂದಿರದಿಂದ ಹೊರಕ್ಕೆ ದೌಡಾಯಿಸಿದ್ದಾರೆ.

ಇನ್ನು ನಾರಾಯಣನ 'ತಾಯಿಯ ಮಡಿಲು' ಎಷ್ಟು ಅದ್ಭುತವಾಗಿದೆ ಎಂದರೆ, ಚಿತ್ರದ ಕ್ಲೈಮ್ಯಾಕ್ಸಿನಲ್ಲಿ ವೈದ್ಯರು 'ಗಾನ್ ಕೇಸ್' ಎಂದು ಕೈಚೆಲ್ಲಿದ ನಂತರವೂ ತಾಯಿಯ ಕಣ್ಣೀರು ಬಿದ್ದ ಕ್ಷಣ ಹೆಣಕ್ಕೆ ಮತ್ತೆ ಜೀವ ಬರುತ್ತೆ. ಅಲ್ಲಿಯವರೆಗೂ ಚಿತ್ರವನ್ನು ಎಂಜಾಯ್ ಮಾಡುವ ಜನ ಇದನ್ನು ನೋಡಿ "ಬಂಡಲ್ ಬಿಡೋದಕ್ಕೂ ಒಂದು ಮಿತಿ ಬೇಡವೆ" ಎಂದು ತಲೆ ಚಚ್ಚಿಕೊಳ್ಳುತ್ತಾ ಹೊರನಡೆಯುತ್ತಿದ್ದಾರೆ.

ಶ್ರೀವತ್ಸನಿಗೆ ಪತ್ರಕರ್ತರ ಧಿಕ್ಕಾರ!



'ಗಂಡ ಹೆಂಡತಿ' ಎಂಬ ಅಶ್ಲೀಲ ಸಿನಿಮಾದಲ್ಲಿ ನಟಿಯನ್ನು ಕನಿಷ್ಠ ಬಟ್ಟೆಯಲ್ಲಿ ತೋರಿಸಿದ್ದ ಶ್ರೀವತ್ಸ ಎಂಬ ನಿರ್ದೇಶಕನಿಗೆ ಬುದ್ಧಿ ಬಂದಂತಿಲ್ಲ, ಯಾಕೆಂದರೆ ಶ್ರೀವತ್ಸನಿಂದ ಇಂತಹ ಅಭಿರುಚಿಹೀನ ಚಿತ್ರಗಳನ್ನು ನಿರೀಕ್ಷಿಸಿರಲಿಲ್ಲ ಎಂದು ಬರೆದಿದ್ದ ನಮ್ಮ ಹಿರಿಯ ವರದಿಗಾರ ಸದಾಶಿವ ಶೆಣೈಗೆ ಫೋನ್ ಮೇಲೆ ಫೋನ್ ಮಾಡಿ ತನ್ನ ನಿಜವಾದ ಸಂಸ್ಕೃತಿ 'ಅ...ನ್', 'ಅ...ನ್' ಎಂಬುದನ್ನು ತೋರಿಸಿದ್ದ. ಆಗ ಶ್ರೀವತ್ಸನ ವಿರುದ್ಧ ಸಿನಿಮಾ ಪತ್ರಕರ್ತರೆಲ್ಲ ಒಗ್ಗೂಡಿ, ಫಿಲಂ ಚೇಂಬರ್ ಮುಂದೆ ಆತ ಕ್ಷಮೆ ಕೇಳುವಂತೆ ಮಾಡಿದ್ದರು.

ಆದರೆ ಹೀಗೆ ಒಳ್ಳೆಯ ಬುದ್ಧಿ ಹೇಳಿದ ಪತ್ರಕರ್ತರನ್ನೇ ತನ್ನ ಹೊಸ ಚಿತ್ರ 'ರಾಜೀವ್' ನಲ್ಲಿ ಶ್ರೀವತ್ಸ ಕೀಳಾಗಿ ತೋರಿಸಿದ್ದಾನೆ. ಅದನ್ನು ನೋಡಿ ಪತ್ರಕರ್ತರು ಎಷ್ಟು ಕುಪಿತರಾಗಿದ್ದಾರೆಂದರೆ, ಆತನ ಮೂತಿಗೆ ತಮ್ಮ ಅಭಿಪ್ರಾಯವನ್ನು ಹೇಳಿ, ಚಿತ್ರ ಬಿಡುಗಡೆಯ ಸಂತೋಷಕೂಟಕ್ಕೂ ಹಾಜರಾಗದೆ ತಮ್ಮ ಕೋಪವನ್ನು ತೋರಿಸಿದ್ದಾರೆ.

ಶ್ರೀವತ್ಸ ಎಂಬ ಈ ನಿರ್ದೇಶಕನಿಗೆ ಬುದ್ಧಿ ಬರುವುದೆಂದು?

ಬಂಧನದಲ್ಲಿ ಶಿಲ್ಪಾಶೆ...



ಶಿಲ್ಪಾ ಶೆಟ್ಟಿ ಎಂಬ ನಟಿಗೆ ಈಗ ಬೇಡಿಕೆ ಎಂಬುದಿದದ್ದರೆ ಅದು ವಿಜಯ ಮಲ್ಯನ ಕಿಂಗ್‌ಫಿಷರ್ ವಿಮಾನಕ್ಕೆ ಸಂಬಂಧಿಸಿದ ಪಾರ್ಟಿಗಳಲ್ಲಿ ಮಾತ್ರ. ಆದರೆ ಆ ಪಾರ್ಟಿಗಳಿಂದಾಗಿ ಶಿಲ್ಪಾಳಿಗೆ ಯಾವ ಆದಾಯವೂ ಇಲ್ಲ, ಪ್ರಚಾರವೂ ಇಲ್ಲ. ಅದಕ್ಕೇ ಇರಬೇಕು, ಆಕೆ ಈಗ 'ಬಿಗ್ ಬ್ರದರ್' ಎಂಬ ಇಂಗ್ಲೆಂಡಿನ ಟಿವಿ ಕಾರ್ಯಕ್ರಮಕ್ಕಾಗಿ ಸ್ವಯಂ ಬಂಧನಕ್ಕೊಳಗಾಗಿದ್ದಾಳೆ. ಈ ಬಂಧನದಿಂದಾಗಿ ಆಕೆಗೆ ಕನಿಷ್ಠ ಮೂರು ಕೋಟಿ ರೂಪಾಯಿಗಳು, ಒಂದು ತಿಂಗಳಕಾಲ ನಿರಂತರ ಪ್ರಚಾರವೂ ಸಿಗುತ್ತದೆ.

ಈಗ ಜನಪ್ರಿಯವಾಗಿರುವ 'ರಿಯಾಲಿಟಿ' ಶೋಗಳಲ್ಲಿ ಈ 'ಬಿಗ್ ಬ್ರದರ್' ಕಾರ್ಯಕ್ರಮಕ್ಕೆ ಖ್ಯಾತಿ-ಕುಖ್ಯಾತಿ ಎರಡೂ ಇದೆ. ಏಕೆಂದರೆ ಇದರಲ್ಲಿ ಭಾಗವಹಿಸುವವರನ್ನು ಅತೀವ ಮುಜುಗರಕ್ಕೆ ಒಳಪಡಿಸುವ ಪ್ರಶ್ನೆಗಳನ್ನು ಕೇಳುತ್ತಾರಲ್ಲದೆ, ಊಸಿದ್ದನ್ನೂ, ಸೀನಿದ್ದನ್ನೂ ಪ್ರಸಾರ ಮಾಡಿ ನಗೆ ಪಾಟಲನ್ನಾಗಿಸುತ್ತಾರೆ.

ಈ ಕಾರ್ಯಕ್ರಮದ ವಿಶೇಷತೆಯೆಂದರೆ, 25 ದಿನಗಳ ಕಾಲ ಸುಮಾರು ಹತ್ತು ಜನರನ್ನು ಒಂದು ಮನೆಯಲ್ಲಿ ಬಂಧಿಸಿ, ಪ್ರತಿ ಕ್ಷಣ-ಮಲಗಿದ್ದಾಗಲೂ ಕೂಡ- ಅವರೆಲ್ಲರ ಚಲನವಲನಗಳನ್ನು ಕ್ಯಾಮೆರಾಗಳಲ್ಲಿ ಸೆರೆ ಹಿಡಿಯುತ್ತಾರೆ. ಆಮೇಲೆ ಅವುಗಳಲ್ಲಿ ಯಾವುದು ಕುತೂಹಲಕಾರಿಯಾಗಿವೆಯೋ, ಯಾವುದು ಮುಜುಗರ ಹುಟ್ಟಿಸುತ್ತವೆಯೋ ಅವನ್ನೇ ಪ್ರಸಾರ ಮಾಡುತ್ತಾರೆ. ಕೆಲ ದಿನಗಳ ನಂತರ, ಇಂತಹ ಬಂಧನಕ್ಕೆ ಒಳಗಾಗಿರುವವರೇ ಮತ ಚಲಾಯಿಸಿ ಒಬ್ಬೊಬ್ಬರನ್ನಾಗಿ ಹೊರದಬ್ಬುತ್ತಾರೆ. ಕೊನೆಗೆ ಯಾರು ಉಳಿದಿರುತ್ತಾರೋ ಅವರಿಗೆ ಬಹುಮಾನ ನೀಡಲಾಗುತ್ತದೆ.

ಈ ಕಾರ್ಯಕ್ರಮದಲ್ಲಿ ಭಾಗವಹಿಸಲೆಂದು ಈಗಾಗಲೇ ಶಿಲ್ಪಾಶೆಟ್ಟಿಗೆ ಮೂರು ಕೋಟಿ ರೂಪಾಯಿಗಳನ್ನು ನೀಡಲಾಗಿದೆಯಂತೆ. ಅಷ್ಟೇ ಅಲ್ಲದೆ, ಈ ಕಾರ್ಯಕ್ರಮದಿಂದಾಗಿ ತನಗೆ ಇಂಗ್ಲಿಷ್ ಚಿತ್ರಗಳಲ್ಲಿ ಪಾತ್ರ ಸಿಗಬಹುದೆಂಬ ಕನಸಿನಲ್ಲಿದ್ದಾಳೆ ಮುಂಬೈನ ಈ ಬೆಡಗಿ.

ಆದರೆ ಅವಳ ದುರಾದೃಷ್ಟ ನೋಡಿ. ಈ ಕಾರ್ಯಕ್ರಮ ಶುರುವಾದ ಎರಡೇ ದಿನಗಳಲ್ಲಿ ಖ್ಯಾತ ಸಿನಿಮಾ ನಿರ್ದೇಶಕ ಕೆನ್ ರಸ್ಸಲ್ ಎಂಬಾತ 'ಈ ಬಂಧನ ನನಗೆ ಬೇಡ' ಎಂದು ಕಾಲು ಕಿತ್ತಿದ್ದಾನೆ. ಕೆನ್ ರಸ್ಸಲ್ ಮೂಲಕ ತಾನು ಪಾತ್ರ ಗಿಟ್ಟಿಸಬಹುದು ಎಂದು ಲೆಕ್ಕ ಹಾಕಿದ್ದ ಶಿಲ್ಪಾ ಭಾರೀ ನಿರಾಸೆಗೆ ಒಳಗಾಗಿದ್ದಾಳೆ. ಅದಷ್ಟೇ ಅಲ್ಲದೆ, ವೇಷಭೂಷಣ, ವೈಯ್ಯಾರಗಳನ್ನು ನೋಡಿ ಬಂಧನದಲ್ಲಿರುವ ಇತರರಿಗೆ ಎಷ್ಟು ಜಿಗುಪ್ಸೆ ಆಗಿದೆ ಎಂದರೆ ಅವರೆಲ್ಲಾ ಸದ್ಯದಲ್ಲೇ ಶಿಲ್ಪಾಳನ್ನು ಹೊರದಬ್ಬಬಹುದು.

ಅದೆಲ್ಲ ಏನೇ ಆಗಲಿ, ಇಲ್ಲಿ ಒಂದೇ ಒಂದು ಅವಕಾಶವೂ ಸಿಗದಿರುವ ಶಿಲ್ಪಾ ಶೆಟ್ಟಿ ಸದ್ಯಕ್ಕೆ ಇಂಗ್ಲೆಂಡಿನಲ್ಲಿರುವ ಅನಿವಾಸಿ ಭಾರತೀಯರಿಗೆ ಪ್ರತಿನಿತ್ಯ ದರ್ಶನ ನೀಡುತ್ತಿದ್ದಾಳಲ್ಲದೆ, ಅಲ್ಲಿನ ಬ್ರಿಟಿಷರ ಅಪಹಾಸ್ಯಕ್ಕೂ ಗುರಿಯಾಗಿದ್ದಾಳೆ. ಜಗತ್ತಿನಲ್ಲಿ ಇದನ್ನೂ ರಂಜನೆ ಎಂದು ಕರೆಯುವವರಿರುವುದೇ ವಿಚಿತ್ರ ಅಲ್ಲವೇ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4. Phone : ...
Fax : 26604536, E-mail :lankesh70@rediffmail.com, Printed at ...